

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 23 ಗುರುವಾರ 2023

ಸಂಪುಟ: 43 | ಸಂಚಿಕೆ: 305 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



'ಆಯಮ್ಮ ಕ್ಯಾನ್ಸರ್ ಇದ್ದ ಹಾಗೆ... ಹುಷಾರ್...!'

● ಮೈಸೂರಿನ ಸಾಮಾಜಿಕ ಕಾರ್ಯಕರ್ತ ಗಂಗರಾಜ್‌ಗೆ ರೋಹಿಣಿ ವಿಷಯದಲ್ಲಿ ರೂಪಾ ಎಚ್ಚರಿಕೆ ● ಸಂಭಾಷಣೆಯ 25 ನಿಮಿಷದ ಆಡಿಯೋ ವೈರಲ್

■ ಪುಟ–2

ಕಾಯಕ ಶರಣರು ಸಮಾನತೆಯ ಹರಿಕಾರರು

■ ಪುಟ–3



ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ

ಮಾ.11ರಂದು ಪ್ರಧಾನಿ ಮೋದಿ ಉದ್ಘಾಟನೆ



ಮದ್ದೂರಲ್ಲಿ ಅದ್ದೂರಿ ಉದ್ಘಾಟನಾ ಸಮಾರಂಭಕ್ಕೆ ಸಿದ್ಧತೆ ಆರಂಭ: ಡಾ. ಅಶ್ವತ್ಥನಾರಾಯಣ



ಬೆಂಗಳೂರು, ಫೆ. 22 (ಕೆಎಂಶಿ)– ವಿಶ್ವ ದರ್ಜೆ ಗುಣಮಟ್ಟದ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿಯನ್ನು ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 11 ರಂದು ರಾಷ್ಟ್ರಕ್ಕೆ ಸಮರ್ಪಣೆ ಮಾಡಲಿದ್ದಾರೆ.

ಸುದ್ದಿಗಾರರಿಗೆ ಈ ವಿಷಯ ತಿಳಿಸಿದ ಮಾಹಿತಿ ತಂತ್ರಜ್ಞಾನ ಸಚಿವ ಡಾ. ಅಶ್ವತ್ಥ್ ನಾರಾಯಣ, ಮಂಡ್ಯ ಜಿಲ್ಲೆ ಮದ್ದೂರು ತಾಲೂಕಿನಲ್ಲಿ ಏರ್ಪಡಿಸಲಿರುವ ಬೃಹತ್ ಸಮಾವೇಶದಲ್ಲಿ ಈ ಹೆದ್ದಾರಿ ನಾಡಿಗೆ ಸಮರ್ಪಣೆಯಾಗಲಿದೆ.

ಪ್ರಧಾನಿ ಮೋದಿ ಅವರು ಮಾರ್ಚ್ 11 ರಿಂದ ಎರಡು ದಿನಗಳ ಕಾಲ ರಾಜ್ಯ ಪ್ರವಾಸ ಕೈಗೊಳ್ಳುತ್ತಿದ್ದು, ಅಂದು ರಸ್ತೆಯನ್ನು ರಾಷ್ಟ್ರಕ್ಕೆ ಸಮರ್ಪಣೆ ಮಾಡುವುದರ ಜೊತೆಗೆ ರಾಮನಗರದಲ್ಲಿ ಆರಂಭಗೊಳ್ಳಲಿರುವ ವೈದ್ಯಕೀಯ ವಿಶ್ವವಿದ್ಯಾಲಯ ಹಾಗೂ ಹೆಲ್ತ್‌ಸಿಟಿ ಕ್ಯಾಂಪಸ್‌ಗೆ ಅಡಿಗಲ್ಲು ನೆರವೇರಿಸಲಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸುವ ಸಂಬಂಧ ಪ್ರಧಾನಿಯವರ ಕಾರ್ಯಾಲಯದಿಂದ ಮಾಹಿತಿ ರವಾನೆಯಾಗಿದ್ದು, ಮೈಸೂರು–ಬೆಂಗಳೂರು ಮಧ್ಯೆ ಇರುವ ಮದ್ದೂರಿನಲ್ಲಿ ಕಾರ್ಯಕ್ರಮ ಆಯೋಜಿಸಲು ಸರ್ಕಾರ ಮತ್ತು ಪಕ್ಷ ತೀರ್ಮಾನಿಸಿದೆ.

ಸಾರ್ವಜನಿಕ ಕಾರ್ಯಕ್ರಮ ಯಾವ ರೀತಿ ಇರಬೇಕೆಂಬುದರ ಬಗ್ಗೆ ಪಕ್ಷ ಮತ್ತು ಸಂಘಟಕರು ರೂಪುರೇಷೆ ಸಿದ್ಧಪಡಿಸುತ್ತಿದ್ದಾರೆ. ಈಗಾಗಲೇ ನಿರ್ಮಲ್‌ಕುಮಾರ್ ಸುರಾನಾ ನೇತೃತ್ವದ ಪಡೆ ಮದ್ದೂರಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದೆ ಎಂದರು.

ಮಾಹಿತಿ ತಂತ್ರಜ್ಞಾನ ನಗರಿ ಮತ್ತು ಅರಮನೆ ನಗರಗಳ ನಡುವಿನ ಅಂತರ ಮತ್ತು ಸಮಯವನ್ನು ಈ ರಸ್ತೆ ಕಡಿಮೆ ಮಾಡಲಿದೆ. 90 ನಿಮಿಷಗಳಲ್ಲಿ ಒಂದು ನಗರದಿಂದ ಇನ್ನೊಂದು ನಗರಕ್ಕೆ ಸುಗಮವಾಗಿ ಪ್ರಯಾಣಿಸಬಹುದಾಗಿದೆ. ಈಗಾಗಲೇ ರಸ್ತೆಯ ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿದ್ದು, ▶ 9ನೇ ಪುಟಕ್ಕೆ

ಎಕ್ಸ್‌ಪ್ರೆಸ್‌ವೇಯಿಂದ ಸಮಯವೇನೋ ಉಳಿತಾಯವಾಯ್ತು ಆದರೆ ನಗರ ಪ್ರವೇಶ ಸ್ಥಳದಲ್ಲಿ ಸಂಚಾರ ದಟ್ಟಣೆ ಶುರುವಾಯ್ತು

ಮೈಸೂರು, ಫೆ22(ಆರ್‌ಕೆ)– ಮೈಸೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಈಗ ದಶಪಥ ವ್ಯವಸ್ಥಿತ ಸುವಿಶಾಲ ರಸ್ತೆಯಾಗಿ ಅಭಿವೃದ್ಧಿಯಾಗಿರುವುದರಿಂದ ಪ್ರಯಾಣದ ಅವಧಿ ಉಳಿತಾಯವಾದರೂ, ಮೈಸೂರು ನಗರ ಪ್ರವೇಶ ಸ್ಥಳವಾದ ಮಣಿಪಾಲ್ ಆಸ್ಪತ್ರೆ ಬಳಿಯ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ವಾಹನ ದಟ್ಟಣೆ ಹೊಸ ಸಮಸ್ಯೆ ತಂದೊಡ್ಡಿದೆ. ರಜಾ ದಿನಗಳು, ವಾರಾಂತ್ಯ ಹಾಗೂ ಪ್ರಮುಖ ಸಮಯದಲ್ಲಿ ಈ ಜಂಕ್ಷನ್ ಬಳಿ ಭಾರೀ ಪ್ರಮಾಣದ ವಾಹನ ದಟ್ಟಣೆಯಿಂದಾಗಿ ಟ್ರಾಫಿಕ್ ಜಾಮ್ ▶ 9ನೇ ಪುಟಕ್ಕೆ



ಮತ್ತೆ ನಾನು ವಿಧಾನಸಭೆ ಪ್ರವೇಶಿಸಲು ಸಾಧ್ಯವಿಲ್ಲ: ಯಡಿಯೂರಪ್ಪ

ವಿದಾಯದ ಭಾಷಣ

ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ಭಾವುಕರಾದ ಬಿಎಸ್‌ವೈ




ಬೆಂಗಳೂರು, ಫೆ. 22 (ಕೆಎಂಶಿ)– ರಾಜ್ಯ ವಿಧಾನಸಭೆಗೆ ಮತ್ತೆ ಪ್ರವೇಶಿಸಲು ಸಾಧ್ಯವಿಲ್ಲ ಎಂಬುದು ನಿರ್ಧಾರಿತವಾದ ಹಿನ್ನಲೆಯಲ್ಲಿ ಮಾಜಿ ಮುಖ್ಯಮಂತ್ರಿ ಹಾಗೂ ಬಿಜೆಪಿ ಧುರೀಣ ಬಿ.ಎಸ್. ಯಡಿಯೂರಪ್ಪ ಅತೀವ ಭಾವುಕರಾದ ಘಟನೆ ವಿಧಾನಸಭೆಯಲ್ಲಿಂದು ಜರುಗಿತು.

ಚುನಾವಣಾ ರಾಜಕೀಯಕ್ಕೆ ನಿವೃತ್ತಿ ಘೋಷಣೆ ಮಾಡಿದ್ದೇನೆ. ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆ ಮಾಡುವುದಿಲ್ಲ. ಹಾಗಾಗಿ ಮತ್ತೆ ನಾನು ವಿಧಾನಸಭೆ ಪ್ರವೇಶಿಸಲು ಸಾಧ್ಯವಿಲ್ಲ ಎಂದಾದ ಮೇಲೆ ಇದೆ ನನ್ನ ಕೊನೆಯ ಭಾಷಣವಾಗಿರುತ್ತದೆ. ಬಜೆಟ್ ಮೇಲಿನ ಚರ್ಚೆಯ ಸಂದರ್ಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಹಾಗೆಂದ ಮಾತ್ರಕ್ಕೆ ನನ್ನನ್ನು ಬಿಜೆಪಿ ಕಡೆಗಣಿಸಿಲ್ಲ. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಎಲ್ಲ ರಾಷ್ಟ್ರೀಯ ನಾಯಕರು ಮತ್ತು ರಾಜ್ಯ ನಾಯಕರು ನನ್ನ ಬೆಂಬಲಕ್ಕೆ ಸದಾ ನಿಂತು, ನಾಲ್ಕು ಬಾರಿ ಮುಖ್ಯಮಂತ್ರಿಯಾಗಲು ಅವಕಾಶ ಮಾಡಿಕೊಟ್ಟಿದ್ದಾರೆ. ನನಗೆ ದೊರೆತ ಅಧಿಕಾರವನ್ನು ಎಂದೂ ದುರುಪಯೋಗ ಮಾಡಿಕೊಂಡಿಲ್ಲ. ಪಕ್ಷ ಮತ್ತು ಜನರ ಮನಸ್ಸು ಗೆಲ್ಲುವಂತೆ ನನ್ನ ಆಡಳಿತದಲ್ಲಿ ಕಾರ್ಯನಿರ್ವಹಿಸಿದ್ದೇನೆ. ಪಕ್ಷ ಕೊಟ್ಟ ಅವಕಾಶದಿಂದಾಗಿ ▶ 9ನೇ ಪುಟಕ್ಕೆ

ಬಿಜೆಪಿ ಅಧಿಕಾರಕ್ಕೆ ತರಲು ಅಮಿತ್ ಷಾ ಪಣ: ಇಂದು ಮತ್ತೆ ರಾಜ್ಯ ಪ್ರವಾಸ

- ಶಾಸಕರು, ಸಂಸದರು, ಮುಖಂಡರಿಗೆ ಟಫ್ ಟಾಸ್ಕ್ ನೀಡುವ ಸಾಧ್ಯತೆ
- ಅದರಲ್ಲೂ ಹಳೆ ಮೈಸೂರು ಭಾಗದಲ್ಲಿ ಅಧಿಕ ಸ್ಥಾನ ಗೆಲ್ಲುವ ಛಲ



ಬೆಂಗಳೂರು, ಫೆ 22(ಕೆಎಂಶಿ)– ಶತಾಯಗತಾಯ ರಾಜ್ಯದಲ್ಲಿ ಪಕ್ಷವನ್ನು ಅಧಿಕಾರಕ್ಕೆ ತರಲೇಬೇಕೆಂದು ಪಣ ತೊಟ್ಟಿರುವ ಕೇಂದ್ರ ಗೃಹ ಸಚಿವ ಅಮಿತ್ ಷಾ ಫೆಬ್ರವರಿ 23ರ ಗುರುವಾರ ಬೆಂಗಳೂರಿನಲ್ಲಿ ಪಕ್ಷದ ನಾಯಕರ ಮಹತ್ವದ ಸಭೆಯನ್ನು ನಡೆಸಲಿದ್ದಾರೆ. ಎರಡು ದಿನಗಳ ರಾಜ್ಯ ಪ್ರವಾಸಕ್ಕೆಂದು ನಾಳೆ ಆಗಮಿಸುತ್ತಿರುವ ಅಮಿತ್ ಷಾ ಅವರು,ಸಂಜೆ ಶಾಸಕರು,ಸಂಸದರು ಮತ್ತು ಪ್ರಮುಖ ನಾಯಕರ ಸಭೆ ನಡೆಸಲಿದ್ದಾರೆ. ಹಳೆ ಮೈಸೂರಿನಲ್ಲಿ ಕನಿಷ್ಟ ಮೂವತ್ತೈದು ಸೀಟುಗಳನ್ನು ಗೆಲ್ಲಬೇಕು ಎಂಬುದು ಅಮಿತ್ ಷಾ ಅವರ ಟಾರ್ಗೆಟ್ ಆಗಿದ್ದು, ಗುರುವಾರದ ಸಭೆಯಲ್ಲಿ ಈ ಕುರಿತು ಮಾರ್ಗದರ್ಶನ ಮಾಡಲಿದ್ದಾರೆ ಎಂದು ಮೂಲಗಳು ಹೇಳಿವೆ.

ಕರ್ನಾಟಕದಲ್ಲಿ ಪಕ್ಷದ ಶಕ್ತಿ ಹೆಚ್ಚಿದೆ ಎಂದು ಹೇಳಿಕೊಂಡರೂ ಹಳೆ ಮೈಸೂರು ಭಾಗದಲ್ಲಿ ಗಣನೀಯ ಸಂಖ್ಯೆಯ ಸೀಟುಗಳನ್ನು ಗೆಲ್ಲಲು ಆಗದಿರುವುದು ಅಮಿತ್ ಷಾ ಅವರ ಸದ್ಯದ ಚಿಂತೆಗೆ ಕಾರಣ. ಕಳೆದ ಬಾರಿ ▶ 9ನೇ ಪುಟಕ್ಕೆ





ಮೈಸೂರು ಮಿತ್ರ ಗುರುವಾರ 23 ಫೆಬ್ರವರಿ 2023

ಫೆ.26ರಂದು ಸಂತ ಶ್ರೀ ಸೇವಾಲಾಲ್ ಜಯಂತಿ



ಮೈಸೂರು,ಫೆ.22(ಪಿಎಂ)– ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಫೆ.26ರಂದು ಸಂತ ಶ್ರೀ ಸೇವಾಲಾಲ್ ಜಯಂತಿ ಹಮ್ಮಿಕೊಳ್ಳಲಾಗಿದೆ ಎಂದು ಬಂಜಾರ ಸೇವಾ ಸಂಘದ ಅಧ್ಯಕ್ಷ ಎಂ.ಸುಂದರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಬಂಜಾರ ಸಮುದಾಯದಲ್ಲಿ ಜನಿಸಿದ ಸಂತ ಶ್ರೀ ಸೇವಾಲಾಲ್ ಅವರು ಧಾರ್ಮಿಕ ನೆಲೆಯಲ್ಲಿ ಸಮಾಜದ ಸುಧಾರಣೆಗೆ ಮಹತ್ವದ ಕೊಡುಗೆ ನೀಡಿದ್ದಾರೆ. ಇವರು 17ನೇ ಶತಮಾನದಲ್ಲಿ ಸಮಾಜಕ್ಕೆ ಮಾರ್ಗದರ್ಶನ ನೀಡಿದ ಮಹಾನ್ ಸಂತರು. ಅವರ ಜಯಂತಿಯನ್ನು ಮೈಸೂರಿನ ಕಲಾಮಂದಿರದಲ್ಲಿ ಅಂದು ಬೆಳಗ್ಗೆ 11ಕ್ಕೆ ಹಮ್ಮಿಕೊಳ್ಳಲಾಗಿದೆ ಎಂದರು.

ಚಿತ್ರದುರ್ಗದ ಬಂಜಾರ ಗುರುಪೀಠದ ಪೀಠಾಧ್ಯಕ್ಷ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮೀಜಿಯವರ ಸಾನಿಧ್ಯದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಜಯಂತಿ ಉದ್ಘಾಟಿಸಲಿದ್ದಾರೆ. ಶಾಸಕ ಎಲ್.ನಾಗೇಂದ್ರ ಅಧ್ಯಕ್ಷತೆ ವಹಿಸಲಿದ್ದು, ಅತಿಥಿಗಳಾಗಿ ಮೇಯರ್ ಶಿವಕುಮಾರ್, ಸಂಸದರಾದ ವಿ.ಶ್ರೀನಿವಾಸ ಪ್ರಸಾದ್, ಪ್ರತಾಪ್ ಸಿಂಹ, ಸುಮಲತಾ ಅಂಬರೀಷ್ ಸೇರಿದಂತೆ ಶಾಸಕರು, ನಿಗಮ–ಮಂಡಳಿಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಮುಕ್ತ ವಿವಿ ಪ್ರಾಧ್ಯಾಪಕ ಡಾ.ಆರ್.ಸಂತೋಷ್‌ನಾಯಕ್ ಉಪನ್ಯಾಸ ನೀಡಲಿದ್ದು, ಇದಕ್ಕೂ ಮುನ್ನ ಬೆಳಗ್ಗೆ 10ಕ್ಕೆ ಗುಣಶ್ರೀ ಮತ್ತು ತಂಡದಿಂದ ಗೀತ ಗಾಯನ ನಡೆಯಲಿದೆ ಎಂದರು. ಸಂಘದ ಕಾರ್ಯದರ್ಶಿ ಚಂದ್ರನಾಯಕ್, ಕಾರ್ಯಕಾರಿ ಸಮಿತಿ ಸದಸ್ಯ ಹೇಮಂತ್‌ಕುಮಾರ್, ಸಮುದಾಯದ ಮುಖಂಡರಾದ ರವಿಕುಮಾರ್, ಅನಿಲ್, ಲಖನ್ ಗೋಷ್ಠಿಯಲ್ಲಿದ್ದರು.

ನಾಳೆ ಮೈಸೂರು ಚಲನಚಿತ್ರ ಕಲಾವಿದರು– ತಂತ್ರಜ್ಞರ ಒಕ್ಕೂಟದ ಉದ್ಘಾಟನೆ



ಮೈಸೂರು,ಫೆ.22(ಪಿಎಂ)–ಮೈಸೂರು ಚಲನಚಿತ್ರ ಕಲಾವಿದರು ಮತ್ತು ತಂತ್ರಜ್ಞರ ಒಕ್ಕೂಟ ಅಸ್ತಿತ್ವಕ್ಕೆ ಬಂದಿದ್ದು, ಫೆ.24ರಂದು ಇದರ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಲೀಲಾ ಮನೋಹರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಚಲನಚಿತ್ರ ನಿರ್ಮಾಣದಲ್ಲಿ ಕೆಲಸ ಮಾಡುವ ವಿವಿಧ ರೀತಿಯ ಕಲಾವಿದರು, ತಂತ್ರಜ್ಞರ 11 ಸಂಘಗಳಿಗೆ ಸಂಬಂಧಿಸಿದಂತೆ ಈ ಒಕ್ಕೂಟವನ್ನು ಅಸ್ತಿತ್ವಕ್ಕೆ ತಂದಿದ್ದೇವೆ. ಅಂದು ಬೆಳಗ್ಗೆ 11ಕ್ಕೆ ನಜರ್‌ಬಾದಿನ ಶ್ರೀ ಮದ್ವೇಶ ಕಾಂಪ್ಲೆಕ್ಸ್ ಆವರಣದಲ್ಲಿ ಒಕ್ಕೂಟದ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿದೆ. ಕದಂಬ ರಂಗ ಕಲಾ ವೇದಿಕೆ ಅಧ್ಯಕ್ಷ ವಿದ್ಯಾಸಾಗರ ಕದಂಬ ಒಕ್ಕೂಟದ ಉದ್ಘಾಟನೆ ನೆರವೇರಿಸಲಿದ್ದಾರೆ. ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಅತಿಥಿಯಾಗಿ ಭಾಗವಹಿಸಲಿದ್ದಾರೆ ಎಂದರು. ಒಕ್ಕೂಟದ ಗೌರವಾಧ್ಯಕ್ಷ ಎಂ.ಕೃಷ್ಣ, ಪ್ರಧಾನ ಕಾರ್ಯದರ್ಶಿ ವಿ.ಸುರೇಂದ್ರ, ಉಪಾಧ್ಯಕ್ಷ ಶ್ರೀನಿವಾಸ ಜೆಟ್ಟಿ, ಖಜಾಂಚಿ ಗುರುಸ್ವಾಮಿ, ಸಂಘಟನಾ ಕಾರ್ಯದರ್ಶಿ ಮಹದೇವ್ ಗೋಷ್ಠಿಯಲ್ಲಿದ್ದರು.

ಶಿವಾನುಭವ ದಾಸೋಹ ಉಪನ್ಯಾಸ

ಮೈಸೂರು, ಫೆ. 22– ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ಆಶ್ರಯದಲ್ಲಿ ಪ್ರತಿ ತಿಂಗಳ ಕೊನೆಯ ಶನಿವಾರದಂದು ನಡೆಯುವ ಶಿವಾನುಭವ ದಾಸೋಹ ಮಾಲಿಕೆಯ 298ನೆಯ ಕಾರ್ಯಕ್ರಮವು ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ನಡೆಯಲಿದೆ. ನಿವೃತ್ತ ಪ್ರಾಧ್ಯಾಪಕ ಪ್ರೊ. ಡಿ.ಎಸ್.ಸದಾಶಿವಮೂರ್ತಿ ಅವರು ಫೆ. 25ರ ಶನಿವಾರ ಸಂಜೆ 6ಕ್ಕೆ ಕಳೆ ಮೆಳೆಯ ಕಿತ್ತಲ್ಲದೆ ಹೊಲ ಶುದ್ಧವಲ್ಲ ವಿಷಯ ಕುರಿತು ಉಪನ್ಯಾಸ ನೀಡಲಿದ್ದಾರೆ.

ಕಾರ್ಯಕ್ರಮವು ಶ್ರೀಮತಿ ಸವಿತ ಮತ್ತು ಪಾಲಾಕ್ಷ ಅವರ ಪ್ರಾಯೋಜಕತ್ವದಲ್ಲಿ ನಂ. 95, ಜೆಎಸ್‌ಎಸ್ ಬಡಾವಣೆ 2ನೇ ಹಂತ, ಮೈಸೂರು–28 ಇಲ್ಲಿ ನಡೆಯಲಿದೆ. ಅಧ್ಯಕ್ಷತೆಯನ್ನು ಹೆಚ್ಚುವರಿ ಪ್ರಾದೇಶಿಕ ಆಯುಕ್ತ ಪಿ. ಶಿವರಾಜು ವಹಿಸಲಿದ್ದಾರೆ. ಕಾರ್ಯಕ್ರಮದ ಪ್ರಾರಂಭದಲ್ಲಿ ಶ್ರೀ ಶಿವರಾತ್ರೀಶ್ವರ ಭಜನಾ ಮಂಡಳಿ ಮತ್ತು ಲಲಿತಾದ್ರಿ ಮಹಿಳಾ ವೇದಿಕೆಯಿಂದ ಭಜನೆ ನಡೆಯಲಿದೆ.

ಗ್ರಾಹಕರ ಮುಂಗಡ ಹಣ ಸಂಸ್ಥೆಗೆ ನೀಡದೆ ವಂಚನೆ: ಪ್ಯಾಲೆಸ್ ಟೊಯೊಟೋ ಉದ್ಯೋಗಿ ವಿರುದ್ಧ ಕೇಸ್

ಮೈಸೂರು, ಫೆ.22–ಕಾರು ಬುಕ್ಕಿಂಗ್‌ಗಾಗಿ ಗ್ರಾಹಕರಿಂದ ಪಡೆದ ಮುಂಗಡ ಹಣವನ್ನು ದುರುಪಯೋಗಪಡಿಸಿಕೊಂಡ ಆರೋಪದ ಮೇರೆಗೆ ಮೈಸೂರಿನ ಕೂರ್ಗಳ್ಳಿಯಲ್ಲಿರುವ ಪ್ಯಾಲೆಸ್ ಟೊಯೊಟೋ ಶೋ ರೂಂನ ಅಸಿಸ್ಟೆಂಟ್ ಸೇಲ್ಸ್ ಮ್ಯಾನೇಜರ್ ವಿರುದ್ಧ ಪ್ರಕರಣ ದಾಖಲಾಗಿದೆ.

ಮೈಸೂರಿನ ವಿಜಯನಗರ ಎರಡನೇ ಹಂತದಲ್ಲಿರುವ ರಕ್ಷಿತ್ ಆರ್.ಚಂದರ್ ಆರೋಪಕ್ಕೆ ಗುರಿಯಾದವನಾಗಿದ್ದು, ಈತ 2022ರ ಆ.22ರಂದು ನಾಗೇಂದ್ರ ಎಂಬುವರು ಇನ್ನೋವಾ ಕಾರನ್ನು ಬುಕ್ ಮಾಡಿ ನೀಡಿದ್ದ 1 ಲಕ್ಷ ರೂ. ಮುಂಗಡ ಹಣವನ್ನು ದುರುಪಯೋಗಪಡಿಸಿಕೊಂಡಿದ್ದ. ಈ ವಿಚಾರ ತಿಳಿದ ನಂತರ ಶೋ ರೂಂ ಮುಖ್ಯಸ್ಥರು ವಿಚಾರಿಸಿದಾಗ ರಕ್ಷಿತ್, ಚಾಮರಾಜನಗರ ಮತ್ತು ಮೈಸೂರು ಶೋ ರೂಂಗಳನ್ನು ಉಮೇಶ, ಸತೀಶ, ನಾಗೇಶ, ಅರುಣ್‌ಕುಮಾರ್, ಕನಕರಾಜು, ಶಿವಕುಮಾರ್, ರವಿ, ಬಸವಣ್ಣ, ಶ್ರೀಕಾಂತ್, ಸಿದ್ದಮಲ್ಲೇಶ್, ಪ್ಲಾನೆಟ್ ಫ್ರೆಂಡ್ಲಿ, ನಂಜುಂಡಸ್ವಾಮಿ, ಈಶ್ವರ, ಪ್ರದೀಪ್ ಎಂಬುವರಿಂದ ಒಟ್ಟು 5.97 ಲಕ್ಷ ರೂ. ಮುಂಗಡ ಹಣ ಪಡೆದು ದುರುಪಯೋಗಪಡಿಸಿಕೊಂಡಿರುವುದು ಬೆಳಕಿಗೆ ಬಂದಿದೆ. ನಂತರ ಈತ ಸಂಸ್ಥೆಗೆ 3.90 ಲಕ್ಷ ರೂ. ಪಾವತಿ ಮಾಡಿದ್ದು, ಉಳಿಕೆ 2.07 ಲಕ್ಷ ರೂ. ನೀಡದೇ ವಂಚಿಸಿದ್ದಾನೆ. ಅಲ್ಲದೇ ಈತ ಮತ್ತಷ್ಟು ಗ್ರಾಹಕರಿಂದ ಮುಂಗಡ ಹಣ ಪಡೆದು ಸಂಸ್ಥೆಗೆ ಪಾವತಿಸದೇ ದುರುಪಯೋಗಪಡಿಸಿಕೊಂಡಿರುವ ಅನುಮಾನವಿದೆ ಎಂದು ಪ್ಯಾಲೆಸ್ ಟೊಯೊಟೋ ಸೇಲ್ಸ್ ವಿಭಾಗದ ಮ್ಯಾನೇಜರ್ ಆರ್.ರಾಜೇಶ್ ನೀಡಿದ ದೂರನ್ನು ದಾಖಲಿಸಿಕೊಂಡಿರುವ ವಿಜಯನಗರ ಠಾಣೆ ಪೊಲೀಸರು ತನಿಖೆ ಮುಂದುವರೆಸಿದ್ದಾರೆ.

ನಿಧನ



ಶಬೀರ್ ಆಲಿ

ಮೈಸೂರು, ಫೆ. 22–ಮೈಸೂರಿನ ಬೆಂಚ್ ಮಾರ್ಕ್ ಲೇಔಟ್ ನಿವಾಸಿ ಶಬೀರ್ ಆಲಿ (49) ಬುಧವಾರ ಬೆಳಗ್ಗೆ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಓರ್ವ ಪುತ್ರಿ ಹಾಗೂ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಬುಧವಾರ ಸಂಜೆ 6.30ಕ್ಕೆ ನಮಾಜ್–ಎ–ಜನಾಜ ನಡೆದ ನಂತರ ಮೈಸೂರಿನ ಟಿಪ್ಪು ಸರ್ಕಲ್ ಬಳಿಯಿರುವ ಮುಸ್ಲಿಮರ ರುದ್ರಭೂಮಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸುನನ್ನಾ



ಮೈಸೂರಿನ ಗಾಯಿತ್ರಿಪುರಂ ನಿವಾಸಿ ಸುನನ್ನಾ (79) ಅವರು ಇಂದು ಮಧ್ಯಾಹ್ನ ನಿಧನರಾದರು. ಮೃತರು ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಫೆ23) ಬೆಳಗ್ಗೆ 11 ಗಂಟೆಗೆ ಅವರ ಸ್ವಗ್ರಾಮವಾದ ಚಾಮರಾಜನಗರ ಜಿಲ್ಲೆ ನಾಗವಳ್ಳಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿನ್ಸಿ ಡಿ ಅಲ್ಮೇಡ



ಮೈಸೂರಿನ ವಿದ್ಯಾರಣ್ಯಪುರದ ನಿವಾಸಿ ವಿನ್ಸಿ ಡಿ ಅಲ್ಮೇಡ (64) ಬುಧವಾರ ನಿಧನರಾದರು. ಮೃತರು ಪತ್ನಿ, ಮಗಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಇವರು ಕೆಲವು ವರ್ಷಗಳ ಕಾಲ ಮೈಸೂರು ಧರ್ಮಾಧ್ಯಕ್ಷರ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದ್ದಾರೆ. ಅಂತ್ಯಕ್ರಿಯೆ ಶನಿವಾರ (ಫೆ.25) ಮೈಸೂರು ಸೌತ್‌ನ ಸಂತ ತೇರೆಸಮ್ಮನವರ ದೇವಾಲಯದಲ್ಲಿ ಬಲಿಪೂಜೆ ನೆರವೇರಿಸಿ, ನಂತರ ಮಧ್ಯಾಹ್ನ 2.30ಕ್ಕೆ ವಿದ್ಯಾರಣ್ಯಪುರಂನಲ್ಲಿರುವ ಕ್ಯಾಥೋಲಿಕ ರುದ್ರಭೂಮಿಯಲ್ಲಿ ಅಂತಿಮ ವಿಧಿವಿಧಾನ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

'ಆಯಮ್ಮ ಕ್ಯಾನ್ಸರ್ ಇದ್ದ ಹಾಗೆ... ಹುಷಾರ್...!'

● ಮೈಸೂರಿನ ಸಾಮಾಜಿಕ ಕಾರ್ಯಕರ್ತ ಗಂಗರಾಜ್‌ಗೆ ರೋಹಿಣಿ ವಿಷಯದಲ್ಲಿ ರೂಪಾ ಎಚ್ಚರಿಕೆ ● ಸಂಭಾಷಣೆಯ 25 ನಿಮಿಷದ ಆಡಿಯೋ ವೈರಲ್



ರೋಹಿಣಿ ಸಿಂಧೂರಿ



ಡಿ.ರೂಪಾ ಮೌದ್ಗಿಲ್



ಎನ್.ಗಂಗಾರಾಜು

ಮೈಸೂರು, ಫೆ.22–ಆಯಮ್ಮ ಕ್ಯಾನ್ಸರ್ ಇದ್ದ ಹಾಗೆ. ಎಲ್ಲರನ್ನೂ ಬುಟ್ಟಿಗೆ ಹಾಕ್ಕೊಳ್ತಾಳೆ. ಡಿ.ಕೆ.ರವಿ ವಿಚಾರದಲ್ಲಿ ಇದೇ ಆಗಿದ್ದು... ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಐಪಿಎಸ್ ಅಧಿಕಾರಿ ಡಿ.ರೂಪಾ ಅವರು ಮೈಸೂರಿನ ಸಾಮಾಜಿಕ ಕಾರ್ಯಕರ್ತ ಗಂಗರಾಜ್ ಅವರಿಗೆ ಹೇಳಿದ ಮಾತಿದು. 25 ನಿಮಿಷದ ಸಂಭಾಷಣೆಯಲ್ಲಿ ರೋಹಿಣಿ ವಿರುದ್ಧ ರೂಪಾ ಹಲವಾರು ಆರೋಪಗಳನ್ನು ಮಾಡಿದ್ದಾರೆ. ಇಂತಹವರಿಗೆ ನೀವು ಸಪೋರ್ಟ್ ಮಾಡಬೇಕೇ ಎಂದು ಪ್ರಶ್ನಿಸಿದ್ದಾರೆ.

ರೂಪಾ ಜೊತೆ ಮಾತನಾಡಿದ ಗಂಗಾರಾಜ್, ರೋಹಿಣಿ ಮತ್ತು ಸಾ.ರಾ.ಮಹೇಶ್ ನಡುವಿನ ಸಂಧಾನದ ವೇಳೆ ಸಾ.ರಾ.ಮಹೇಶ್ ತನಗೆ ನೀಡಿದ ಪತ್ರವೊಂದನ್ನು ರೋಹಿಣಿ ನನಗೆ ವಾಟ್ಸಾಪ್ ಮಾಡಿದ್ದಾರೆ. ಅವರ ಸಂಧಾನದ ಬಗ್ಗೆ ನಾನು ರೋಹಿಣಿ ಸಿಂಧೂರಿ ಅವರನ್ನು ಪ್ರಶ್ನಿಸಿದ್ದೇನೆ. ಸಾ.ರಾ.ಮಹೇಶ್ ಛತ್ರ ರಾಜಕಾಲುವೆ ಮೇಲಿದೆ ಎಂದು ರೋಹಿಣಿ ನೀಡಿದ ಹೇಳಿಕೆ ತಪ್ಪು ಎಂದು ಅವರಿಗೇ ವಾಟ್ಸಾಪ್ ಮೂಲಕ ತಿಳಿಸಿದ್ದೇನೆ. ಬೇಕಾದರೆ ಸ್ಕ್ರೀನ್‌ಶಾಟ್ ಕಳುಹಿಸುತ್ತೇನೆ ಎಂದು ಹೇಳಿರುವುದಲ್ಲದೇ ರೋಹಿಣಿ ವಿರುದ್ಧ ದಾಖಲೆಗಳು ದೊರೆತರೆ ಹೋರಾಟ ನಡೆಸುತ್ತೇನೆ ಎಂದು ರೂಪಾ ಅವರಿಗೆ ಹೇಳಿದ್ದಾರೆ.

ಮೊದಲಿಗೆ ರೂಪಾ ಅವರು ಸಾ.ರಾ.ಮಹೇಶ್ ವಿರುದ್ಧ ಭೂ ಕಬಳಿಕೆ ದೂರನ್ನು ರೋಹಿಣಿಯವರಿಗೇ ಯಾಕೆ ಕೊಟ್ಟಿದ್ದು. ಅದಕ್ಕೂ ಮುಂಚೆ ಯಾಕೆ ದೂರು ಕೊಟ್ಟಿಲ್ಲ ಎಂದು ಪ್ರಶ್ನಿಸಿದಾಗ ಗಂಗರಾಜ್ ಹಿಂದೆಯೂ ದೂರು ನೀಡಿರುವುದಾಗಿ ತಿಳಿಸಿದ್ದಾರೆ. ಹಾಗಾದರೆ ರೋಹಿಣಿ ಇರುವಾಗ ಯಾಕೆ ಅದು ದೊಡ್ಡ ಸುದ್ದಿಯಾಯಿತು ಎಂದು ಪ್ರಶ್ನಿಸಿದ ರೂಪಾ, ಸದರಿ ದೂರನ್ನು ರೋಹಿಣಿ ಸಿಂಧೂರಿಯೇ ನಿಮಗೆ ಸಿದ್ಧಪಡಿಸಿಕೊಟ್ಟು ಸರ್ವೆ ಇಲಾಖೆಗೆ ಕಳುಹಿಸಿದ್ದಾರೆ ಎಂದು ಆರೋಪಿಸಿದರಾದರೂ, ಅದನ್ನು ಗಂಗರಾಜ್ ನಿರಾಕರಿಸಿದ್ದಾರೆ.

ನೀವು ಅಂದುಕೊಂಡಂತೆ ರೋಹಿಣಿ ಸಾಚಾ ಏನಲ್ಲ. ತೆಲುಗಿನವಳಾದ ಅವಳಿಗೆ ಒಮ್ಮೊಮ್ಮೆ ಸರಿಯಾಗಿ ಕನ್ನಡವೂ ಮಾತನಾಡಲು ಬರುವುದಿಲ್ಲ. ಅವಳು ಗಂಡನ ಸಹೋದರನನ್ನು ರಾಜಕಾರಣಕ್ಕೆ ತರಲು ಪ್ರಯತ್ನ ಮಾಡುತ್ತಿದ್ದಾಳೆ. ಆಕೆ ನಿರ್ಮಲಾನಂದ ಸ್ವಾಮೀಜಿ ಮತ್ತು ಚಕ್ರವರ್ತಿ ಸೂಲಿಬೆಲೆ ಅವರನ್ನು ಕರೆಸಿ ಜಿಎನ್‌ಆರ್ ಫೌಂಡೇಷನ್ ಹೆಸರಿನಲ್ಲಿ ಕಾರ್ಯಕ್ರಮ ಮಾಡಿದ್ದಾಳೆ. ಈ ಕಾರ್ಯಕ್ರಮಕ್ಕೆ ತಾನು ಹೋಗಬಹುದೇ ಎಂದು ನನ್ನ ಮನೆಯವರನ್ನು ಕೇಳಿದ್ದಾಳೆ. ಫೌಂಡೇಷನ್ ಸದ್ಯಕ್ಕೆ ಚಾರಿಟಿಯಾಗಿದ್ದು, ಅಲ್ಟಿಮೇಟ್ಲಿ ಗಂಡನ ಅಣ್ಣನಿಗೆ ಬಿಜೆಪಿ ಟಿಕೆಟ್ ಪಡೆದು ಸ್ಪರ್ಧಿಸುವುದು ಎಂದು ನನ್ನ ಪತಿಗೆ ರೋಹಿಣಿ ಚಾಟ್ ಮಾಡಿದ್ದಾಳೆ. ಇಂತಹ ಡೋಂಗಿಗಳಿಗೆ, ವೂಸರವಳ್ಳಿಗಳಿಗೆ ಯಾಕೆ ಸಪೋರ್ಟ್ ಮಾಡುತ್ತೀರಿ ಎಂದು ಗಂಗರಾಜ್ ಅವರನ್ನು ರೂಪಾ ಪ್ರಶ್ನಿಸಿದ್ದಾರೆ.

ನನ್ನ ಗಂಡ ಸರ್ವೆ ಇಲಾಖೆಯ ಕಮೀಷ್ನರ್ ಆಗಿರುವುದರಿಂದ ಅವಳ ಕುಟುಂಬದವರು ನಡೆಸುತ್ತಿರುವ ರಿಯಲ್ ಎಸ್ಟೇಟ್‌ಗೆ ಎಲ್ಲಾ ಸಹಕಾರವನ್ನು ಅವರಿಂದ ಪಡೆಯುತ್ತಿದ್ದಾಳೆ. ಕಬಿನಿ ಏರಿಯಾದ ನಾಲ್ಕು ಪಹಣಿಗಳನ್ನು ಅವಳು ಕಳುಹಿಸಿ, ಅದರ ಬಗ್ಗೆ ವಿವರ ಕೇಳಿದ್ದಾಳೆ. ಯಾರೋ ಬುಜ್ಜಮ್ಮ ಅಂತೆ. ಆ ಭೂಮಿಯಲ್ಲಿ ಬಹಳಷ್ಟು ಹೆಸರುಗಳಿವೆ. ಅದನ್ನು ಪೋಡಿ ಮಾಡಬೇಕು ಎಂದು ಹೇಳಿದ್ದಾಳೆ. ವಿವಾದಾತ್ಮಕ ಭೂಮಿಯನ್ನೂ ಅವಳು ಖರೀದಿಸುತ್ತಾಳೆ. ನನ್ನ ಗಂಡನ ಮೂಲಕ ಅವುಗಳ ದಾಖಲೆಗಳನ್ನೆಲ್ಲಾ ಸರಿ ಮಾಡಿಕೊಳ್ಳಬಹುದು ಎಂದು ಅಂದುಕೊಂಡಿದ್ದಾಳೆ ಎಂದಿರುವ ರೂಪಾ, ಅದಕ್ಕೆ ನಮ್ಮ ಮನೆಯವರನ್ನು ಸರ್ವೆ ಇಲಾಖೆಯಿಂದ ವರ್ಗಾವಣೆ ಮಾಡಿ ಎಂದು ಕೇಳಿಕೊಂಡಿದ್ದೇನೆ ಎಂದಾಗ, ಗಂಗರಾಜ್, ಬೇಡ ಮೇಡಂ, ಇಲಾಖೆಯಲ್ಲಿ ಅವರು ಒಳ್ಳೇ ಕೆಲಸ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಂತೆಯೇ, ಆಗ್ಲೀ ರೀ... ಅದರಿಂದ ನಮ್ಮ ಕುಟುಂಬಕ್ಕೆ ಏನು ಪ್ರಯೋಜನ. ಅವರು ನಮ್ಮ ಮನೆ ಕಡೇನೇ ಗಮನ ಕೊಡುತ್ತಾ ಇಲ್ಲ. ಇಂತಹವರ ಕೆಲ್ಸ ಮಾಡ್ಕೊಂಡ್ ಕೂತೀದ್ದಾರೆ. ಅದಕ್ಕೆ ಅವರನ್ನು ಟ್ರಾನ್ಸ್‌ಫರ್ ಮಾಡಿ ಅಂತ ಕೇಳಿಕೊಂಡಿದ್ದೇನೆ ಎಂದು ರೂಪಾ ಹೇಳಿದ್ದಾರೆ.

ನೀವು ಕಷ್ಟಪಟ್ಟು ದಾಖಲೆಗಳನ್ನೆಲ್ಲಾ ಹುಡುಕಿ ಸಾ.ರಾ.ಮಹೇಶ್ ಮೇಲೆ ದೂರು ಕೊಟ್ಟಿದ್ದೀರಿ. ಆದರೆ ಇವಳು ಅವರ ಜೊತೆ ರಾಜೀಗೆ ಹೋಗಿದ್ದಾಳೆ. ಹೆಚ್.ಡಿ.ಕುಮಾರಸ್ವಾಮಿ, ಹೆಚ್.ಡಿ.ದೇವೇಗೌಡ್ರು, ಕಾಗೇರಿ, ಚೆಲುವರಾಯಸ್ವಾಮಿ, ಕೆಲವು ಐಎಎಸ್ ಅಧಿಕಾರಿಗಳ ಬಳಿ ಸಾ.ರಾ.ಮಹೇಶ್‌ರೊಂದಿಗೆ ರಾಜೀ ಮಾಡಿಸುವಂತೆ ಬೇಡಿಕೊಂಡಿದ್ದಾಳೆ. ಕೊನೆಗೆ ಮಣಿವಣ್ಣನ್ ಬೇಡಿಕೊಂಡಾಗ ಸಾ.ರಾ.ಮಹೇಶ್ ಮಾತನಾಡಲು ಒಪ್ಪಿದ್ದಾರೆ. ಇವಳು ಯಾಕೆ ರಾಜಿಗೆ ಹೋದಳು ಎಂದು ರೂಪಾ ಪ್ರಶ್ನಿಸಿದ್ದಾರೆ.

ಆಗ ಉತ್ತರಿಸಿದ ಗಂಗರಾಜ್, ಈ ವಿಷಯ ಗೊತ್ತಾಗುತ್ತಿದ್ದಂತೆಯೇ ನಾನು ರೋಹಿಣಿ ಸಿಂಧೂರಿ ಅವರಿಗೆ ವಾಟ್ಸಾಪ್ ಮಾಡಿ ಏನು ಇದೆಲ್ಲಾ ಎಂದು ಪ್ರಶ್ನಿಸಿದ್ದೇನೆ. ಆದರೆ ಅವರು ಹಾಗೇನೂ ಇಲ್ಲ. ಸಾ.ರಾ.ಮಹೇಶ್ ಅವರು ನಾನು ಅವರ ಮೇಲೆ ಮಾಡಿದ್ದ ಆಪಾದನೆಗಳೆಲ್ಲಾ ಸುಳ್ಳು ಅವರ ಛತ್ರ ಕಾನೂನುಬದ್ಧವಾಗಿದೆ ಎಂದು ಲೆಟರ್ ಡ್ರಾಪ್ ಮಾಡಿಕೊಂಡು ಬಂದಿದ್ದರು. ಅದಕ್ಕೆ ಸಹಿ ಹಾಕುವಂತೆಯೂ ಪತ್ರವನ್ನು ಮೀಡಿಯಾಗಳಿಗೆ ಬಿಡುಗಡೆ ಮಾಡುವುದಾಗಿ ಕೇಳಿದರು. ಆದರೆ ನಾನೂ ಕೂಡ ನನ್ನ ಮೇಲೆ ನೀವು(ಸಾ.ರಾ.ಮಹೇಶ್) ಮಾಡಿರುವ ಆರೋಪಗಳ ಬಗ್ಗೆ ಇದೇ ತರಹ ಲೆಟರ್ ಕೊಡುತ್ತೀರಾ ಎಂದು ಕೇಳಿದೆ. ಅದಕ್ಕೆ ಅವರು ಒಪ್ಪಲಿಲ್ಲ. ನಾನೂ ಕೂಡ ಸಹಿ ಮಾಡಲಿಲ್ಲ ನನಗೆ ರೋಹಿಣಿ ಸಿಂಧೂರಿ ಹೇಳಿದರು ಎಂದಿರುವ ಗಂಗರಾಜ್, ಬೇಕಾದರೆ ಆ ಲೆಟರ್‌ನ ಸ್ಕ್ರೀನ್‌ಶಾಟ್ ಕಳುಹಿಸುವುದಾಗಿ ರೂಪಾ ಅವರಿಗೆ ಹೇಳಿದ್ದಾಳೆ. ಒಂದು ಹಂತದಲ್ಲಿ ಗಂಗರಾಜ್ ಮಾತನಾಡುತ್ತಾ, ರೋಹಿಣಿಯವರು ಸಾ.ರಾ.ಮಹೇಶ್ ಅವರ ಛತ್ರ ರಾಜಕಾಲುವೆ ಮೇಲಿದೆ ಎಂದು ಹೇಳಿಕೆ ನೀಡಿದ್ದರು. ಅದಕ್ಕೆ ನಾನು ವಾಟ್ಸಾಪ್ ಮೂಲಕ ವಿರೋಧ ವ್ಯಕ್ತಪಡಿಸಿದ್ದೀನಿ. ರಾಜಕಾಲುವೆ ಮೇಲೆ ಇದೆ ಎಂದು ನೀವು ಹೇಳಿರುವುದು ತಪ್ಪು. ಒತ್ತುವರಿಯಾಗಿದೆ ಎಂದು ಹೇಳಬೇಕಾಗಿತ್ತು ಎಂದು ರೋಹಿಣಿಯವರಿಗೆ ವಾಟ್ಸಾಪ್ ಮೂಲಕ ತಿಳಿಸಿದ್ದೇನೆ. ಬೇಕಾದರೆ ಅದರ ಸ್ಕ್ರೀನ್‌ಶಾಟ್ ಕಳುಹಿಸುತ್ತೇನೆ ಎಂದಿದ್ದಾರೆ.

ನಾನು ವೈಯಕ್ತಿಕವಾಗಿ ಯಾರ ಮೇಲೂ ವಿನಾ ಕಾರಣ ಆರೋಪ ಮಾಡುವುದಿಲ್ಲ. ಯಾರಿಗೆ ರಾಜೀ ಆಗುವುದೂ ಇಲ್ಲ. ಸಿದ್ದರಾಮಯ್ಯ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಹೋರಾಟ ನಡೆಸುತ್ತಿದ್ದೇನೆ. ಸಾ.ರಾ.ಮಹೇಶ್ ಮತ್ತು ಮಂಜೇಗೌಡರ ವಿರುದ್ಧವೂ ಕೇಸ್‌ಗಳಿವೆ. ಪೊಲೀಸ್ ಭವನ ವಿಚಾರದಲ್ಲಿ 14 ಐಪಿಎಸ್ ಅಧಿಕಾರಿಗಳ ವಿರುದ್ಧ ಕೇಸ್ ದಾಖಲಾಗುತ್ತದೆ. ಅದರಲ್ಲಿ ಪ್ರವೀಣ್ ಸೂದ್ ಅವರೂ ಕೂಡ ಸೇರಿರುತ್ತಾರೆ ಎಂದು ರೂಪಾ ಅವರಿಗೆ ಹೇಳಿರುವ ಗಂಗರಾಜ್, ರೋಹಿಣಿ ಸಿಂಧೂರಿ ಅಥವಾ ಅವರ ಪತಿ ವಿರುದ್ಧ ದಾಖಲೆಗಳು ದೊರೆತರೆ ನಾನು ಹೋರಾಟ ಮಾಡಲು ಸಿದ್ಧನಿದ್ದೇನೆ ಎಂದು ರೂಪಾ ಅವರಿಗೆ ಗಂಗರಾಜ್ ಈ ಆಡಿಯೋದಲ್ಲಿ ಹೇಳಿದ್ದಾರೆ.

ರೋಹಿಣಿ–ರೂಪಾ ವಾಕ್ಸಮರ ಪ್ರಕರಣದಲ್ಲಿ ಮೈಸೂರು ಪ್ರಸಂಗ ಪ್ರಸ್ತಾಪ

ನನ್ನನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ರೂಪಾ ವಿರುದ್ಧ ಕ್ರಿಮಿನಲ್ ಕೇಸ್ ಹಾಕ್ತೇನೆ!

ಸುದ್ದಿಗೋಷ್ಠಿಯಲ್ಲಿ ಮೈಸೂರಿನ ಆರ್‌ಟಿಐ ಕಾರ್ಯಕರ್ತ ಎನ್.ಗಂಗರಾಜು ಮಾಹಿತಿ

ಮೈಸೂರು, ಫೆ.22(ಆರ್‌ಕೆ)–ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮತ್ತು ಐಪಿಎಸ್ ಅಧಿಕಾರಿ ಡಿ.ರೂಪಾ ಮೌದ್ಗಿಲ್ ನಡುವಿನ ವಾಕ್ಸಮರಕ್ಕೆ ಸರ್ಕಾರ ಬ್ರೇಕ್ ಹಾಕಿರುವ ಬೆನ್ನಲ್ಲೇ ಇದೀಗ ರೋಹಿಣಿ–ರೂಪಾ ವಾಕ್ಸಮರದಲ್ಲಿ ಮೈಸೂರು ಪ್ರಸಂಗವೂ ಪ್ರಸ್ತಾಪವಾಗಿದ್ದು, ಇದರ ಆಡಿಯೋ ವೈರಲ್ ಆಗಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಇಂದು ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಆರ್‌ಟಿಐ ಕಾರ್ಯಕರ್ತ ಎನ್.ಗಂಗರಾಜು, ನನ್ನ ಜೊತೆ ಮೊಬೈಲ್ ಫೋನ್‌ನಲ್ಲಿ ಐಪಿಎಸ್ ಅಧಿಕಾರಿ ರೂಪಾ, ಮಾತನಾಡುವಾಗ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಹರಿಹಾಯ್ದಿದ್ದಲ್ಲದೇ, ರೋಹಿಣಿ ವಿರುದ್ಧ ದೂರು ನೀಡುವಂತೆ ನನ್ನ ಮೇಲೆ ಒತ್ತಡ ಹೇರಿದ್ದರು ಎಂದರು.

ಶಾಸಕ ಸಾ.ರಾ.ಮಹೇಶ್ ಭೂ ವಿವಾದ ಸಂಬಂಧ ನಾನು ಮಾಡಿದ್ದ ಆರೋಪದ ಹಿನ್ನೆಲೆಯಲ್ಲಿ ನನಗೆ ಕರೆ ಮಾಡಿ, ಸುಮಾರು 25 ನಿಮಿಷ ಮಾತನಾಡಿರುವ ರೂಪಾ ಮೌದ್ಗಿಲ್, ಅಂದಿನ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ರೋಹಿಣಿ ಸಿಂಧೂರಿ ವಿರುದ್ಧದ ದಾಖಲಾತಿಗಳ ಹೊಂದಿಸಿಕೊಂಡು ಹೋರಾಡುವಂತೆ ಒತ್ತಾಯಿಸಿದರು. ಆದರೆ ನಾನೊಬ್ಬ ಸಾಮಾಜಿಕ ಹೋರಾಟಗಾರ. ನಾನು ಅಕ್ರಮ–ಅನ್ಯಾಯದ ವಿರುದ್ಧ ಹೋರಾಟ ಮಾಡುತ್ತೇನೆಯೇ ಹೊರತು, ಯಾವೊಬ್ಬ ವ್ಯಕ್ತಿಯ ವೈಯಕ್ತಿಕ ವಿಚಾರದಲ್ಲಿ ಮೂಗು ತೂರಿಸುವುದು ಸರಿಯೇ? ವಿಚಾರಣೆಗೆ ಕರೆದಾಗ ಅಗತ್ಯ ಮಾಹಿತಿ ನೀಡುತ್ತೇನೆ ಎಂದು ಹೇಳಿದೆ. ಆಗ ರೂಪಾ ನನಗೆ ಧಮ್ಕಿ ಹಾಕಿ, ಅವಾಚ್ಯ ಶಬ್ದಗಳಿಂದ ನಿಂದಿಸಿದರು ಎಂದು ಅವರು ತಿಳಿಸಿದರು.

ಮೊಬೈಲ್‌ನಲ್ಲಿ ಭೂ ವ್ಯವಹಾರಗಳ ಬಗ್ಗೆ ಮಾತನಾಡಿದ ಸಂಭಾಷಣೆಯನ್ನು ಶಾಸಕ ಸಾ.ರಾ.ಮಹೇಶ್‌ಗೆ ಕಳುಹಿಸಿದ್ದಾರೆ. ರೋಹಿಣಿ ಅಕ್ರಮಗಳ ಬಗ್ಗೆ ನನ್ನ ಬಳಿ ಸಾಕಷ್ಟು ದಾಖಲೆಗಳಿವೆ. ಅವುಗಳನ್ನು ಮಾಧ್ಯಮಗಳಿಗೆ ತಿಳಿಸಿ, ಆಕೆಯ ವರ್ತನೆ ಸರಿಯಿಲ್ಲ. ಅವರ ಪತಿ ಮಾಡಿರುವ ಮೈಸೂರು ಆಸ್ತಿಗಳು, ಡಿಸಿಯಾಗಿ ಸಿಂಧೂರಿ ಮಾಡಿರುವ ಅನಧಿಕೃತ ಕೆಲಸಗಳನ್ನು ಬಹಿರಂಗ ಮಾಡಿ ಎಂದು ರೂಪಾ ನನ್ನ ಮೇಲೆ ಒತ್ತಡ ಹೇರಿದ್ದರು ಎಂದು ಗಂಗರಾಜು ಇದೇ ಸಂದರ್ಭ ಆರೋಪಿಸಿದರು.

ತನ್ನೊಂದಿಗೆ ಮೊಬೈಲ್‌ನಲ್ಲಿ ಮಾತನಾಡಿರುವ 25 ನಿಮಿಷಗಳ ಆಡಿಯೋ ಸಂಭಾಷಣೆಯನ್ನು ಬಿಡುಗಡೆ ಮಾಡಿದ ಅವರು, ರೂಪಾ ನನ್ನ ಚಲನ–ವಲನಗಳನ್ನು ಗಮನಿಸುತ್ತಿದ್ದು, ನನ್ನ ವಿರುದ್ಧ ಬೇಹುಗಾರಿಕೆ ಮಾಡುತ್ತಿದ್ದಾರೆ. ನನ್ನನ್ನು ಏಕ ವಚನ ಪ್ರಯೋಗಿಸಿ ಅವಾಚ್ಯ ಶಬ್ದಗಳಿಂದ ನಿಂದಿಸಿರುವುದರಿಂದ ಈ ಅಧಿಕಾರಿ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುತ್ತೇನೆ ಎಂದರು. ಈ ಇಬ್ಬರು ಅಧಿಕಾರಿಗಳ ಕಿತ್ತಾಟಕ್ಕೆ ವರ್ಗಾವಣೆ ಅಸ್ತ್ರ ಬಳಸಿ ಸರ್ಕಾರ ತೆರೆ ಎಳೆದಿರುವಾಗಲೇ ಆರ್‌ಟಿಐ ಕಾರ್ಯಕರ್ತ ಸಿಡಿಸಿರುವ ಆಡಿಯೋ ಬಾಂಬ್‌ನಿಂದ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದೆ ಎನ್ನಲಾಗುತ್ತಿದೆ.

ಕಾರ್ಮಿಕರ ಕೆಲಸದ ಅವಧಿ 12 ಗಂಟೆಗೆ ಹೆಚ್ಚಿಸುವ ವಿಧೇಯಕ ಮಂಡನೆ

ಬೆಂಗಳೂರು, ಫೆ 22 (ಕೆಎಂಶಿ)–ಆರ್ಥಿಕ ಚಟುವಟಿಕೆಗಳು ಮತ್ತು ಉದ್ಯೋಗ ಅವಕಾಶಗಳನ್ನು ಸೃಷ್ಟಿಸಿ, ಕೆಲಸದ ಅವಧಿಯನ್ನು 9 ಗಂಟೆಗಳಿಂದ 12 ಗಂಟೆಗಳಿಗೆ ಹೆಚ್ಚಿಸುವ ಕಾರ್ಖಾನೆಗಳ (ಕರ್ನಾಟಕ ತಿದ್ದುಪಡಿ ವಿಧೇಯಕ) 2023 ಮಂಡಿಸಲಾಯಿತು. ಕಾರ್ಮಿಕ ಸಚಿವ ಶಿವರಾಮ್ ಹೆಬ್ಬಾರ್ ಪರವಾಗಿ ಸಚಿವ ಜೆ.ಸಿ.ಮಾಧುಸ್ವಾಮಿ ವಿಧೇಯಕವನ್ನು ಮಂಡಿಸಿದರು.


ನೂತನ ವಿಧೇಯಕದ ಪ್ರಕಾರ ಆರ್ಥಿಕ ಚಟುವಟಿಕೆ ಮತ್ತು ಉದ್ಯೋಗ ಅವಕಾಶ ಸೃಜನೆ ಮಾಡಲು ಹಾಲಿ ಇರುವ ಕೆಲಸದ ಅವಧಿಯನ್ನು 9ರಿಂದ 12 ಗಂಟೆವರೆಗೆ ಹೆಚ್ಚಿಸಲು ಸರ್ಕಾರ ಅವಕಾಶ ಕಲ್ಪಿಸಿದೆ.

ದೈನಂದಿನ ಗರಿಷ್ಠ ಕೆಲಸದ ಅವಯನ್ನು 6 ಗಂಟೆವರೆಗೆ ದಿನದಲ್ಲಿ ಅಥವಾ ವಾರದಲ್ಲಿ ಅವಧಿ ಮೀರಿದ ಕೆಲಸದ ಸಂದರ್ಭದಲ್ಲಿ ಸಾಮಾನ್ಯ ದರಕ್ಕಿಂತ ದುಪ್ಪಟ್ಟು ದರದಲ್ಲಿ ವೇತನವನ್ನು ಕಾರ್ಮಿಕರಿಗೆ ನೀಡಲು ಅವಕಾಶ ನೀಡಿದೆ. ಅಸಾಧಾರಣವಾದ ಕೆಲಸದ ಒತ್ತಡವನ್ನು ನಿಭಾಯಿಸಲು ಹೆಚ್ಚಿನ ಸಮಯದವರೆಗೆ ಕಾರ್ಮಿಕರನ್ನು ತೊಡಗಿಸಿಕೊಳ್ಳಲು, ದುಡಿಮೆ ಮತ್ತು ಗಳಿಕೆಯಲ್ಲಿ ಸಮಾನ ಅವಕಾಶ, ರಾತ್ರಿ ಪಾಳೆಯದಲ್ಲಿ ಕೆಲಸ ಮಾಡಲು ಆಸಕ್ತಿ ಹೊಂದಿರುವ ಮಹಿಳಾ ಕೆಲಸಗಾರರಿಂದ ಲಿಖಿತ ಉತ್ತರ ಪಡೆದು ಸುರಕ್ಷತೆ ಮತ್ತು ಆರೋಗ್ಯ ಭದ್ರಪಡಿಸಿಕೊಂಡು ಷರತ್ತುಗೊಳಪಟ್ಟ 24 ಗಂಟೆ ಕೆಲಸ ಮಾಡಲು ಅವಕಾಶ ನೀಡಲಾಗಿದೆ. ರಾತ್ರಿ ಪಾಳೆಯದಲ್ಲಿ ಮಹಿಳೆಯರು ಕೆಲಸ ಮಾಡಬೇಕೆಂಬ ನಿಯಮ ರೂಪಿಸದೆ ಆಸಕ್ತಿ ಇರುವವರಿಗೆ ಮಾತ್ರ ನೇಮಿಸಿಕೊಳ್ಳಬೇಕು. ವಾರದ ರಜೆ ಅಥವಾ ರಜೆಯ ಹೊರತು ಪಾಳೆಗಳಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಬಾರದು, ಮಹಿಳಾ ಉದ್ಯೋಗಿಗಳ ಮೊಬೈಲ್, ಇಮೇಲ್ ಐಡಿ ಅಥವಾ ವಿಳಾಸವನ್ನು ಯಾವುದೇ ಕಾರಣಕ್ಕೂ ಅನಧಿಕೃತ ವ್ಯಕ್ತಿಗಳಿಗೆ ಬಹಿರಂಗಗೊಳಿಸಬಾರದು ಎಂದು ವಿಧೇಯಕದಲ್ಲಿ ಸೂಚನೆ ನೀಡಲಾಗಿದೆ. ಮಹಿಳಾ ನೌಕರರನ್ನು ಕಾರ್ಖಾನೆಗೆ ಕರೆತರುವ ಪ್ರತಿಯೊಬ್ಬ ಚಾಲಕನ ವೈಯಕ್ತಿಕ ವಿವರಣೆ, ಚಾಲಕರ ಹಿಂದಿನ ಪೂರ್ವ ಇತಿಹಾಸವನ್ನು ಅಧ್ಯಯನ ಮಾಡಬೇಕು. ಹೀಗೆ ಹೊಸ ವಿಧೇಯಕದಲ್ಲಿ ಮಹಿಳೆಯರಿಗೆ ಹೆಚ್ಚಿನ ಅನುಕೂಲ ಕಲ್ಪಿಸುವ ವಿಧೇಯಕವನ್ನು ವಿಧಾನಸಭೆಯಲ್ಲಿ ಮಂಡಿಸಲಾಯಿತು.

ಕರೋಕೆ ಕಾರ್ಯಕ್ರಮ

ಮೈಸೂರು, ಫೆ. 22– ಮೈಸೂರಿನ ಜನ ಚೈತನ್ಯ ಫೌಂಡೇಷನ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಪ್ರತಿಭಾವಂತ ಹವ್ಯಾಸಿ ಗಾಯಕರಿಗೆ ವೇದಿಕೆಯಲ್ಲಿ ಅವಕಾಶ ಕಲ್ಪಿಸುವ ಉದ್ದೇಶದಿಂದ 'ಹಾಡೊಂದು ನಾ ಹಾಡುವೆನು' ಶೀರ್ಷಿಕೆಯಡಿ ಕರೋಕೆ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಇದರಲ್ಲಿ ಭಾಗವಹಿಸಲು ಇಚ್ಛೆಯುಳ್ಳ ಅಭ್ಯರ್ಥಿಗಳು ಆರ್.ಲಕ್ಷ್ಮಣ್ ಮೊ: 92435–06024, ಉಮೇಶ್– ಮೊ: 94487–43742, ಎಂ.ಪುಟ್ಟಸ್ವಾಮಿ–ಮೊ: 98450–78545 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

23.2.2023 ಗುರುವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023 ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಉಭಾ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ** : ಗುರು ವೈಭವೋತ್ಸವ–2023, ಬೆಳಗ್ಗೆ 7ಕ್ಕೆ ನಕ್ಷತ್ರ ಶಾಂತಿ ಹೋಮ (ವಿವಾಹ ಮತ್ತು ಕಲ್ಯಾಣ ಪ್ರಾಪ್ತಿ), ಬೆಳಗ್ಗೆ 7 ರಿಂದ ಸೀತಾ ಸಹಿತ ಶ್ರೀ ರಾಮಚಂದ್ರ ದೇವರಿಗೆ ಸಹಸ್ರ ಶಂಖ ಕ್ಷೀರಾಭಿಷೇಕ, ಸ್ಥಳ: ನಂಜನಗೂಡು ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನಕೆರೆ.

■ **ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಶ್ರೀ ರಾಘವೇಂದ್ರಸ್ವಾಮಿಗಳ ಪಟ್ಟಾಭಿಷೇಕ ಹಾಗೂ ವರ್ಧಂತಿ ಮಹೋತ್ಸವ, ಶ್ರೀ ಶಿಂಶುಕುಮಾರ ಮಹಾಯಾಗ, ಬೆಳಗ್ಗೆ 6.30 ರಿಂದ ಶ್ರೀ ಶಂಶುಕುಮಾರ ಮಹಾಯಾಗ ಹಾಗೂ ನವಗ್ರಹ ಪುರಸ್ಸರ ಧನ್ವಂತರೀ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿ ಸೇವಾ ಸಮಿತಿ, ಜಯಲಕ್ಷ್ಮಿಪುರಂ.

■ **ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** : ಇಂಡಿಯನ್ ಡಯಾಸ್‌ಪೋರಾ ರೈಟರ್ಸ್ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ಕರಾಮುವಿವಿ ಪ್ರಾಧ್ಯಾಪಕ ಪ್ರೊ. ಎಸ್.ಎನ್. ವಿಕ್ರಮ್ ರಾಜೇ ಅರಸ್, ಅಧ್ಯಕ್ಷತೆ : ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್, ಮುಖ್ಯ ಅತಿಥಿಗಳು : ಪ್ರಿನ್ಸಿಪಾಲ್ ಪ್ರೊ. ಎಂ.ಪಿ. ವಿಜೇಂದ್ರಕುಮಾರ್, ಸ್ಥಳ: ಕಾಲೇಜು ಆವರಣ, ಊಟಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ ಲಲಿತ ಕಲಾ ಕಾಲೇಜು, ಶ್ರೀ ಗುಬ್ಬಿ ವೀರಣ್ಣ ಪೀಠ** : ಮೂರು ದಿನಗಳ ರಂಗ ಸಹೃದಯ ಕಾರ್ಯಾಗಾರ, ಸ್ಥಳ: ಲಲಿತ ಕಲಾ ರಂಗ ಮಂದಿರ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.

■ **ಅಭಿವೃದ್ಧಿ** : ಸಿಲ್ಕ್ ಇಂಡಿಯಾ–2023 ಪ್ರದರ್ಶನ ಮತ್ತು ಮಾರಾಟ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ಜಯಂತಿ ಬಲ್ಲಾಳ್ ಫ್ಲ್ಯಾಗ್‌ಶಿಪ್ ಸ್ಟೋರ್:** ಕೀರ್ತಿಲಾಲ್ಸ್ ಡೈಮಂಡ್ ಜ್ಯುವೆಲ್ಲರಿ ಪ್ರದರ್ಶನ, ಉದ್ಘಾಟನೆ : ಚಲನಚಿತ್ರ ನಟಿ ಶ್ರುತಿ ಹರಿಹರನ್, ಸ್ಥಳ: ವಿಜಯನಗರ 1ನೇ ಹಂತ, ಬೆಳಗ್ಗೆ 11 ರಿಂದ.

■ **ಆಪಲ್ ಪೈ ಪ್ರಿ ಸ್ಕೂಲ್** : ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಮುಖ್ಯ ಅತಿಥಿಗಳು : ಶಾಸಕ ಎಲ್. ನಾಗೇಂದ್ರ, ಮೇಯರ್ ಶಿವಕುಮಾರ್, ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ. ಮುಜಾಫರ್ ಅಸ್ಸಾದಿ, ಸ್ಥಳ: ಆಪಲ್ ಪೈ ಸ್ಕೂಲ್, ಸರಸ್ವತಿಪುರಂ, ಬೆಳಗ್ಗೆ 11ಕ್ಕೆ.

■ **ವಾತ್ಸಲ್ಯ ಶಿಕ್ಷಣ ಮಹಾವಿದ್ಯಾಲಯ:** ಪ್ರತಿಭಾ ಕಾರಂಜಿ, ಸಾನ್ನಿಧ್ಯ: ಶ್ರೀ ನಟರಾಜ ಪ್ರತಿಷ್ಠಾನ ಅಧ್ಯಕ್ಷ ಶ್ರೀ ಚಿದಾನಂದ ಸ್ವಾಮೀಜಿ, ಉದ್ಘಾಟನೆ : ಕಾಲೇಜು ಅಭಿವೃದ್ಧಿ ಮಂಡಳಿ ನಿರ್ದೇಶಕ ಪ್ರೊ.ಎಸ್.ಶ್ರೀಕಂಠಸ್ವಾಮಿ, ಅಧ್ಯಕ್ಷತೆ: ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ.ಎಸ್.ಶಿವರಾಜಪ್ಪ, ಮುಖ್ಯ ಅತಿಥಿಗಳು: ಸುಗಮ ಸಂಗೀತ ಗಾಯಕಿ ಕೆ.ನಾಗರತ್ನ, ಪ್ರೊ.ಎಂ.ಆರ್. ಜಯಪ್ರಕಾಶ್, ಸ್ಥಳ:ನಟರಾಜ ಸಭಾಂಗಣ, ಬೆಳಗ್ಗೆ 11ಕ್ಕೆ.

■ **ಶ್ರೀ ಕುಂಬಳದೇವಿ ಅಮ್ಮನವರ ಜಾತ್ರಾ ಮಹೋತ್ಸವ** : ಗ್ರಾಮ ದೇವತೆ ಶ್ರೀ ಹಿರಿಯಮ್ಮ ಶ್ರೀ ಕುಂಬಳದೇವಿ ಅಮ್ಮನವರ 12ನೇ ಜಾತ್ರಾ ಮಹೋತ್ಸವ, ಶ್ರೀ ಹಿರಿಯಮ್ಮ, ಶ್ರೀ ಕುಂಬಳದೇವಿ ಅಮ್ಮನವರು ಹಾಗೂ ಮಂಟೇಸ್ವಾಮಿ ಬಸಪ್ಪನವರು ಮತ್ತು ಬೇವನಹಳ್ಳಿ ಸಿದ್ದಪ್ಪಾಜಿ ಬಸಪ್ಪನವರ ಮೆರವಣಿಗೆ, ಸ್ಥಳ: ಚೌಟ್ರಿ ಸರ್ಕಲ್, ಮಂಚೇಗೌಡನಕೊಪ್ಪಲು, ಸಂಜೆ 4ಕ್ಕೆ.


■ **ಶ್ರೀರಾಮಕೃಷ್ಣ ಆಶ್ರಮ, ಶ್ರೀ ರಾಮಕೃಷ್ಣ ಸೇವಾ ಸಂಘ, ಶ್ರೀ ರಾಮಕೃಷ್ಣ ಜಾತ್ರೋತ್ಸವ ಸಮಿತಿ** : ಆಧ್ಯಾತ್ಮಿಕ ಚಿಂತನ ಮಂಥನ ಕಾರ್ಯಕ್ರಮ, ಸಂಜೆ 5 ರಿಂದ ನಿವೇದಿತನಗರದ ಚಿತ್ಕಲ ಮಹಿಳಾ ಸಂಘದಿಂದ ಭಜನಾ ಕಾರ್ಯಕ್ರಮ, ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಯೋಗಾಸನ ಪ್ರದರ್ಶನ, ಸಂಜೆ 6 ರಿಂದ ಸಾಹಿತಿ ಡಾ. ಸಿ. ನಾಗಣ್ಣ ಅವರಿಂದ ಕುವೆಂಪು ಸಾಹಿತ್ಯದಲ್ಲಿ ದರ್ಶನ ಕುರಿತು ಪ್ರವಚನ, ಸಂಜೆ 7 ರಿಂದ ಶ್ರೀದೇವಿ ಮತ್ತು ತಂಡದಿಂದ ಹಾಡುಗಾರಿಕೆ, ಸಂಜೆ 7.30 ರಿಂದ ಪ್ರಾಣೇಶ್ ಹುಲ್ಕೆರೆಕೊಪ್ಪಲು ಅವರಿಂದ ಗಾಯನ ಕಾರ್ಯಕ್ರಮ, ಅಧ್ಯಕ್ಷತೆ : ವಿಧಾನ ಪರಿಷತ್ ಸದಸ್ಯ ಮರಿತಿಬ್ಬೇಗೌಡ, ಮುಖ್ಯ ಅತಿಥಿಗಳು : ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಸ್ಥಳ: ರಾಮಕೃಷ್ಣ ಪರಮಹಂಸ ವೃತ್ತ, ರಾಮಕೃಷ್ಣನಗರ.

■ **ಪ್ರಣತಿ ವಿದ್ಯಾಸಂಸ್ಥೆ** : ಶಾಲಾ ವಾರ್ಷಿಕೋತ್ಸವ, ಉದ್ಘಾಟನೆ : ಶಾಸಕ ಅನಿಲ್ ಚಿಕ್ಕಮಾದು, ಅಧ್ಯಕ್ಷತೆ : ಕ್ಯಾತನಹಳ್ಳಿ ಗ್ರಾಪಂ ಅಧ್ಯಕ್ಷ ಬಸವರಾಜು, ಬಹುಮಾನ ವಿತರಣೆ : ಕ್ಷೇತ್ರ ಶಿಕ್ಷಣಾಧಿಕಾರಿ ಎಂ. ಉದಯ್‌ಕುಮಾರ್, ಸ್ಥಳ: ಶಾಲಾ ಆವರಣ, ಕ್ಯಾತನಹಳ್ಳಿ, ಸಂಜೆ 5.30ಕ್ಕೆ.

■ **ಶ್ರೀರಾಮಕೃಷ್ಣ ಆಶ್ರಮ** : ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ 188ನೇ ಜನ್ಮ ದಿನೋತ್ಸವ, ಆಶ್ರಮದ ವಾರ್ಷಿಕೋತ್ಸವ, ಸಂಜೆ 5.30 ರಿಂದ ಸಂಧ್ಯಾರತಿ, ಸಂಜೆ 5.45 ರಿಂದ ಪ್ರೊ. ಎಂ. ಕೃಷ್ಣೇಗೌಡ ಅವರಿಂದ ಕುವೆಂಪು ದರ್ಶಿತ ಶ್ರೀರಾಮಕೃಷ್ಣರು ಮತ್ತು ಶ್ರೀ ರಾಮಕೃಷ್ಣ ಆಶ್ರಮ ಕುರಿತು ಕನ್ನಡದಲ್ಲಿ ಪ್ರವಚನ, ಸಂಜೆ 6.45 ರಿಂದ ಶ್ರೀಮತಯಿ ನಾಗಚಂದ್ರಿಕಾ ಭಟ್ ಅವರಿಂದ ಭಕ್ತಿಸಂಗೀತ. ತಬಲಾ– ರಘುನಾಥ್, ರಿದಂ ಪ್ಯಾಡ್–ಗುರುದತ್, ಕೀಬೋರ್ಡ್–ಶರತ್, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಶ್ರೀ ಕೃಷ್ಣಗಾನ ಸಭಾ** : ಮಹಾರಾಜ ಶ್ರೀ 10ನೇ ಚಾಮರಾಜ ಒಡೆಯರ್ ಜಯಂತಿ ಮಹೋತ್ಸವ, ಮುಖ್ಯ ಅತಿಥಿಗಳು: ವಿದುಷಿ ಡಾ. ಸುಕನ್ಯ ಪ್ರಭಾಕರ್, ವಿದುಷಿ ಡಾ. ಜ್ಯೋತಿ ಶಂಕರ ಅವರಿಂದ ವ್ಯಾಖ್ಯಾನ, ಕು.ಮಹಿಮಾ ಕಶ್ಯಪ್ ಅವರಿಂದ ಜಯಂತಿ ಪ್ರಯುಕ್ತ ಕಾವ್ಯವಾಚನ, ಸ್ಥಳ: ಆಳ್ವಾರ್ ಕಲಾ ಭವನ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಹಾಗೂ ಸಂಜೆ 5.00ಕ್ಕೆ "ಒಂದೇ ಕಥೆ" ವಿವಿಧ ಮುಖ– ಬಾನುಲಿ ಸರಣೀ, ಪ್ರಸ್ತುತಿ– ಪ್ರಭುಸ್ವಾಮಿ ಮಳಿಮಠ, 6.40 ಅರಿವಿನ ಶಿಖರ, ಗಾಯನ– ಮತ್ತೂರು ಕುಮಾರಸ್ವಾಮಿ, ನಿತಿನ್ ರಾಜಾರಾಂ ಶಾಸ್ತ್ರಿ, ವ್ಯಾಖ್ಯಾನ– ಡಾ. ಲತಾ ಮೈಸೂರು, 8.30 ಗೆಲುವಿನ ಗುಟ್ಟು–ಪ್ರಹಸನ, ಪ್ರಾಯೋಜಿತ ಕಾರ್ಯಕ್ರಮ, 8.45 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರು ಉಮೇಶ್, 10.00 ಕೆ.ಎಸ್. ಹೇರಂಬ ಮತ್ತು ಕೆ.ಎಸ್. ಹೇಮಂತ–ಯುಗಳ ವೇಣುವಾದನ **ಮಧ್ಯಾಹ್ನ:** 12.30 ದೇವರನಾಮ, 1.20 ಭಾವಗೀತೆಗಳು–ಡಿ. ಕುಮಾರದಾಸ, ಶ್ರೀಪಾದ ಹೆಗ್ಡೆ, 4.00 ಜನಪದ ಸಂಗೀತ, 4.30 ಕನ್ನಡ ಭಾರತಿ, 6.50 ಕೃಷಿರಂಗ–ಕಿಸಾನ್‌ವಾಣಿ, 8.00 ಯುವವಾಣಿ, 9.30 ರಾಷ್ಟ್ರೀಯ ನಾಟಕ, 10.30 ಸವಿನೆನಪು

ಕಾಯಕ ಶರಣರು ಸಮಾನತೆಯ ಹರಿಕಾರರು

ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್ ಅಭಿಮತ


ಮೈಸೂರು, ಫೆ.22–ನಾಡಿನಲ್ಲಿ ಕಾಯಕ ಶರಣರ ಪ್ರಭಾವ ಬಹಳಷ್ಟಿದೆ. 12ನೇ ಶತಮಾನದಲ್ಲಿಯೇ ಸಮಾಜದಲ್ಲಿನ ತಾರತಮ್ಯ ಹೋಗಲಾಡಿಸಿ ಸಮಾನತೆ ಸಾರಲು ಶ್ರಮಿಸಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ಮೇಯರ್ ಶಿವಕುಮಾರ್ ತಿಳಿಸಿದರು.

ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕಿರು ರಂಗಮಂದಿರದಲ್ಲಿ ಹಮ್ಮಿಕೊಂಡಿದ್ದ ಕಾಯಕ ಶರಣರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಶರಣರು ಕಾಯಕ ದಾಸೋಹ ಮತ್ತು ವಚನಗಳ ಮೂಲಕ ನಾಡಿಗೆ ಸಂದೇಶ ಸಾರಿದ್ದಾರೆ. ಕಾಯಕದ ಆಧಾರದ ಮೇಲೆ ಜಾತಿ ಮಾಡಬಾರದು. ಮನಸ್ಸಿನಿಂದ ಮಾಡುವ ಯಾವ ಕಾಯಕವೂ ಚಿಕ್ಕದ್ದಲ್ಲ ಎಂದರು. ಕಾರ್ಯಕ್ರಮದ ಸಾನಿಧ್ಯ ವಹಿಸಿ ಮಾತನಾಡಿದ ಶ್ರೀ ಉರಿಲಿಂಗಿ ಪೆದ್ದಿ ಮಹಾಸಂಸ್ಥಾನ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಕಾಯಕ ಸಮುದಾಯದ ಮಾದರ ಚೆನ್ನಯ್ಯ, ಮಾದಾರ ಧೂಳಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ ಹಾಗೂ ಉರಿಲಿಂಗ ಪೆದ್ದಿಯವರ ಜಯಂತಿ ಆಚರಣೆಯನ್ನು ಒಟ್ಟಿಗೆ ಆಚರಿಸುತ್ತಿರುವುದು ಬಹಳ ಸಂತೋಷದ ವಿಷಯ ಎಂದರು.



ಇಡೀ ಜಗತ್ತಿನ ಮೊಟ್ಟಮೊದಲ ಪಾರ್ಲಿಮೆಂಟ್ ಅನುಭವ ಮಂಟಪವಾಗಿದೆ. 12ನೇ ಶತಮಾನದಲ್ಲಿಯೇ ಕಾಯಕ ಮತ್ತು ದಾಸೋಹಗಳ ಅಡಿಪಾಯದಲ್ಲಿ ಭ್ರಾತೃತ್ವ ಹಾಗೂ ಸಮಾನತೆಯ ಆಶಯದೊಂದಿಗೆ ಅನುಭವ ಮಂಟಪವನ್ನು ಬಸವಣ್ಣನವರು ನಿರ್ಮಿಸಿದ್ದರು ಎಂದು ತಿಳಿಸಿದರು. ಹೆಣ್ಣನ್ನು ಕಡೆಗಣಿಸುತ್ತಿದ್ದ ಆ ಕಾಲದಲ್ಲಿಯೇ ಸದ್ಗತಿಗೆ ಹೆಣ್ಣೇ ಮೂಲ ಎಂದು ಶ್ರೇಷ್ಠ ಶರಣರಾದ ಬಸವಣ್ಣನವರು ತಮ್ಮ ವಚನದ ಮೂಲಕ ಸಾರಿದ್ದರು. ಮಾದರ ಚೆನ್ನಯ್ಯನ ಮನೆಯ ಅಂಬಲಿ ಕುಡಿದಿದ್ದಕ್ಕೆ ವೇದ ನಡುಗಿತ್ತು ಶಾಸ್ತ್ರ ಅಡಗಿತ್ತು. ಮಾದರ ಚೆನ್ನಯ್ಯನ ದಾಸಿಯ ಮಗ ನಾನು ಎಂದುಕೊಳ್ಳುವ ಬಸವಣ್ಣನವರು ಜಾತಿ ಮೌಢ್ಯವನ್ನು ತ್ಯಜಿಸಿದ್ದರು ಎಂದರು. ವಚನಗಳೆಂದರೆ ಮಾನವೀಯ ಮೌಲ್ಯಗಳು. ದುಡಿದೇ ಬದುಕಬೇಕೆಂಬ ಛಲವನ್ನು ಕಾಯಕ ಶರಣರಲ್ಲಿ ಕಾಣಬಹುದು. ಕಾಯಕವೇ ಕೈಲಾಸ, ಕೆಲಸ ಮಾಡುವವರಿಗೆ ತ್ರಿಕರ್ಣ ಶುದ್ಧಿಯಾಗುತ್ತದೆ. ನಡೆನುಡಿ ಶುದ್ಧಿ ಇದ್ದವರಿಗೆ ಕುಲ ಸೂತಕವಿಲ್ಲ. ಕಾಯಕ ಜೀವಿಗಳ ಪಾವಿತ್ರ್ಯತೆಯನ್ನು ನಾವು ಅರಿಯಬೇಕು ಎಂದು ಅಭಿಪ್ರಾಯಪಟ್ಟರು.

ಚಾಪೆ ಮಾಡುವವರು, ಎಣ್ಣೆ ತೆಗೆಯುವವರು ಹಾಗೂ ಮಡಕೆ ಮಾಡುವವರು ಇತ್ತೀಚಿನ ದಿನಗಳಲ್ಲಿ ಕಾಣೆಯಾಗುತ್ತಿದ್ದಾರೆ. ಕಾಯಕದ ಶ್ರೇಷ್ಠತೆಯನ್ನು ಗುರುತಿಸುವುದರಲ್ಲಿ ನಾವು ಸೋತಿದ್ದೇವೆ. ತತ್ವ, ಚಿಂತನೆ ಮತ್ತು ವಿಚಾರಗಳು ಜನರ ಮನಸ್ಸನ್ನು ಸೇರಬೇಕು. ಜನರಲ್ಲಿ ಜಾಗೃತಿ ಮೂಡಿಸಬೇಕು. 12ನೇ ಶತಮಾನ ಈ ಸಮಾನತೆಯ ಕ್ರಾಂತಿಗೆ ಉದಾಹರಣೆಯಾಗಿದೆ ಎಂದರು. 12ನೇ ಶತಮಾನದ ವಚನಗಳ ಸಾರವೇ ಇಂದಿನ ಸಂವಿಧಾನ. ನೈತಿಕತೆ, ಆದರ್ಶ ಬದುಕನ್ನು ರೂಪಿಸಿಕೊಳ್ಳಲು ಜನ ಸಮುದಾಯವನ್ನು ಜಾಗೃತಿಗೊಳಿಸುವ ನಿಟ್ಟಿನಲ್ಲಿ ಮಹನೀಯರ ಜಯಂತಿಯನ್ನು ಆಚರಿಸುತ್ತೇವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ. ಎಂ.ಡಿ. ಸುದರ್ಶನ್, ಉರಿಲಿಂಗ ಪೆದ್ದಿ ಮಠದ ಬಸವಾನಂದ ಸ್ವಾಮೀಜಿಗಳು, ಸಾಹಿತಿ ಪರಮೇಶ್ವರ ಭಟ್ಟ, ಎಪಿಎಂಸಿ ಸದಸ್ಯ ಜವರಪ್ಪ ಒಳಗೊಂಡಂತೆ ಕಾಯಕ ಸಮುದಾಯದ ಮುಖಂಡರು ಉಪಸ್ಥಿತರಿದ್ದರು.



ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಉತ್ತರ ಕ್ರಿಯಾದಿ ಆಹ್ವಾನ ಪತ್ರಿಕೆ



ಶ್ರೀ ಬಸವರಾಜು.ವಿ


ಇವರು ದಿ: 12.02.2023 ಭಾನುವಾರ ದೈವಾಧೀನರಾಗಿದ್ದು, ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 23.02.2023 ಗುರುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗೃಹ #12, ಎ ಬ್ಲಾಕ್ ಜ್ಯೋತಿ ನಗರ ಪೋಲೀಸ್ ಕ್ವಾಟ್ರಸ್, ಮೈಸೂರು ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಆಗ ಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಲೇಟ್ ವೆಂಕಟಪ್ಪನವರು & ವೆಂಕಟಮ್ಮ, ಪತ್ನಿ ಶ್ರೀಮತಿ ಛಾಯದೇವಿ ಮತ್ತು ಮಕ್ಕಳು ಕುಟುಂಬವರ್ಗದವರು ಹಾಗೂ ಬಂಧು ಮಿತ್ರರು. ಭೋಜನ: ಮಧ್ಯಾಹ್ನ 1 ಗಂಟೆಗೆ





ವಿದೇಶಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಆರೋಪ
ಮೈಸೂರು ಪೊಲೀಸರ ವಶಕ್ಕೆ
ಆರೋಪಿ ಆದಿಲ್‌ಖಾನ್ ದುರಾನಿ

ಬಾಲಿವುಡ್ ನೃತ್ಯಗಾರ್ತಿ ರಾಖಿ ಸಾವಂತ್‌ಗೆ ವಂಚನೆ ಪ್ರಕರಣದಲ್ಲಿ ಈಗಾಗಲೇ ಮುಂಬೈ ಪೊಲೀಸರ ವಶದಲ್ಲಿದ್ದ ದುರಾನಿ



ಮೈಸೂರು, ಫೆ.22(ಆರ್‌ಕೆ)–ವಿದೇಶಿ ವಿದ್ಯಾರ್ಥಿನಿ ಮೇಲೆ ಅತ್ಯಾಚಾರ ಆರೋಪ ಎದುರಿಸುತ್ತಿರುವ ಮೈಸೂರಿನ ಆದಿಲ್ ಖಾನ್ ದುರಾನಿಯನ್ನು ಮೈಸೂರು ಪೊಲೀಸರು ಮುಂಬೈನಿಂದ ಇಂದು ಬೆಳಗ್ಗೆ ಕರೆ ತಂದಿದ್ದಾರೆ.

ಮೈಸೂರಿನ ಗೋಕುಲಂನಲ್ಲಿ ವಾಸವಾಗಿದ್ದ ಇರಾನ್ ದೇಶದ ವಿದ್ಯಾರ್ಥಿನಿ ನೀಡಿದ್ದ ದೂರಿನನ್ವಯ ದುರಾನಿ ವಿರುದ್ಧ ವಿವಿ ಪುರಂ ಠಾಣೆ ಪೊಲೀಸರು ಅತ್ಯಾಚಾರ ಹಾಗೂ ವಂಚನೆ ಪ್ರಕರಣ ದಾಖಲಿಸಿದ್ದರು. ಈ ಪ್ರಕರಣದ ತನಿಖೆ ಕೈಗೊಂಡಿದ್ದ ಇನ್ಸ್‌ಪೆಕ್ಟರ್ ಮೋಹನ್, ಪತ್ನಿ ಬಾಲಿವುಡ್ ನೃತ್ಯಗಾರ್ತಿ ರಾಖಿ ಸಾವಂತ್‌ಗೆ ವಂಚನೆ ಪ್ರಕರಣದಲ್ಲಿ ಈಗಾಗಲೇ ಬಂಧಿತನಾಗಿದ್ದ ಆದಿಲ್ ಖಾನ್ ದುರಾನಿಯನ್ನು ಕೋರ್ಟ್‌ನಿಂದ ಬಾಡಿ ವಾರಂಟ್ ಪಡೆದು ಮುಂಬೈನಿಂದ ಇಂದು ಬೆಳಗ್ಗೆ ಮೈಸೂರಿಗೆ ಕರೆತಂದಿದ್ದರು.

ಪ್ರಕರಣ ಸಂಬಂಧ ವಿವಿ ಪುರಂ ಠಾಣೆಯಲ್ಲಿ ಸುದೀರ್ಘ ವಿಚಾರಣೆ ನಡೆಸಿದ ಬಳಿಕ ಮೈಸೂರಿನ ನ್ಯಾಯಾಲಯಕ್ಕೆ ಹಾಜರುಪಡಿಸಿದ ಪೊಲೀಸರು ಹೆಚ್ಚುವರಿ ವಿಚಾರಣೆಗಾಗಿ ಆರೋಪಿಯನ್ನು ತಮ್ಮ ವಶಕ್ಕೆ ನೀಡುವಂತೆ ಅರ್ಜಿ ಸಲ್ಲಿಸಿ ಮನವಿ ಮಾಡಿದ ಹಿನ್ನೆಲೆಯಲ್ಲಿ ನ್ಯಾಯಾಲಯವು ಫೆಬ್ರವರಿ 27ರವರೆಗೆ ಆದಿಲ್ ಖಾನ್ ದುರಾನಿಯನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ. ಆತನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ವೇಳೆ ಪತ್ನಿ ರಾಖಿ ಸಾವಂತ್ ಪರ ವಕೀಲರು ಹಾಜರಾಗಿ, ರಾಖಿ ಸಾವಂತ್‌ಗೆ ಈತನಿಂದ ಆಗಿರುವ ವಂಚನೆ ಬಗ್ಗೆ ನ್ಯಾಯಾಲಯಕ್ಕೆ ವಿವರಿಸಿದರು. ಈ ವೇಳೆ ನ್ಯಾಯಾಲಯದ



ಆವರಣದಲ್ಲಿ ಮಾಧ್ಯಮದೊಂದಿಗೆ ಮಾತನಾಡಿದ ರಾಖಿ, ನಾನು ಆದಿಲ್‌ಖಾನ್‌ನನ್ನು ಕಾನೂನು ಬದ್ಧವಾಗಿ ಮದುವೆಯಾಗಿದ್ದೇನೆ. ವರದಕ್ಷಿಣೆ ಕಿರುಕುಳ ನೀಡಿದ ಆರೋಪದ ಮೇಲೆ ಆತನನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ನನ್ನಿಂದ 1.65 ಕೋಟಿ ರೂ. ಹಣ ಪಡೆದು ವಂಚಿಸಿದ್ದಾನೆ ಎಂದು ದೂರಿದ್ದಲ್ಲದೆ, ಆತನಿಗೆ ಶಿಕ್ಷೆಯಾಗಬೇಕು ಎಂದು ಮನವಿ ಮಾಡಿದರು.

ಹಿಂದೂ ಆಗಿದ್ದ ನಾನು ಆದಿಲ್‌ಗಾಗಿ ಮುಸ್ಲಿಂ ಧರ್ಮಕ್ಕೆ ಮತಾಂತರಗೊಂಡು ಫಾತಿಮಾ ಎಂದು ಹೆಸರನ್ನು ಬದಲಾಯಿಸಿಕೊಂಡೆ. ಈಗ ನನ್ನನ್ನು ಅವರ ಪೋಷಕರು ಮನೆಗೂ ಸೇರಿಸುತ್ತಿಲ್ಲ. ನಾನು ಎಲ್ಲಿಗೆ ಹೋಗಲಿ ಎಂದು ರಾಖಿ ಸಾವಂತ್ ಕಣ್ಣೀರಿಟ್ಟು, ನ್ಯಾಯ ದೊರಕಿಸಿಕೊಡಿ ಎಂದು ಅಂಗಲಾಚಿದರು. ಮೈಸೂರು ಜನ ಸರಿಯಿಲ್ಲ. ನಾನು ಮುಂಬೈಗೆ ಬರುತ್ತೇನೆಂದು ಹೇಳಿ, ಅಲ್ಲಿಗೆ ಬಂದ ಮೇಲೆ ನನ್ನ ಮೇಲೆ ಅಲ್ಲಿ ಹಲವು ಬಾರಿ ಹಲ್ಲೆ ಮಾಡಿದ. ಮೈಸೂರು ನ್ಯಾಯಾಲಯದ ಮೇಲೆ ನನಗೆ ವಿಶ್ವಾಸವಿದೆ. ಇಷ್ಟೆಲ್ಲಾ ಅನ್ಯಾಯ ಮಾಡಿರುವ ಆದಿಲ್ ಖಾನ್ ದುರಾನಿಗೆ ಶಿಕ್ಷೆಯಾಗಬೇಕು ಎಂದರು. ಸದ್ಯ ವಿವಿ ಪುರಂ ಠಾಣೆ ಪೊಲೀಸರ ವಶದಲ್ಲಿರುವ ಆದಿಲ್‌ನನ್ನು ವಿಚಾರಣೆ ನಡೆಸಿದ ಬಳಿಕ ಫೆಬ್ರವರಿ 27ರಂದು ಮತ್ತೆ ಮೈಸೂರು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗುವುದು ಎಂದು ಎನ್.ಆರ್. ಉಪ ವಿಭಾಗದ ಎಸಿಪಿ ಅಶ್ವತ್ಥನಾರಾಯಣ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಮೈದನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ 151/3 ರಲ್ಲಿರುವ ಒಟ್ಟು ವಿಸ್ತೀರ್ಣ 01 ಎಕರೆ ಜಮೀನು ಮೂಲತ: ಶ್ರೀಮತಿ ಮಹದೇವಮ್ಮ ಮತ್ತು ಇವರ ವಾರಸುದಾರರಿಗೆ ಸೇರಿದ ಸ್ವತ್ತಾಗಿದ್ದು ಈ ಸ್ವತ್ತನ್ನು ಯಾರು ಸಹ ಕ್ರಯ ಮಾಡಿಕೊಳ್ಳುವುದಾಗಲೀ, ಕ್ರಯದ ಕರಾರು ಇತ್ಯಾದಿಗಳನ್ನು ಮಾಡಿಕೊಂಡ ಪಕ್ಷದಲ್ಲ ನೀವೆ ಸಂಪೂರ್ಣ ಜವಾಬ್ದಾರರಾಗುತ್ತೀರಿ. ಒಂದು ವೇಳೆ ಶ್ರೀಮತಿ ಮಹದೇವಮ್ಮ ಮತ್ತು ಇವರ ವಾರಸುದಾರರ ಗಮನಕ್ಕೆ ಬಾರದೆ ಕ್ರಯ ಮತ್ತು ಕ್ರಯದ ಕರಾರು ಮಾಡಿಕೊಂಡಲ್ಲಿ ಕಾನೂನು ರೀತ್ಯಾ ಕ್ರಮಕ್ಕೆ ತುತ್ತಾಗುತ್ತೀರಿ. ಎಂದು ಈ ಸ್ವತ್ತಿನ ಮಾಲೀಕರಾದ ಮಹದೇವಮ್ಮರವರ ಪರ ವಕೀಲರು ಪ್ರಕಟಣೆ ನೀಡುತ್ತಿರುತ್ತಾರೆ.

ಚೆಕ್‌ಬಂದಿ: ಮೈಸೂರು ತಾಲ್ಲೂಕು ಇಲವಾಲ ಹೋಬಳಿ ಮೈದನಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ 151/3 ರಲ್ಲಿ ಒಟ್ಟು ವಿಸ್ತೀರ್ಣ 01 ಎಕರೆ ಸ್ವತ್ತಿಗೆ ಚಕ್ಕುಬಂದಿ ಪೂರ್ವಕ್ಕೆ: ದ್ಯಾವಪ್ಪ ರವರ ಸ್ವತ್ತು, ಪಶ್ಚಿಮಕ್ಕೆ : ಕೃಷ್ಣಪ್ಪನ ಸ್ವತ್ತು, ಉತ್ತರಕ್ಕೆ ನಂಜಮ್ಮನ ಸ್ವತ್ತು, ದಕ್ಷಿಣಕ್ಕೆ: ಖಾಲಿ

SD/-J.K. Manjunath BA., LLB
Advocate KAR 2209/2008, #2185, 1st Floor, 1st Cross, Basaveshwara Road, K.R.Mohalla, Mysuru-04, Mob: 9986226791

ಎರಡನೇ ವರ್ಷದ ಸವಿನೆನಪು

ಶ್ರೀಮತಿ ಪದ್ಮ ಶ್ರೀನಿವಾಸ್‌ರವರು
(ನ್ಯಾಯಬೆಲೆ ಅಂಗಡಿ ಲೇಟ್ ಶ್ರೀನಿವಾಸ್‌ರವರ ಧರ್ಮಪತ್ನಿ)



ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಮನದಲ್ಲಿ ಹಚ್ಚಹಸಿರಾಗಿದೆ. ಸದಾ ನಿಮ್ಮ ನೆನಪಿನಲ್ಲಿರುವ

ಎಸ್. ನಟರಾಜ್ ಮತ್ತು ಕುಟುಂಬ ವರ್ಗದವರು
ಹೆಣ್ಣು ಮಕ್ಕಳು, ಅಳಿಯಂದಿರು, ಸೊಸೆಯಂದಿರು ಹಾಗೂ ಮೊಮ್ಮಕ್ಕಳು

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ **ಜಯಲಕ್ಷ್ಮಿ**

ಇವರು ದಿ: 13.02.2023 ಸೋಮವಾರ ದೈವಾಧೀನರಾಗಿದ್ದು, ತತ್ಸಂಬಂಧ ಮೃತರ ಉತ್ತರ ಕ್ರಿಯಾದಿ ಕಾರ್ಯವನ್ನು ದಿ: 23.02.2023 ಗುರುವಾರ ಮಧ್ಯಾಹ್ನ 1 ಗಂಟೆಗೆ ಮೃತರ ಸ್ವಗೃಹ #94, 3ನೇ ಕ್ರಾಸ್, ಭೈರವೇಶ್ವರ ನಗರ, ಹೆಬ್ಬಾಳು, ಮೈಸೂರು ಇಲ್ಲಿ ಏರ್ಪಡಿಸಿರು ವುದರಿಂದ ತಾವುಗಳು ಆಗ ಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.
ದುಃಖತಪ್ತರು: ಚಿಕ್ಕಶೆಟ್ಟಿ ಮತ್ತು ಕುಟುಂಬವರ್ಗದವರು.

4ನೇ ವರ್ಷದ ಸವಿನೆನಪು



ಶ್ರೀಮತಿ **ಲಕ್ಷ್ಮಮ್ಮ**

ನಿಮ್ಮ ನೆನಪಿನಲ್ಲಿರುವ
ಮದ್ದೂರಮ್ಮನ ಪೈ॥ಯ॥ ಸಣ್ಣಪ್ಪನವರ ಕುಟುಂಬ, ಕೆ.ಜಿ.ಕೊಪ್ಪಲು, ಮೈಸೂರು

1ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 1 ವರ್ಷ ಕಳೆದರೂ ನಿಮ್ಮ ನೆನಪು ಸದಾ ನಮ್ಮ ಮನದಲ್ಲಿದೆ
ದುಃಖತಪ್ತರು: ತಾಯಿ ಸರೋಜಮ್ಮ, ಪತ್ನಿ ಶ್ರೀಮತಿ ಇಂದಿರಾ, ಮಕ್ಕಳು ಹಾಗೂ ಕುಟುಂಬವರ್ಗ

ಶ್ರೀಧರ್ ಮೂರ್ತಿ
(ನಿವೃತ್ತರು, ಎನ್‌ಐಇ ಕಾಲೇಜು)

6ನೇ ತರಗತಿ ಪ್ರವೇಶಕ್ಕೆ ಅರ್ಜಿ ಆಹ್ವಾನ

ಮೈಸೂರು, ಫೆ.22– 2023–24ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿಗೆ ಆನ್‌ಲೈನ್‌ನಲ್ಲಿ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಹ ವಿದ್ಯಾರ್ಥಿಗಳು www.schooleducation.kar.nic.in ಮತ್ತು www.vidyavahini.kar.gov.in ವೆಬ್‌ಸೈಟ್ ಮೂಲಕ ಅರ್ಜಿಯನ್ನು ಸಲ್ಲಿಸಬಹುದಾಗಿದೆ. ಅರ್ಜಿ ಸಲ್ಲಿಸುವ ದಿನಾಂಕವು ಫೆ.18 ರಿಂದ ಪ್ರಾರಂಭವಾಗಿದ್ದು, ಮಾರ್ಚ್ 4 ಅಂತಿಮ ದಿನಾಂಕವಾಗಿದೆ. ಹೆಚ್ಚಿನ ಮಾಹಿತಿಗೆ ಮೇಲ್ಕಂಡ ವೆಬ್‌ಸೈಟ್ ವೀಕ್ಷಿಸಬಹುದು ಅಥವಾ ಆದರ್ಶ ವಿದ್ಯಾಲಯಗಳ ಬ್ಲಾಕ್‌ಗಳಾದ ಹೆಚ್.ಡಿ.ಕೋಟೆ: 9880867918, ಹುಣಸೂರು: 9449783750, ಕೆ.ಆರ್.ನಗರ: 9980028847, ಮೈಸೂರು ದಕ್ಷಿಣ: 9902242111, ನಂಜನಗೂಡು: 8971175677, ತಿ.ನರಸೀಪುರ: 7019423512 ಹಾಗೂ ಡಯಟ್‌ನ ನೋಡಲ್ ಅಧಿಕಾರಿಗಳ ದೂ.ಸಂ: 9901265600 ನ್ನು ಸಂಪರ್ಕಿಸಬಹುದು ಎಂದು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ(ಡಯಟ್) ಯ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕರು ತಿಳಿಸಿದ್ದಾರೆ.

ಗೌರವಾನ್ವಿತ ಪ್ರಧಾನ ಹಿರಿಯ ನ್ಯಾಯಾಧೀಶರ ನ್ಯಾಯಾಲಯ, ಮತ್ತು ಸಿ.ಜೆ.ಎಂ ನ್ಯಾಯಾಲಯ , ಮೈಸೂರು

ಅಸಲು ದಾವಾ ಸಂಖ್ಯೆ: 1043/2022
ವಾದಿ: ಶ್ರೀಮತಿ ನಾಗರತ್ನಮ್ಮ ವಿರುದ್ಧ
ಪ್ರತಿವಾದಿ: ಶ್ರೀಮತಿ ರಾಣಿ, ಶ್ರೀಮತಿ ರಾಣಿ ಕೋಂ ರಾಜು, # 05 ಸರ್ಕಾರಿ ಉತ್ತನಹಳ್ಳಿ ಗಾಮ ಕಡಕೋಳ ಅಂಚೆ, ವರುಣಾ ಹೋಬಳಿ, ಮೈಸೂರು ತಾಲ್ಲೂಕು, ಮೈಸೂರು ಜಿಲ್ಲೆ

ಸಾರ್ವಜನಿಕ ಪ್ರಕಟಣೆ

ವಾದಿಯು ಮೇಲ್ಕಂಡ ಘನ ನ್ಯಾಯಾಲಯದಲ್ಲಿ ಮೇಲ್ಕಂಡ ದಾವೆಯನ್ನು ಪ್ರತಿವಾದಿ ವಿರುದ್ಧ ಈ ಕೆಳಕಂಡ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಹಣದ ವಸೂಲಾತಿಗಾಗಿ ಕೋರಿ ದಾವಾ ಸಲ್ಲಿಸಿರುತ್ತಾರೆ, ಈ ಪ್ರಕರಣದ ಪ್ರತಿವಾದಿಯಾದ ನೀವು ದಿನಾಂಕ: 10.04.2023 ರಂದು ಬೆಳಗ್ಗೆ 11 ಗಂಟೆಗೆ ಮೇಲ್ಕಂಡ ನ್ಯಾಯಾಲಯದಲ್ಲ ಖುದ್ದಾಗಿ ಅಥವಾ ತಮ್ಮ ವಕೀಲರ ಮೂಲಕ ಹಾಜರಾಗತಕ್ಕದ್ದು, ತಪ್ಪಿದಲ್ಲಿ ನಿಮ್ಮ ಗೈರು ಹಾಜರಿಯಲ್ಲ ಏಕಪಕ್ಷೀಯವಾಗಿ ಪ್ರಕರಣವನ್ನು ಇತ್ಯರ್ಥಪಡಿಸಲಾಗುವುದು.

ಷೆಡ್ಯೂಲ್ ಸ್ವತ್ತಿನ ವಿವರ

ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯಿತ್ ರಾಜ್ ಇಲಾಖೆ, ನಮೂನೆ–11ಬಿ ಮೈಸೂರು ತಾಲ್ಲೂಕು, ವರುಣ ಹೋಬಳಿ, ಕಡಕೊಳ ಅಂಚೆ, ಸರ್ಕಾರಿ ಉತ್ತನಹಳ್ಳಿ ಗ್ರಾಮದ ಜಂಬರ್ ನಂ.418, ಈಗಿನ ಮನೆ ನಂ.5 ಸ್ವತ್ತಿನ ಸಂಖ್ಯೆ 152200418056020464 ಮನೆಯಲ್ಲಿರುವ ವಿಸ್ತೀರ್ಣ ಪೂರ್ವ ಪಶ್ಚಿಮ 13.716 ಮೀಟರ್, ದಕ್ಷಿಣೋತ್ತರ 13.716 ಮೀಟರ್‌ರಲ್ಲಿ 1 ಹೊರಾಂಡ, 2 ರೂಂ, ದೇವರ ಮನೆ, ಸ್ನಾನದ ಮನೆ, ಶೌಚಾಲಯ, ಮತ್ತು 1ನೆ ಅಂತಸ್ತಿನಲ್ಲಿ 1 ರೂಂ, ಮತ್ತು ಗ್ರಾನೈಟ್ ಹೊಂದಿರುವ ಸ್ವತ್ತಿಗೆ ಚಕ್ಕುಬಂದಿ: ಪೂರ್ವಕ್ಕೆ: ಖಾಸಗಿ ನಿವೇಶನ, ಪಶ್ಚಿಮಕ್ಕೆ : ರಸ್ತೆ, ಉತ್ತರಕ್ಕೆ: ಉಳಕೆ ಸ್ವತ್ತು, ದಕ್ಷಿಣಕ್ಕೆ: ಜ್ವಾಲಮುಖಿ ತ್ರಿಪುರ ಸುಂದರಿ ಅಮ್ಮನವರ ದೇವಸ್ಥಾನದ ಸ್ವತ್ತು.

ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/–ಶಿರಸ್ತೇದಾರರು
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಸಿಜೆಎಂ ನ್ಯಾಯಾಲಯ, ಮೈಸೂರು

ವಾದಿಗಳ ಪರ ವಕೀಲರು
ಸಹಿ/– ಮಹೇಶ್, ಬಿ.ಕಾಂ., ಎಲ್.ಎಲ್.ಬಿ, ವಕೀಲರು, #122/1, 2ನೇ ಮಹಡಿ, ವಾಣಿವಿಲಾಸ ರಸ್ತೆ, ಚಾಮರಾಜಪುರಂ, ಮೈಸೂರು

ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು
ಮೊದಲನೇ ಮಹಡಿ, ಎಸ್.ಜೆ.ಆರ್.ವೈ ಕಟ್ಟಡ, ನಗರಸಭೆ ಆವರಣ, ಹುಣಸೂರು – 571105 Gmail: hunsurplanning@gmail.com
ಸಂ.ಹು.ಯೋ.ಪ್ರಾ/ದೊ.ಹು.ಗ್ರಾ/ಭೂ.ಉ.ಬ/458/2022–23 ದಿ: 20.02.2023

ಸಾರ್ವಜನಿಕ ಪ್ರಕಟಣೆ

(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಪ್ರಕರಣ 69(3) ಹಾಗೂ 69(4) ರನ್ವಯ)

ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಹುಣಸೂರು ಗ್ರಾಮದ ಸ.ನಂ.117/1(ಹಳೆ ಸ.ನಂ.117) ರಲ್ಲಿ 01ಎ–01ಗು ಪೈಕಿ 00ಎ–28ಗು ವಿಸ್ತೀರ್ಣದ ಜಮೀನನ್ನು ಸರ್ಕಾರದಿಂದ ಅನುಮೋದನೆಯಾಗಿರುವ ಮಹಾಯೋಜನೆಯಲ್ಲಿ ಉದ್ಯಾನವನ ಮತ್ತು ಬಯಲು ಜಾಗ ವಲಯದಿಂದ ವಸತಿ ಉದ್ದೇಶಕ್ಕಾಗಿ ಭೂ ಉಪಯೋಗ ಬದಲಾವಣೆ ಕೋರಿ ಶ್ರೀ.ನಿಂಗರಾಜು ಬಿನ್ ಎಲ್ಲಪ್ಪ ಮತ್ತು ಶ್ರೀ.ನಾಗರಾಜು ಬಿನ್ ಎಲ್ಲಪ್ಪ ಇವರು ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಅರ್ಜಿದಾರರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿಯು ಈ ಕೆಳಕಂಡಂತಿರುತ್ತದೆ

ದೊಡ್ಡಹುಣಸೂರು ಗ್ರಾಮದ ಸ.ನಂ.117/1(ಹಳೆ ಸ.ನಂ.117) ರಲ್ಲಿ 01ಎ–01ಗು ಪೈಕಿ 00ಎ–28ಗು ವಿಸ್ತೀರ್ಣದ ಜಮೀನು ಸರ್ಕಾರದಿಂದ ಅನುಮೋದನೆಯಾಗಿರುವ ಹುಣಸೂರು ಪಟ್ಟಣದ ಮಹಾಯೋಜನೆಯಲ್ಲಿ ಉದ್ಯಾನವನ ಮತ್ತು ಬಯಲು ಜಾಗ ವಲಯದಲ್ಲಿದ್ದು ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಪಡೆದು ತದನಂತರ ವಸತಿ ಉದ್ದೇಶಕ್ಕೆ ಭೂ ಪರಿವರ್ತನೆ ಆದ ನಂತರ ವಸತಿ ವಿನ್ಯಾಸ ನಕ್ಷೆಗೆ ಅನುಮೋದನೆ ಪಡೆದು ವಸತಿ ಬಡಾವಣೆಯನ್ನು ನಿರ್ಮಿಸಿ ಸಾರ್ವಜನಿಕರಿಗೆ ಮತ್ತು ಬಡವರಿಗೆ ಕಡಿಮೆ ದರಲ್ಲಿ ನಿವೇಶನವನ್ನು ಮಾರಾಟ ಮಾಡುವ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ಹೊಂದಿರುತ್ತೇವೆ ಎಂದು ಅರ್ಜಿದಾರರು ತಿಳಿಸಿರುತ್ತಾರೆ.

ಆದ್ದರಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ 69(3) ಹಾಗೂ 69(4)ರ ಪ್ರಕಾರ ಉದ್ಯಾನವನ ಮತ್ತು ಬಯಲು ಜಾಗ ವಲಯದಿಂದ ವಸತಿ ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡುವ ಸಂಬಂಧ ಸಾರ್ವಜನಿಕರಿಂದ ಯಾವುದೇ ಸಲಹೆ/ಆಕ್ಷೇಪಣೆಗಳಿದ್ದಲ್ಲಿ ಈ ಪ್ರಕಟಣೆ ಹೊರಡಿಸಿದ ದಿನಾಂಕದಿಂದ 15 ದಿನಗಳ ಒಳಗಾಗಿ ಸದಸ್ಯ ಕಾರ್ಯದರ್ಶಿಗಳು, ಹುಣಸೂರು ಯೋಜನಾ ಪ್ರಾಧಿಕಾರ, ಹುಣಸೂರು ಇವರಿಗೆ ಲಿಖಿತವಾಗಿ/ನೋಂದಾಯಿತ ಅಂಚೆ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಅವಧಿ ಮುಗಿದ ನಂತರ ಬರುವ ಸಲಹೆ/ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/– (ಶ್ರೀ ಹೆಚ್.ಕೆ. ಗಣೇಶ್)	ಸಹಿ/– (ಶ್ರೀ.ಹೆಚ್.ವಿ.ಶ್ರೀಧರ್)
ಅಧ್ಯಕ್ಷರು	ಸದಸ್ಯ ಕಾರ್ಯದರ್ಶಿ
ಹುಣಸೂರು, ಯೋಜನಾ ಪ್ರಾಧಿಕಾರ ಹುಣಸೂರು	ಹುಣಸೂರು, ಯೋಜನಾ ಪ್ರಾಧಿಕಾರ ಹುಣಸೂರು

DIPR/DDMYS/KSMCA/1062/2022-23



ನಕ್ಕರೆ ಅದೇ ಸ್ವರ್ಗ

ಅಜ್ಜಿ : ಗುಂಡ ನಿಮ್ಮ ಟೀಚರ್ ಬರ್ತಾ ಇದ್ದಾರೆ ಅವಿತುಕೋ
ಗುಂಡ : ಮೊದಲು ನೀನು ಅವಿತುಕೋ ಅಜ್ಜಿ
ಅಜ್ಜಿ : ಯಾಕೋ ಗುಂಡ?
ಗುಂಡ : ನೀನು ಸತ್ತಿದ್ದೀಯಾ ಅಂತ ನಾನು ಇವತ್ತು ರಜೆ ಹಾಕಿದ್ದೆ

ಮೈಸೂರು ಮಿತ್ರ

ಗುರುವಾರ, 23 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ಎಲ್ಲಾ ಪಾಠಗಳನ್ನು ಪುಸ್ತಕಗಳಿಂದ ಕಲಿಯಲು ಆಗುವುದಿಲ್ಲ, ಕೆಲವು ಪಾಠಗಳನ್ನು ಜೀವನ ಕೂಡ ಕಲಿಸುತ್ತದೆ –ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಡೆದಷ್ಟು ನೆಲ, ಪಡೆದಷ್ಟು ಫಲ

ನಿಮ್ಮ ಪತ್ರಗಳು

ವಿನಾಕಾರಣ ಬ್ರಾಹ್ಮಣರ ಬಗ್ಗೆ ಅವಹೇಳನಕಾರಿ ಸರಿಯಲ್ಲ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಬ್ರಾಹ್ಮಣ ವರ್ಗವನ್ನು ಟೀಕಿಸುವುದೆಂದರೆ ಎಲ್ಲಾ ರಾಜಕೀಯ ಪಕ್ಷಗಳಿಗೂ ಬಾಯಿ ಚಪಲ. ಕೆಲವು ತಿಂಗಳುಗಳಿಂದ ವಿನಾಕಾರಣ ಕೆಲವು ರಾಜಕೀಯ ಪಕ್ಷಗಳು ಬ್ರಾಹ್ಮಣರ ಬಗ್ಗೆ ಅವಹೇಳನಕಾರಿ ಮಾತಾಡುತ್ತಾ ಬಂದಿವೆ. ಈ ಹಿಂದೆ ಕಾಂಗ್ರೆಸ್ ಪಕ್ಷದ ಧುರೀಣರು ವಿನಾಕಾರಣ ಬ್ರಾಹ್ಮಣರನ್ನು ನಿಂದಿಸಿದರೆ ಈಗ ಜೆಡಿಎಸ್ ಪಕ್ಷದ ಕುಮಾರಸ್ವಾಮಿಯವರು ಪ್ರಹ್ಲಾದ್ ಜೋಶಿಯವರನ್ನು ಟೀಕಿಸುವ ಭರದಲ್ಲಿ ಇಡೀ ಬ್ರಾಹ್ಮಣ ಸಮಾಜವನ್ನು ನಿಂದಿಸಲು ಆರಂಭಿಸಿದ್ದಾರೆ. ಶತ ಶತಮಾನಗಳಿಂದಲೂ ಬ್ರಾಹ್ಮಣರು ಯಾವುದೇ ಹಿಂಸೆಯನ್ನಾಗಲೀ, ದೊಂಬಿಯನ್ನಾಗಲೀ ಮಾಡುತ್ತಾ ಬಂದವರಲ್ಲ. ಸಮಾಜದ ಆಗುಹೋಗುಗಳನ್ನು ಗಮನಿಸುತ್ತಾ ದೇಶಕ್ಕೆ ಸಮಾಜಕ್ಕೆ ತಮ್ಮ ಸಹಾಯ ಹಸ್ತವನ್ನು ನೀಡುತ್ತಾ ಬಂದಿರುತ್ತದೆ. ಬ್ರಾಹ್ಮಣ ಸಮಾಜದ ಹಲವರು ತಪ್ಪು ಮಾಡಿದರೆ ಇಡೀ ಸಮಾಜವನ್ನು ಕೀಳು ಮಟ್ಟದ ಭಾಷೆಯಿಂದ ನಿಂದಿಸುವುದು ಎಷ್ಟು ಸರಿ? ಕುಮಾರಸ್ವಾಮಿಯವರು ಒಬ್ಬ ವ್ಯಕ್ತಿಯನ್ನು ಟೀಕಿಸಬೇಕೇ ವಿನಹ ಆತ ಹುಟ್ಟಿದ ಜಾತಿಯನ್ನಲ್ಲ. ಕುಮಾರಸ್ವಾಮಿಯವರು ಕರ್ನಾಟಕದಲ್ಲಿ 2 ಬಾರಿ ಮುಖ್ಯಮಂತ್ರಿಯಾಗಿ ಜಾತ್ಯಾತೀ ಪಕ್ಷವೆಂದು ಹೆಸರಿಟ್ಟುಕೊಂಡು ಜಾತಿ ನಿಂದನೆ ಎಷ್ಟು ಸರಿ. ಯಾವುದೇ ಪಕ್ಷ ತಾನು ಆಡಳಿತದಲ್ಲಿ ಸಮರ್ಥನಾದರೆ ಜನರೇ ತಾವಾಗಿ ಮತ ನೀಡಿ ಅವರನ್ನು ಗೆಲ್ಲಿಸುತ್ತಾರೆ. ಬ್ರಾಹ್ಮಣರು ಈ ಮಣ್ಣಿನಲ್ಲಿ ಹುಟ್ಟಿ ಬಂದವರು. ವಿದೇಶದಿಂದ ಬಂದವರಲ್ಲ. ಬಡ ಬ್ರಾಹ್ಮಣರೆನ್ನುತ್ತಾರೆ ವಿನಹ ಬೇರೇನನ್ನೂ ಬ್ರಾಹ್ಮಣರ ಬಗ್ಗೆ ಬರೆಯಲಾರರು. ಕಾಶ್ಮೀರದಲ್ಲಿ ಬ್ರಾಹ್ಮಣ ಜಾತೀಯ ಪಂಡಿತರನ್ನು ಹಂತ ಹಂತವಾಗಿ ಕೊಲ್ಲುವಾಗ ಯಾರೂ ಅವರ ಬಗ್ಗೆ ಅನುಕಂಪ ತೋರುತ್ತಿಲ್ಲ.

ಇನ್ನು ಮಹಾತ್ಮಾ ಗಾಂಧಿಯನ್ನು ಕೊಂದಿರುವುದು ಗೊಡ್ಸೆ ಎಂಬ ವ್ಯಕ್ತಿ. ಅದು ತಪ್ಪು. ಇದು ಆತನ ವೈಯಕ್ತಿಕ ವಿಚಾರ. ಆತನ ಜಾತಿಯವರನ್ನು ಪೂನಾ ಮಹಾರಾಷ್ಟ್ರದಲ್ಲಿ ನೂರಾರು ಜನರನ್ನು 1948 ರಲ್ಲಿ ಕೊಂದು ಹಾಕಿದರು.

ಇನ್ನು ಇಂದಿರಾ ಗಾಂಧಿಯವರನ್ನು ಅವರ ಕಾವಲುಗಾರ ಪಂಜಾಬಿಯೊಬ್ಬ ಕೊಂದಾಗ ಆತನ ಜಾತಿಯವರನ್ನು ದೆಹಲಿ, ಮುಂಬಯಿ ಮುಂತಾದ ನಗರದಲ್ಲಿ ಸಾವಿರಾರು ಜನರನ್ನು ಕಂಡ ಕಂಡಲ್ಲಿ ಕೊಂದು ಹಾಕಿದರು. ಆಗ ಯಾವ ಸರಕಾರವೂ ಆ ಜನರನ್ನು ರಕ್ಷಿಸಲು ಬರಲಿಲ್ಲ. ಹೀಗಿರುವಾಗ ಒಬ್ಬ ವ್ಯಕ್ತಿ ತಪ್ಪು ಮಾಡಿದಲ್ಲಿ ಇಡೀ ಜನಾಂಗವನ್ನು ದೂಷಿಸುವುದು ಎಷ್ಟು ಸಮಂಜಸ. ಕುಮಾರಸ್ವಾಮಿಯವರೇ ತಾವು ದೇವೇಗೌಡರ ಮಕ್ಕಳನ್ನು ಬುದ್ಧಿವಂತರು. ಈ ಸಮಾಜದ ಬಗ್ಗೆ ತಮಗೆ ತುಂಬಾ ಕಳಕಳಿ ಇದೆ. ಮುಂದಿನ ಮುಖ್ಯಮಂತ್ರಿ ಆಗುವರು. ತಮ್ಮ ಮಾತುಗಳಲ್ಲಿ ವಿನಯ ವಿರಲಿ. ಸರ್ವೇಜನ ಸುಖಿನೋ ಭವಂತು' ಎನ್ನುವವರ ಮೇಲೆ ಅನುಕಂಪವಿರಲಿ.

–ಮಜೂರು ರಘುವೀರ ಪುರಾಣಿಕ, ಮೈಸೂರು.

ರಾಜಕಾರಣಿಗಳ ಆರೋಪ, ಪ್ರತ್ಯಾರೋಪ ಸರಿಯೇ?

ಮಾನ್ಯರೆ,

ಚುನಾವಣೆ ಹತ್ತಿರ ಬರುತ್ತಿದ್ದಂತೆ ಎಲ್ಲಾ ರಾಜಕಾರಣಿಗಳು ಹರಿಶ್ಚಂದ್ರರಂತೆ ಮಾತನಾಡುತ್ತಾರೆ. ಕೋಟಿಗಟ್ಟಲೆ ಭ್ರಷ್ಟಾಚಾರವಾಗಿದೆ ಎಂದು ಒಂದು ಪಕ್ಷದವರು ಇನ್ನೊಂದು ಪಕ್ಷದವರ ಮೇಲೆ ಆರೋಪ, ಪ್ರತ್ಯಾರೋಪ ಮಾಡುತ್ತಾರೆ. ಇದು ಜನತೆಯ ದಿಕ್ಕು ತಪ್ಪಿಸುವ ಪ್ರಯತ್ನ.

ದಾಖಲೆಗಳು, ಸಾಕ್ಷ್ಯಗಳು, ಮಾಹಿತಿಗಳು ಎಲ್ಲಾ ನಮ್ಮ ಹತ್ತಿರ ಇದೆ. ಅದನ್ನು ಸಮಯ ಬಂದಾಗ ಬಿಡುಗಡೆ ಮಾಡುತ್ತೇವೆ ಎಂದು ಹೇಳುತ್ತಾರೆ. ಇದು ಹೇಗೆಂದರೆ, ದಸರಾ ಸಮಯದಲ್ಲಿ ಕಂಡ ಕಂಡ ಕಡೆ ರಸ್ತೆ ಬದಿಯಲ್ಲಿ ನಿಂತು, ಹಾವಾಡಿಗರು ನನ್ನ ಬುಟ್ಟಿಯೊಳಗೆ ನಾಗರ ಹಾವಿದೆ. ಒಳ್ಳೊಳ್ಳೇ ಹಾವುಗಳಿವೆ. ಅವುಗಳನ್ನೆಲ್ಲಾ ಹೊರಗಡೆ ಬಿಡ್ತೀನಿ ಅಂತ ಹೇಳಿ ಹೇಳಿ ಕೊನೆಗೆ ಅವನ ಬುಟ್ಟಿಯಿಂದ ಒಂದೋ ಎರಡೋ ಸಣ್ಣ ಸಣ್ಣ ಹಾವುಗಳು ಹೊರಬರುವ ಹಾಗೆ.

ಇದನ್ನೆಲ್ಲಾ ನೋಡಿದರೆ, ಒಂದು ಪಕ್ಷ ಇನ್ನೊಂದು ಪಕ್ಷದೊಡನೆ ಒಳ ಒಪ್ಪಂದ, ಒಂದು ತರಹ ಮ್ಯಾಚ್ ಫಿಕ್ಸಿಂಗ್ ಮಾಡಿಕೊಂಡಂತೆ ಕಾಣುತ್ತದೆ. ಯಾವುದೇ ಆರೋಪಗಳನ್ನು ದಾಖಲೆಗಳು, ಮಾಹಿತಿಗಳು, ಸಾಕ್ಷ್ಯಗಳ ಸಹಿತ ಹಾಜರುಪಡಿಸಿ ಲೋಕಾಯುಕ್ತ ನ್ಯಾಯಾಲಯಕ್ಕೆ ಸಲ್ಲಿಸುವುದೇ ಇಲ್ಲ. ತಾರ್ಕಿಕ ಅಂತ್ಯಕ್ಕಂತೂ ತೆಗೆದುಕೊಂಡು ಹೋಗುವುದಿಲ್ಲ.

ನಿಮ್ಮ ಹತ್ತಿರ ಯಾವ ದಾಖಲೆಗಳು ಇಲ್ಲದೆ ರಾಜ್ಯದ ಜನತೆಯನ್ನು ಮೂರ್ಖರನ್ನಾಗಿ ಮಾಡಲು ಹೋಗಬೇಡಿ. ರಾಜ್ಯದ ಜನತೆಗೆ ಎಲ್ಲಾ ರಾಜಕೀಯ ಪಕ್ಷಗಳು ಏನು ಅಂತ ಗೊತ್ತು. ಎಲ್ಲಾ ಪಕ್ಷಗಳು ಭ್ರಷ್ಟಾಚಾರದ ಬಗ್ಗೆ ಆರೋಪ, ಪ್ರತ್ಯಾರೋಪಗಳನ್ನು ಅರ್ಥವಿಲ್ಲದೆ, ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗಲಾರದೆ, ಪರದಾಡುವುದನ್ನು ನೋಡುತ್ತಿದ್ದಾರೆ. 25 ವರ್ಷಗಳ ಹಿಂದೆ ಬಂದಿದ್ದ 'ಹಮ್ ಸಬ್ ಚೋರ್ ಹೈ' ಅನ್ನುವ ಹಿಂದಿ ಸಿನಿಮಾ ಜ್ಞಾಪಕಕ್ಕೆ ಬರುತ್ತದೆ. ನಮ್ಮ ರಾಜಕೀಯ ಪಕ್ಷಗಳ ಸ್ಥಿತಿ ಈ ರೀತಿ ಇದೆ. ಜನರು ಇದನ್ನು ನೋಡಿ ಮುಂಬರುವ ಚುನಾವಣೆಯಲ್ಲಾದರೂ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು.

–ಎ.ಎಸ್. ಗೋಪಾಲಕೃಷ್ಣ, ರಾಮಕೃಷ್ಣನಗರ, ಮೈಸೂರು.

ಶ್ರೀ ಚಾಮುಂಡಿಬೆಟ್ಟದ ರಾಜಗೋಪುರಕ್ಕೆ ವಿಶೇಷ ದಿನಗಳಲ್ಲೂ ದೀಪಾಲಂಕಾರ ಕಲ್ಪಿಸಿ

ಮಾನ್ಯರೆ,

ಮೈಸೂರಿನ ಶ್ರೀ ಚಾಮುಂಡಿ ಬೆಟ್ಟವು ವಿಶ್ವ ಪ್ರವಾಸಿ ಭೂಪಟದಲ್ಲಿ ಮಹತ್ವದ ಸ್ಥಾನ ಪಡೆದಿದ್ದು, ಪ್ರತೀ ದಿನ ದೇಶ ವಿದೇಶಗಳ ಸಾವಿರಾರು ಭಕ್ತರು, ಪ್ರವಾಸಿಗರು ಇಲ್ಲಿಗೆ ಭೇಟಿ ನೀಡಿ ತಾಯಿ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆದು ಪುನೀತರಾಗುತ್ತಿದ್ದಾರೆ. ಇಂತಹ ಪ್ರತಿಷ್ಠಿತ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ರಾಜಗೋಪುರಕ್ಕೆ ವಿಶೇಷ ಸಂದರ್ಭದಲ್ಲಿ ಹಾಗೂ ಭಕ್ತರು ದೀಪಾಲಂಕಾರದ ಸೇವೆ ಮಾಡಿಸಿದ ಸಂದರ್ಭದಲ್ಲಿ ಮಾತ್ರ ದೀಪಾಲಂಕಾರ ಮಾಡಲಾಗುತ್ತಿದೆ.

ತಾಯಿಯ ಸೇವೆಗೆ ವಿಶೇಷ ದಿನವೆಂದೇ ಪರಿಗಣಿಸಲಾಗಿರುವ ಪ್ರತೀ ಮಂಗಳವಾರ ಹಾಗೂ ಶುಕ್ರವಾರಗಳಂದು ಸಂಜೆ 7 ಗಂಟೆಗೆ ಹಾಗೂ ಮೈಸೂರು ಅರಮನೆಯಲ್ಲಿ ದೀಪಾಲಂಕಾರ ಮಾಡುವ ಸಂದರ್ಭದಲ್ಲಿ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ಅಮ್ಮನವರ ದೇವಸ್ಥಾನದ ರಾಜಗೋಪುರಕ್ಕೂ ಮಂಗಳವಾರ, ಶುಕ್ರವಾರ, ಭಾನುವಾರ ಹಾಗೂ ಹಬ್ಬ ಹರಿದಿನಗಳು ಮತ್ತಿತರ ವಿಶೇಷ ದಿನಗಳಲ್ಲಿ ದೀಪಾಲಂಕಾರ ಮಾಡಲು ಕ್ರಮಕೈಗೊಳ್ಳಬೇಕೆಂದು ಮನವಿ.

–ಹೆಚ್.ಎಸ್. ಸಿದ್ದೇಶ್, ರಾಮಕೃಷ್ಣನಗರ, ಮೈಸೂರು.



ಪ್ರೊ. ಆರ್. ಇಂದಿರಾ
ಸಮಾಜಶಾಸ್ತ್ರಜ್ಞೆ
ramaraoindira@gmail.com

ಸಮಾಜಮುಖಿ

ಬಜೆಟ್ ಭರವಸೆ: ಮಹಿಳಾ ಲೋಕದಲ್ಲಿ ಆಶಾಕಿರಣ



> “ ಚುನಾವಣೆಗಳನ್ನು ಕೇಂದ್ರೀಕರಿಸಿದ ಎಲ್ಲ ಬಜೆಟ್‌ಗಳಂತೆ ಈ ಮುಂಗಡಪತ್ರವೂ ಮಹಿಳಾ ಸಶಕ್ತೀಕರಣವನ್ನು ಚುನಾವಣೆಯ ಕಾರ್ಯ ಸೂಚಿಯಾಗಿರಿಸಿ ಕೊಂಡಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತಿದೆ. ಆದರೆ ಇದರಲ್ಲಿರುವ ಕೆಲ ಆಶಯ ಗಳು ಲಿಂಗ ಸೂಕ್ಷ್ಮ ಚೌಕಟ್ಟಿನಲ್ಲಿ ವಿಶ್ಲೇಷಣೆ–ವಿವೇಚನೆಗಳಿಗೆ ಒಳಪಟ್ಟರೆ ಅನೇಕ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಬದುಕಿನಲ್ಲಿ ಬದಲಾವಣೆಗಳನ್ನು ತರಬಹುದೇನೋ.

ಕರ್ನಾಟಕದ ವಿಧಾನಸಭೆಯಲ್ಲಿ ಕಳೆದ ವಾರ ಮಂಡನೆಯಾದ ಬಜೆಟ್ಟನ್ನು ಮಹಿಳಾ ಪರ ಎಂದೇ ಗುರುತಿಸಿ, ಅದರಲ್ಲಿ ಘೋಷಣೆಯಾಗಿರುವ ಅನೇಕ ಯೋಜನೆಗಳು ವಿವಿಧ ವರ್ಗಗಳ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಭವಿಷ್ಯದ ಬದುಕಿನ ದಿಕ್ಕನ್ನೇ ಬದಲಾಯಿಸಲಿವೆ ಎಂದು ಬಿಂಬಿಸಲಾಗುತ್ತಿದೆ. ಅವುಗಳಲ್ಲಿ ಮುಖ್ಯವಾಗಿ ಹೆಸರಿಸಬಹುದಾದಂತವು; ಶಾಲಾ–ಕಾಲೇಜು ವಿದ್ಯಾರ್ಥಿನಿಯರಿಗೆ ಉಚಿತ ಬಸ್ ಪಾಸ್; ಮಹಿಳಾ ಕಾರ್ಮಿಕರಿಗೆ ಉಚಿತ ಬಸ್ ಪಾಸ್; ಒಂದು ಲಕ್ಷ ಮಹಿಳೆಯರಿಗೆ ಕೌಶಲ ತರಬೇತಿ; ಆಶಾ ಕಾರ್ಯಕರ್ತೆಯರಿಗೆ ಸಹಾಯ ಧನ ಹೆಚ್ಚಳ; ಅಂಗನವಾಡಿ ಕಾರ್ಯಕರ್ತೆಯರಿಗೆ ಸಹಾಯ ಧನ ಹೆಚ್ಚಳದ ಜೊತೆಯಲ್ಲಿ ಗ್ರ್ಯಾಚುಟಿ ನೀಡುವಿಕೆ ಮತ್ತು ಆರೋಗ್ಯ ರಕ್ಷಕ ಸಹಾಯಧನ. ಆಸಿಡ್ ದಾಳಿಗೆ ಒಳಗಾದ ಮಹಿಳೆಯರಿಗೆ ನೀಡುತ್ತಿರುವ ಮಾಶಾಸನವನ್ನು 3,000 ಗಳಿಂದ 10,000 ರೂಪಾಯಿಗಳಿಗೆ ಹೆಚ್ಚಿಸುವುದರ ಜೊತೆಗೆ ಅವರಿಗೆ ಮನೆ ಮಂಜೂರಾತಿ ಮತ್ತು ಉದ್ಯಮ ಸ್ಥಾಪನೆಗೆ ಆರ್ಥಿಕ ನೆರವು ನೀಡುವ ಆಶ್ವಾಸನೆಗಳನ್ನೂ ನೀಡುವ ಮೂಲಕ ಮಹಿಳೆಯರ ವಿರುದ್ಧ ನಡೆಯುವ ಅತ್ಯಂತ ಕ್ರೂರ ಸ್ವರೂಪದ ದೌರ್ಜನ್ಯಕ್ಕೆ ಬಲಿಯಾದವರ ಬದುಕನ್ನು ಬದಲಿಸುವ ಮನಸ್ಸು ತನಗಿದೆ ಎಂಬ ಸೂಚನೆಯನ್ನು ಸರ್ಕಾರ ಇತ್ತರೆ, 6 ಹೊಸ ಮಹಿಳಾ ಪೊಲೀಸ್ ಠಾಣೆಗಳ ಸ್ಥಾಪನೆ ಮೂಲಕ ಮಹಿಳೆಯರ ವಿರುದ್ಧ ನಡೆಯುವ ಹಿಂಸೆಯನ್ನು ತಡೆಗಟ್ಟುವತ್ತಲೂ ಆಡಳಿತ ವ್ಯವಸ್ಥೆ ಗಮನ ಹರಿಸುತ್ತಿದೆ ಎಂಬ ಸಂದೇಶವನ್ನೂ ನೀಡಲೆತ್ನಿಸಿದೆ.

ನನ್ನ ದೃಷ್ಟಿಯಲ್ಲಿ ಶಾಲಾ ಮತ್ತು ಕಾಲೇಜು ಹೆಣ್ಣು ಮಕ್ಕಳಿಗೆ ಉಚಿತ ಬಸ್ ಪಾಸ್ ನೀಡುವ ಸೌಲಭ್ಯವನ್ನು ಒದಗಿಸುವುದು ಬಹು ಮುಖ್ಯವಾದ ಹೆಜ್ಜೆ. ಏಕೆಂದರೆ ಅನೇಕ ಹೆಣ್ಣು ಮಕ್ಕಳ ಶೈಕ್ಷಣಿಕ ಕನಸುಗಳು ಹಾಗೂ ಸಾಧನೆಗಳಿಗೆ ಅಡ್ಡಿ ಬರುವುದೇ ವಿದ್ಯಾ ಸಂಸ್ಥೆಗಳನ್ನು ತಲುಪಲು ಅವರಿಗಿರುವ ಅಡ್ಡಿಗಳು. ಅವರ ವಾಸಸ್ಥಾನಗಳು ಶಾಲಾ ಕಾಲೇಜುಗಳಿಂದ ದೂರವಾಗುತ್ತಾ ಹೋದ ಹಾಗೆಲ್ಲ ಅವರಿಗೆ ಸಾರಿಗೆ ಸೌಕರ್ಯವನ್ನು ಒದಗಿಸುವುದು ಎಷ್ಟು ಮುಖ್ಯವೋ ಪ್ರಯಾಣದ ವೆಚ್ಚವನ್ನು ಭರಿಸಲು ಅಗತ್ಯವಾದ ಆರ್ಥಿಕ ಸಂಪನ್ಮೂಲಗಳು ಲಭ್ಯವಿರುವುದು ಅಷ್ಟೇ ಮುಖ್ಯ. ಇಂದಿಗೂ ಹೆಣ್ಣು ಮಕ್ಕಳನ್ನು ಪರ ಸ್ಥಳಗಳಿಗೆ ಕಳುಹಿಸಲು ಕುಟುಂಬಗಳ ಹಿಂಜರಿಕೆಗೆ ಎರಡು ಪ್ರಮುಖ ಕಾರಣಗಳಿವೆ. ಮೊದಲನೆಯದು ಸಾರಿಗೆ ಸೌಲಭ್ಯಗಳ ಅಭಾವ ಹಾಗೂ ಮತ್ತೊಂದು ಆರ್ಥಿಕ ಸಂಪನ್ಮೂಲಗಳ ಕೊರತೆ. ಎಲ್ಲಕಿಂತ ಮಿಗಿಲಾಗಿ ಹೆಣ್ಣಿನ ಜೈವಿಕತೆ ಮತ್ತು ಅದನ್ನು ಸುತ್ತುವರೆದಿರುವ ಅಸುರಕ್ಷಿತ ಸಂದರ್ಭಗಳು. ಅನೇಕ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ದೂರ ಕಳುಹಿಸಲು ಹೆದರುವಂಥ ಸ್ಥಿತಿಗೆ ತಳ್ಳುತ್ತದೆ. ಇದು ವಿಶೇಷವಾಗಿ ಅನ್ವಯಿಸುವುದು ನಿರ್ಜನ ಪ್ರದೇಶಗಳು, ಅರಣ್ಯ ತಾಣಗಳು ಅಥವಾ ಗುಡ್ಡ ಗಾಡು ಪ್ರದೇಶಗಳಲ್ಲಿ ವಾಸಿಸುವಂಥ ಕುಟುಂಬಗಳಿಗೆ. ಶಾಲೆಗಳಿಗೆ ಹೋಗಲು ಅವರು ದಿನವೂ 10–20 ಕಿಲೋ ಮೀಟರ್ ದೂರ ನಡೆದೇ ಹೋಗಬೇಕು ಅಥವಾ ವಿದ್ಯಾರ್ಥಿನಿಲಯಗಳಲ್ಲಿ ಸ್ಥಳಾವಕಾಶಕ್ಕೆ ಪರದಾಡಬೇಕು. ಇಂದಿಗೂ ಅನೇಕ ಹಳ್ಳಿಗಳಿಗೆ ಬಸ್ಸು ಬರುವುದು ದಿನಕ್ಕೆ ಎರಡೇ ಬಾರಿ. ಇಂಥ ಪರಿಸ್ಥಿತಿಗಳಲ್ಲಿ ಹೆಣ್ಣು ಮಕ್ಕಳನ್ನು ಮನೆಯಲ್ಲಿ ಉಳಿಸಿಕೊಳ್ಳುವ ಸಾಧ್ಯತೆಗಳು ಹೆಚ್ಚು.

ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ಅರಣ್ಯಾವೃತ್ತ ಪ್ರದೇಶದ ಅನೇಕ ಗ್ರಾಮಗಳ ನಿದರ್ಶನವನ್ನೇ ನಾವು ಇಲ್ಲಿ ನೀಡಬಹುದು. ತೀರಾ ಇತ್ತೀಚಿನವರೆಗೆ ಅನೇಕ ಹೆಣ್ಣು ಮಕ್ಕಳು ಕಿರಿಯ ಪ್ರಾಥಮಿಕ ಶಾಲೆಗೆ ಮಾತ್ರ ಹೋಗಲು ಸಾಧ್ಯವಿತ್ತು, ಏಕೆಂದರೆ ಅವರ ಗ್ರಾಮಗಳಿಗೆ ಪಕ್ಕಾ ರಸ್ತೆಯ ಸೌಕರ್ಯವಾಗಲಿ, ನಡೆದು ಹೋಗುವ ದೂರದಲ್ಲಿ ಮಾಧ್ಯಮಿಕ ಶಾಲೆಗಳಾಗಲೀ, ಪ್ರೌಢ ಶಾಲೆಗಳಾಗಲೀ ಇರಲೇ ಇಲ್ಲ. ಸಾರ್ವಜನಿಕ ಸಾರಿಗೆ ಸೌಲಭ್ಯವಂತೂ ಕನಸಿನ ಕುದುರೆಯಾಗಿತ್ತು. ಈ ಪರಿಸ್ಥಿತಿಯಲ್ಲಿ ಶಿಕ್ಷಣವನ್ನು ಮುಂದುವರೆಸಬೇಕಂದರೆ, ಬಂಧುಗಳ ಮನೆಗಳಲ್ಲಿ ಮಕ್ಕಳನ್ನು ಬಿಡಬೇಕು, ಇಲ್ಲ ತಾವೇ ವಾಸ ಸ್ಥಾನವನ್ನು ಬದಲಿಸಬೇಕು. ಇದು ಎಲ್ಲರಿಗೂ ಹೇಗೆ ತಾನೇ ಸಾಧ್ಯ? ಮೇಲಾಗಿ ಜೀವನ ನಿರ್ವಹಣೆಗಾಗಿ ಕೂಲಿಯನ್ನು ಅವಲಂಬಿಸಿರುವ ವಲಸಿ ಕುಟುಂಬಗಳ ಮಕ್ಕಳಿಗಂತೂ ಶಿಕ್ಷಣ ಮರಳುಗಾಡಿನ ಮರೀಚಿಕೆಯಾಗಿತ್ತು. ಈಗೀಗ ತಾನೇ ಕೆಲ ಗ್ರಾಮಗಳಿಗೆ ಬಸ್ ಬರಲು ಆರಂಭಿಸಿದ್ದು ಅನೇಕ ಮಕ್ಕಳ ಉನ್ನತ ಶಿಕ್ಷಣದ ಕನಸುಗಳು ಗರಿ ಗೆದುರುತ್ತಿವೆ.

ಬಜೆಟ್‌ನಲ್ಲಿ ಘೋಷಣೆಯಾಗಿರುವ ಉಚಿತ ಬಸ್ ಪಾಸ್ ಸೌಕರ್ಯದ ಅನುಕೂಲ ಇಂಥ ಎಲ್ಲ ಅರ್ಹ ಮಕ್ಕಳಿಗೆ ಲಭ್ಯವಾದರೆ, ಅವರ ಬದುಕಿನಲ್ಲಿ ಬೆಳಕಿನ ಕಿಡಿಗಳು ಹತ್ತಿ ಕೊಳ್ಳುತ್ತವೆ ನಿಜ. ಆದರೆ ರಾಜ್ಯದ ಸುಮಾರು 2600 ಗ್ರಾಮಗಳಿಗೆ ಸಾರ್ವಜನಿಕ ಸಾರಿಗೆ ಸಂಪರ್ಕ ಇಲ್ಲ. ವಿಮಾನ ನಿಲ್ದಾಣಗಳು ಮತ್ತು ವಿಮಾನ ಮಾರ್ಗಗಳ ಹೆಚ್ಚಳ, ಮೆಟ್ರೊ ಮಾರ್ಗಗಳ ವಿಸ್ತರಣೆ, ಅತೀ ವೇಗದ ಐಷಾರಾಮಿ ರೈಲುಗಳ ಮತ್ತು ಬಸ್ಸುಗಳ ಹೆಚ್ಚಳ, ಬಹು ಪಥ ಹೆದ್ದಾರಿಗಳ ನಿರ್ಮಾಣ–ಇವೇ ಮುಂತಾದ ಸೌಕರ್ಯಗಳತ್ತ ಗಮನ ಹರಿಸಲಾಗುತ್ತಿದೆ.

ಗ್ರಾಮದ ರಸ್ತೆಗಳ ಪರಿಸ್ಥಿತಿಯ ಸುಧಾರಣೆ, ಗ್ರಾಮಾಂತರ ಪ್ರದೇಶಗಳಿಗೆ ಸಂಚರಿಸುವ ಬಸ್ಸುಗಳ ಸಂಖ್ಯೆಯಲ್ಲಿ ಹೆಚ್ಚಳ–ಇವೆರಡರತ್ತ ಗಮನ ಹರಿಸಿದರೆ ಮಾತ್ರ ಉಚಿತ ಬಸ್ ಪಾಸ್ ಸೌರ್ಯಕ್ಕೆ ಒಂದರ್ಥ ಬರುವುದು. ಮೇಲಾಗಿ ವಿದ್ಯಾರ್ಥಿಗಳಿಗೆ ಕೈಗೆಟುಕುವ ದರಗಳಲ್ಲಿ ವರ್ಷವಿಡೀ ಬಸ್ ಪಾಸ್ ವ್ಯವಸ್ಥೆಯನ್ನು ಈಗಾಗಲೇ ಸರ್ಕಾರ ಜಾರಿಗೆ ತಂದಿದ್ದು, ಉಚಿತ ಬಸ್ ಪಾಸ್ ವ್ಯವಸ್ಥೆಯನ್ನು ಯಾರು, ಹೇಗೆ ಮತ್ತು ಎಲ್ಲಿ ಬಳಸಿಕೊಳ್ಳ ಬಹುದು ಎಂಬ ಪ್ರಶ್ನೆಗಳನ್ನು ಆಧಾರವಾಗಿಟ್ಟುಕೊಂಡು ಪೂರ್ವಾಧ್ಯಯನವನ್ನು ಕೈಗೊಳ್ಳುವುದು ಸೂಕ್ತ.

ಸಂಘಟಿತ ಕ್ಷೇತ್ರದ ಮಹಿಳಾ ಕಾರ್ಮಿಕರಿಗೆ ಉಚಿತ ಬಸ್ ಪಾಸ್ ನೀಡುವ ಘೋಷಣೆ ಅನೇಕ ಪ್ರಶ್ನೆಗಳನ್ನು ಎತ್ತುತ್ತದೆ. ನಮ್ಮ ದೇಶದ ದುಡಿಯುವ ವರ್ಗದಲ್ಲಿರುವ ಅತೀ ಹೆಚ್ಚಿನ ಸಂಖ್ಯೆಯ ಮಹಿಳಾ ಕಾರ್ಮಿಕರು ಅಸಂಘಟಿತ ಕ್ಷೇತ್ರದಲ್ಲಿದ್ದು ಸಂಘಟಿತ ಕ್ಷೇತ್ರಕ್ಕೆ ಹೋಲಿಸಿದಾಗ ಅವರಿಗೆ ಕಾನೂನಾತ್ಮಕ ರಕ್ಷಣೆಯೂ ಇಲ್ಲ, ಉದ್ಯೋಗ ಭದ್ರತೆಯೂ ಇಲ್ಲ. ಕೋವಿಡ್ ನಂತರದಲ್ಲಿ ಜೀವನಾಧಾರಗಳನ್ನು ಕಳೆದು ಕೊಂಡವರಲ್ಲಿ ಅತೀ ಹೆಚ್ಚಿನ ಸಂಖ್ಯೆಯವರು ಅಸಂಘಟಿತ ಕ್ಷೇತ್ರದ ಮಹಿಳಾ ಕಾರ್ಮಿಕರು. ಸಂಘಟಿತ ಕ್ಷೇತ್ರದಲ್ಲಿ ಕೆಲಸ ಮಾಡುವ ಅನೇಕ ಮಹಿಳೆಯರಿಗೆ ಅವರವರ ಉದ್ಯೋಗ ಸಂಸ್ಥೆಗಳಿಂದ ವಾಹನ ಸೌಕರ್ಯವನ್ನು ಒದಗಿಸಲಾಗಿದೆ, ಅಥವಾ ಅವರ ಬಳಿ ಖಾಸಗಿ ವಾಹನಗಳೂ ಇವೆ. ಇವರಲ್ಲಿ ಅನೇಕರು ಇಂದಿಗೂ ಪೂರ್ಣವಾಗಿ ಅಥವಾ ಭಾಗಶಃ ಮನೆಯಿಂದ ಕೆಲಸ ನಿರ್ವಹಿಸುತ್ತಿದ್ದಾರೆ. ಆದರೆ ಕಟ್ಟಡ ಕಾರ್ಮಿಕರು, ಮನೆಗೆಲಸಗಾರರು ಅಥವಾ ಸಿದ್ಧ ಉಡುಪು ಕಾರ್ಖಾನೆಗಳಲ್ಲಿ ಕೆಲಸ ಮಾಡುವವರು ನಿಜವಾಗಿ ಆರ್ಥಿಕ ಸಂಕಷ್ಟಗಳನ್ನು ಎದುರಿಸುತ್ತಿರುವವರು. ಬಜೆಟ್ 23ರಲ್ಲಿ ಘೋಷಿಸಿರುವ ಹಾಗೆ 30 ಲಕ್ಷ ಮಹಿಳಾ ಕಾರ್ಮಿಕರೆಂದರೆ ಯಾರು, ಯಾವ–ಯಾವ ಉದ್ಯೋಗ ಸಂಸ್ಥೆಗಳಲ್ಲಿ ಅವರು ಕಾರ್ಯ ನಿರ್ವಹಿಸುತ್ತಿದ್ದಾರೆ ಮತ್ತು ಉಚಿತ ಬಸ್ ಪಾಸ್ ಸೌಕರ್ಯವನ್ನು ನೀಡಲು ಪರಿಗಣಿಸುವ ಮಾನ ದಂಡಗಳಾವುವು– ಇವೇ ಮುಂತಾದ ಪ್ರಶ್ನೆಗಳಿಗೆ ಮೊದಲು ಉತ್ತರಗಳನ್ನು ಹುಡುಕಬೇಕಾಗಿದೆ.

ಎಲ್ಲಕಿಂತ ಮಿಗಿಲಾಗಿ ಅಸಂಘಟಿತ ಕ್ಷೇತ್ರದ ಮಹಿಳಾ ಕೆಲಸಗಾರರನ್ನು ಈ ಯೋಜನೆಯಿಂದ ದೂರವಿಟ್ಟಿರುವುದೇಕೆ ಎಂಬ ಪ್ರಶ್ನೆಗೆ ಉತ್ತರ ಬೇಕಾಗಿದೆ. ಈಗಾಗಲೇ ಉಚಿತ ಬಸ್ ಪಾಸ್ ಯೋಜನೆ ಕೆಲ ರಾಜ್ಯಗಳಲ್ಲಿ ಜಾರಿಯಲ್ಲಿದ್ದು ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ನಡುವೆ ಯಾವ ಬಗೆಯ ವ್ಯತ್ಯಾಸವನ್ನೂ ಅಲ್ಲಿ ಮಾಡಿಲ್ಲ. ನಮ್ಮ ರಾಜ್ಯದಲ್ಲಿ ಏಕೆ ಈ ತಾರತಮ್ಯ ಎಂಬ ಪ್ರಶ್ನೆ ಎದ್ದಿದೆ ಮತ್ತು ಅಸಂಘಟಿತ ಕಾರ್ಮಿಕ ವಲಯದಲ್ಲಿ ಅಸಮಾಧಾನ ವ್ಯಕ್ತವಾಗುತ್ತಿದೆ. ಈ ವಿಚಾರಗಳನ್ನು ಕುರಿತ ಗಂಭೀರ ಚಿಂತನೆ ಅಗತ್ಯವಿದೆ.

ಅಂಗನವಾಡಿ ಮತ್ತು ಆಶಾ ಕಾರ್ಯಕರ್ತೆಯರಿಗೆ ಸಹಾಯಧನವನ್ನು ಅನುಕ್ರಮವಾಗಿ 1500 ಮತ್ತು 1000 ರೂಪಾಯಿಗಳಿಂದ ಹೆಚ್ಚಿಸುವ ಭರವಸೆ, ಬೆಲೆಗಳು ಹೆಚ್ಚಾಗುತ್ತಿರುವ ಈ ಕಾಲದಲ್ಲಿ ಅವರ ಬದುಕಿನ ಪರಿಸ್ಥಿತಿಗಳನ್ನು ಬದಲಾಯಿಸುತ್ತವೆ ಎಂಬುದು ಪ್ರಶ್ನಾರ್ಹ. ಕೋವಿಡ್ ಕಾಲದಲ್ಲಿ ಅತೀ ಗಂಭೀರವಾದ ಪರಿಣಾಮಗಳನ್ನು ಎದುರಿಸಿದ ಈ ಮಹಿಳೆಯರು ನಿರಂತರವಾಗಿ ತಮ್ಮ ಉದ್ಯೋಗ ಸ್ಥಿತಿಗಳ ಸುಧಾರಣೆಗಾಗಿ ಹೋರಾಟವನ್ನು ನಡೆಸುತ್ತಲೇ ಬಂದಿದ್ದಾರೆ. ಅದಕ್ಕೆ ದೊರೆತಿರುವ ಸ್ಪಂದನ ಮಾತ್ರ ತೀರಾ ಉದಾಸೀನವಾದದ್ದು. ಎಲ್ಲಿಯವರೆಗೂ ಅವರಿಗೆ ಸ್ವಾಭಿಮಾನದ ಸುಸ್ಥಿರ ಬದುಕನ್ನು ನಡೆಸುವಂಥ ಪರಿಸ್ಥಿತಿ ನಿರ್ಮಾಣವಾಗುವುದಿಲ್ಲವೋ ಅಲ್ಲಿಯವರೆಗೂ ಈ ಸಣ್ಣ ಮೊತ್ತದ ಸಹಾಯಧನ ಹೆಚ್ಚಳದಿಂದ ಅವರಿಗೆ ಸಶಕ್ತ ಬದುಕನ್ನು ನಡೆಸಲು ಸಾಧ್ಯವಾಗುವುದಿಲ್ಲ.

ಚುನಾವಣೆಗಳನ್ನು ಕೇಂದ್ರೀಕರಿಸಿದ ಎಲ್ಲ ಬಜೆಟ್‌ಗಳಂತೆ ಈ ಮುಂಗಡಪತ್ರವೂ ಮಹಿಳಾ ಸಶಕ್ತೀಕರಣವನ್ನು ಚುನಾವಣೆಯ ಕಾರ್ಯ ಸೂಚಿಯಾಗಿರಿಸಿ ಕೊಂಡಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತಿದೆ. ಆದರೆ ಇದರಲ್ಲಿರುವ ಕೆಲ ಆಶಯಗಳು ಲಿಂಗ ಸೂಕ್ಷ್ಮ ಚೌಕಟ್ಟಿನಲ್ಲಿ ವಿಶ್ಲೇಷಣೆ–ವಿವೇಚನೆಗಳಿಗೆ ಒಳಪಟ್ಟರೆ ಅನೇಕ ಮಹಿಳೆಯರು ಮತ್ತು ಹೆಣ್ಣು ಮಕ್ಕಳ ಬದುಕಿನಲ್ಲಿ ಬದಲಾವಣೆಗಳನ್ನು ತರಬಹುದೇನೋ.

ರೌಡಿಗಳಾಗಿದ್ದವರು ರಾಜಕೀಯಕ್ಕೆ ಬಂದು ಶಾಸಕರಾದರೆ ಅವರಡಿ ಕೆಲಸ ಮಾಡುವ ಪೊಲೀಸರ ಆತ್ಮಗೌರವಕ್ಕೆ ಧಕ್ಕೆ ಆಗೋಲ್ವಾ...!

• ಪ್ರತಿಕೋದ್ಯಮ ವಿದ್ಯಾರ್ಥಿಗಳ ಪ್ರಶ್ನೆಗೆ ಪೊಲೀಸ್ ಆಯುಕ್ತರ ಬ್ರಿಲಿಯಂಟ್ ಉತ್ತರ! • ನಾವು ಮಾಡುತ್ತಿರುವುದು ನಮ್ಮ ವೈಯಕ್ತಿಕ ಕೆಲಸವಲ್ಲ; ಕಾನೂನು ಪಾಲನೆ ಕಾಯಕ



ಮೈಸೂರು, ಫೆ.22(ಎಂಕೆ)– ನಾವು ಮಾಡುತ್ತಿರುವುದು ವೈಯಕ್ತಿಕ ಕೆಲಸವಲ್ಲ. ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ರೌಡಿಗಳಾಗಿದ್ದವರು ರಾಜಕೀಯಕ್ಕೆ ಬಂದು ಶಾಸಕರಾದರೂ ನಮಗೆ ಕರ್ತವ್ಯ ಪಾಲನೆಯಷ್ಟೇ ಮುಖ್ಯವಾಗಿರುತ್ತದೆ ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ರಮೇಶ್ ಬಾನೋತ್ ಹೇಳಿದರು.

ಮೈಸೂರು ವಿವಿ ಮಾನಸಗಂಗೋತ್ರಿಯ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ವತಿಯಿಂದ ಆಯೋಜಿಸಿದ್ದ 'ಮಾದರಿ ಪತ್ರಿಕಾಗೋಷ್ಠಿ' ಕಾರ್ಯಕ್ರಮದಲ್ಲಿ ರೌಡಿಗಳಾಗಿದ್ದವರು ರಾಜಕೀಯಕ್ಕೆ ಬಂದು ಶಾಸಕರಾದರೆ ಅವರಡಿ ಕೆಲಸ ಮಾಡುವ ಪೊಲೀಸರ ಆತ್ಮಗೌರವಕ್ಕೆ ಧಕ್ಕೆ ಆಗೋಲ್ವಾ...! ಎಂಬ ವಿದ್ಯಾರ್ಥಿ ಪ್ರಶ್ನೆಗೆ ಉತ್ತರಿಸಿದ ಆಯುಕ್ತರು, ಆತ್ಮಗೌರಕ್ಕೆ ಧಕ್ಕೆ ಬರುವ ಪ್ರಶ್ನೆಯೇ ಇಲ್ಲ. ಏಕೆಂದರೆ ಇದು ನನ್ನ ವೈಯಕ್ತಿಕ ಕೆಲಸವಲ್ಲ. ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುವಾಗ ಇದೆಲ್ಲವೂ ಸಾಮಾನ್ಯ. ಅಲ್ಲದೆ ಚುನಾವಣೆಗೆ ಸ್ಪರ್ಧಿಸಲು ಎಲ್ಲರಿಗೂ ಅವಕಾಶವಿದೆ ಎಂದರು. ಹಾಗೆಯೇ ಚುನಾವಣೆ ಸಂದರ್ಭ ಹತ್ತಿರವಾಗುತ್ತಿದ್ದಂತೆ ರಾಜಕಾರಣಿಗಳು ದ್ವೇಷದ ಭಾಷಣ ಮಾಡುತ್ತಾರೆ. ಇವರ ವಿರುದ್ಧ ಸುಮೋಟೋ ಕೇಸ್ ದಾಖಲಿಸುವುದಿಲ್ಲವೇ ಎಂಬ ಪ್ರಶ್ನೆಗೆ, ದೇಶದ ಗೌರವದ ಬಗ್ಗೆ, ಸಮಾಜದಲ್ಲಿ ಕೋಮು ದ್ವೇಷ ಉಂಟಾಗುವ ರೀತಿಯಲ್ಲಿ ಭಾಷಣ ಮಾಡಿದವರ ವಿರುದ್ಧ ಸುಮೋಟೋ ಕೇಸ್ ದಾಖಲಿಸಲು ಪೊಲೀಸರಿಗೆ ಅಧಿಕಾರವಿದೆ. ಅದರಂತೆ ಸಾಕಷ್ಟು ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದರು.

ದಂಡಕ್ಕಿಂತ ಹೆಚ್ಚು ಹಣ ಕೇಳಿದರೆ ಕೊಡಬೇಡಿ: ರಸ್ತೆಗಳಲ್ಲಿ ವಾಹನ ಸವಾರರನ್ನು ಅಡ್ಡಗಡ್ಡಿ ದಂಡ ವಸೂಲಿ ಮಾಡುವ ಸಂಚಾರ ಪೊಲೀಸರು, ದಂಡ 300 ರೂ. ಇದ್ದರೆ, 500 ಕೇಳುತ್ತಾರೆ. ಇದು ಯಾವ ನ್ಯಾಯ ಎಂಬ ಪ್ರಶ್ನೆಗೆ, ದಂಡಕ್ಕಿಂತ ಹೆಚ್ಚಿನ ಹಣ ಕೇಳಿದರೆ ಕೊಡಬೇಡಿ. ಆಕಸ್ಮಾತ್ ಕೇಳಿದರೆ ಅದನ್ನು ರೆಕಾರ್ಡ್ ಮಾಡಿ ಕಳುಹಿಸಿದರೆ ತಪ್ಪಿತಸ್ಥ ಪೊಲೀಸರ ವಿರುದ್ಧ ಕ್ರಮ ಜರುಗಿಸಲಾಗುವುದು. ಅಲ್ಲದೆ ಎಲ್ಲಾ ಪೊಲೀಸರು ಹೆಚ್ಚಿನ ಹಣ ವಸೂಲಿ ಮಾಡುತ್ತಾರೆ ಎಂದು ಹೇಳಲಾಗದು. ಸಂಚಾರ ಪೊಲೀಸರು ಅತಿಯಾದ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಕೆಲವೊಮ್ಮೆ ಕಠಿಣವಾಗಿ ವರ್ತಿಸುವುದು ಸಾಮಾನ್ಯ. ವರ್ತನೆ ಸರಿಯಿಲ್ಲದವರ ವಿರುದ್ಧವೂ ಕ್ರಮಕೈಗೊಳ್ಳಲಾಗಿದೆ ಎಂದು ಹೇಳಿದರು.

ಸಂಚಾರ ಪೊಲೀಸರ ವಾಹನ ಸವಾರರನ್ನು ಅಡ್ಡಗಟ್ಟಿ ದಂಡ ವಸೂಲಿ ಮಾಡುವ ಉದ್ದೇಶ ಮತ್ತೊಮ್ಮೆ ಸಂಚಾರ ನಿಯಮ ಉಲ್ಲಂಘನೆ ಮಾಡದಿರಲಿ ಎಂದು. ಮೈಸೂರಿನಲ್ಲಿ ಪ್ರತಿದಿನ ದಂಡ ವಸೂಲಿ ಮಾಡುತ್ತಿದ್ದರೂ ನಿಯಮ ಉಲ್ಲಂಘಿಸಿ ದಂಡ ಕಟ್ಟುವವರ ಸಂಖ್ಯೆ ಕಡಿಮೆಯಾಗಿಲ್ಲ. ಈ ಕುರಿತು ಸಾಕಷ್ಟು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಅರಿವು ಮೂಡಿಸಲಾಗುತ್ತದೆ. ಮುಖ್ಯವಾಗಿ ಕಾಲೇಜು ವಿದ್ಯಾರ್ಥಿಗಳು ಹೆಲ್ಮೆಟ್ ಧರಿಸಬೇಕು ಎಂದು ಕಿವಿ ಮಾತು ಹೇಳಿದ ಅವರು, ಮನೆ ಹೊರಬರುವ ವಾಹನ ಸವಾರರು ಮತ್ತೆ ಸುರಕ್ಷಿತವಾಗಿ ಮನೆ ಸೇರಬೇಕಾದರೆ ಉಲ್ಲಂಘನೆಗಳಿಗೆ ಕಡಿವಾಣ ಹಾಕಬೇಕಾಗುತ್ತದೆ ಎಂದರು.

ಕಾನೂನು ಸುವ್ಯವಸ್ಥೆ ಮೂಲಕ ಅಭಿವೃದ್ಧಿಗೆ ಸಹಕಾರ: ಅಭಿವೃದ್ಧಿ ವಿಷಯದಲ್ಲಿ ಪೊಲೀಸ್ ಇಲಾಖೆ ಕೊಡುಗೆಯೇನು ಎಂಬ ವಿದ್ಯಾರ್ಥಿ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅಭಿವೃದ್ಧಿ ಎಂಬುದು ನಗರಪಾಲಿಕೆ, ಮುಡಾದಂತಹ ಪ್ರಾಧಿಕಾರಗಳಿಗೆ ಸೇರಿದ್ದು. ಆದರೆ ಅದಕ್ಕೆ ಪೂರಕವಾಗಿ ಪೊಲೀಸ್ ಇಲಾಖೆ ಕೆಲಸ ಮಾಡಲಿದೆ. ಬೇರೆ ಬೇರೆ ಕಡೆಗಳಿಂದ ಮೈಸೂರಿಗೆ ಬಂದು ಬಂಡವಾಳ ಹೂಡಿಕೆ ಮಾಡುವ ಉದ್ಯಮಿಗಳು ಮೊದಲು ಗಮನಿಸುವುದು ಇಲ್ಲಿನ ವ್ಯವಸ್ಥೆಯನ್ನು. ನಗರದಲ್ಲಿ ಸಂಚಾರ ವ್ಯವಸ್ಥೆ ಹೇಗಿದೆ. ಇಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಸುಸ್ಥಿತಿಯಲ್ಲಿದೆಯೇ ಎಂಬುದನ್ನು ಗಮನಿಸುತ್ತಾರೆ. ಈ ನಿಟ್ಟಿನಲ್ಲಿ ಪೊಲೀಸ್ ಇಲಾಖೆ ಅಭಿವೃದ್ಧಿಗೆ ಸಹಕಾರಿಯಾಗಿದೆ ಎಂದು ಅಭಿಪ್ರಾಯಿಸಿದರು.

ಕಳೆದ ಚುನಾವಣೆಯಲ್ಲಿ 36 ಪ್ರಕರಣ ದಾಖಲು: ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದು, ಚುನಾವಣೆ ನಿಯಮ ಉಲ್ಲಂಘಿಸಿದವರ ವಿರುದ್ಧ ಕ್ರಮ ತೆಗೆದುಕೊಳ್ಳುವಿರಾ ಎಂಬ ಪ್ರಶ್ನೆಗೆ ಉತ್ತರಿಸಿ, ಕಳೆದ ಚುನಾವಣೆಯಲ್ಲಿ 36 ಚುನಾವಣಾ ನಿಯಮ ಉಲ್ಲಂಘನೆ ಪ್ರಕರಣಗಳು ದಾಖಲಾಗಿವೆ. ಚುನಾವಣೆ ಸಂದರ್ಭದಲ್ಲಿ ಚುನಾವಣಾ ಆಯೋಗ ನೀಡುವ ನಿರ್ದೇಶನಗಳಂತೆ ಕರ್ತವ್ಯ ನಿರ್ವಹಿಸಲಾಗುವುದು. ಈ ಭಾರೀ ಚುನಾವಣೆಗೆ ಈಗಾಗಲೇ ಹಲವು ಸಿದ್ಧತೆಗಳು ನಡೆಯುತ್ತಿದೆ. ಮತದಾರರು ಯಾವುದೇ ಭಯವಿಲ್ಲದೆ, ಹಣದ ಆಮಿಷಕ್ಕೆ ಒಳಗಾಗದೆ ಮತ ಚಲಾಯಿಸುವಂತೆ ಮಾಡುವುದು ಮುಖ್ಯ ಜವಾಬ್ದಾರಿಯಾಗಿದೆ ಎಂದರು.

ಡ್ರಗ್ಸ್ ಸಪ್ಲೆಗೆ ಕಡಿವಾಣ: ಶಾಲಾ–ಕಾಲೇಜು ವಿದ್ಯಾರ್ಥಿಗಳು ಮಾದಕ ವ್ಯಸನಕ್ಕೆ ತುತ್ತಾಗುತ್ತಿದ್ದಾರೆ. ಈಗಾಗಲೇ ಡ್ರಗ್ಸ್ ಸಪ್ಲೆ ಮಾಡುವ ಸಾಕಷ್ಟು ಮಂದಿಯನ್ನು ಜೈಲಿಗಟ್ಟಿದ್ದೇವೆ. ನಿಮ್ಮ ಮುಂದೆ ಏನಾದರೂ ಡ್ರಗ್ಸ್ ಸಪ್ಲೆಯಾಗುತ್ತಿದ್ದರೆ ಮಾಹಿತಿ ನೀಡಿ ಎಂದು ಪತ್ರಿಕೋದ್ಯಮ ವಿದ್ಯಾರ್ಥಿಗಳಿಗೆ ತಿಳಿಸಿದರಲ್ಲದೆ ಸೈಬರ್ ಕ್ರೈಂ ನಿಯಂತ್ರಣ, ಪೊಲೀಸ್ ಠಾಣೆಗಳಲ್ಲಿ ಸಾರ್ವಜನಿಕರಿಗೆ ಸಕರಾತ್ಮಕವಾಗಿ ಸ್ಪಂದಿಸುವುದಕ್ಕೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂದರಲ್ಲದೆ ನಾವೆಲ್ಲರೂ ಒಂದೇ ಸಮಾಜದಲ್ಲಿದ್ದೇವೆ. ಇಲ್ಲಿ ಕೆಟ್ಟವರ್ಯಾರು, ಒಳ್ಳೆಯವರ್ಯಾರು ಎಂದು ಗುರ್ತಿಸುವುದು ಕಷ್ಟ. ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳನ್ನು ಬಿತ್ತುವುದು ಪೊಲೀಸ್ ಹಾಗೂ ಪತ್ರಕರ್ತರ ಮುಖ್ಯ ಜವಾಬ್ದಾರಿಯಾಗಿದೆ. ಹಾಗೆಯೇ ಪತ್ರಕರ್ತರಾಗಿ ಸಾಧನೆ ಮಾಡಬೇಕಾದರೆ ವಿಷಯ ವಿಶ್ಲೇಷಣೆಯ ಜ್ಞಾನ ಅತ್ಯಂತ ಮುಖ್ಯವಾಗಿದೆ ಎಂದು ತಿಳಿಸಿದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ.ಎನ್.ಸಪ್ನ, ಪ್ರಾಧ್ಯಾಪಕರಾದ ಪ್ರೊ.ಸಿ.ಕೆ.ಪುಟ್ಟಸ್ವಾಮಿ, ಪ್ರೊ.ಎನ್.ಮಮತ, ತಾಂತ್ರಿಕ ವಿಭಾಗದ ಮುಖ್ಯಸ್ಥ ಶ್ರೀನಾಥ್ ಅರಸ್ ಮತ್ತಿತರರಿದ್ದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಮೈಸೂರು ಮಿತ್ರ

ಗುರುವಾರ 23 ಫೆಬ್ರವರಿ 2023

ಚಾಮುಂಡೇಶ್ವರಿ ಕ್ಷೇತ್ರದ ಹಿನಕಲ್ ಗ್ರಾಮದಲ್ಲಿ ಅಭಿವೃದ್ಧಿ ಪರ್ವ

24.69 ಕೋಟಿ ವೆಚ್ಚದ ಹಲವು ಕಾಮಗಾರಿಗೆ ಚಾಲನೆ

ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ ಅವರಿಂದ ಭೂಮಿ ಪೂಜೆ



ಹಿನಕಲ್‌ನ ಬಾಬುರಾವ್ ಮನೆ ಬಳಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್‌ಸಿಂಹ ಚಾಲನೆ ನೀಡಿದರು.

ಮೈಸೂರು,ಫೆ.22(ಪಿಎಂ)–ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಹೂಟಗಳ್ಳಿ ನಗರಸಭೆ ವ್ಯಾಪ್ತಿಯ ಹಿನಕಲ್ ಗ್ರಾಮದಲ್ಲಿ 24 ಕೋಟಿ 69 ಲಕ್ಷ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಮಾಜಿ ಸಚಿವರೂ ಆದ ಶಾಸಕ ಜಿ.ಟಿ.ದೇವೇಗೌಡ ಮತ್ತು ಸಂಸದ ಪ್ರತಾಪ್ ಸಿಂಹ ಬುಧವಾರ ಚಾಲನೆ ನೀಡಿದರು.

ಹಿನಕಲ್‌ನ ಶ್ರೀ ನನ್ನೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಶಾಸಕರು, ಸಂಸದರು ಬಳಿಕ ಕಾಮಗಾರಿಗಳಿಗೆ ಚಾಲನೆ ನೀಡಿದರು. ಶ್ರೀ ನನ್ನೇಶ್ವರ ದೇವಸ್ಥಾನದ ಬಳಿ, ಕಲ್ಯಾಣಿ, ಕೆರೆ, ಚರ್ಚ್ ರಸ್ತೆ, ತಮ್ಮಡಗೆರೆ ರಸ್ತೆ, ಶನೇಶ್ವರ ದೇವಸ್ಥಾನದ ಹತ್ತಿರ, ಕಾಳಮ್ಮನವರ ದೇವಸ್ಥಾನದ ಹತ್ತಿರ, ಹಳೇ ಗ್ರಾಮ ಪಂಚಾಯಿತಿ ಕಾರ್ಯಾಲಯ, ನಾಯಕರ ಬೀದಿ, ಪರಿಶಿಷ್ಟ ಜಾತಿ ಕಾಲೋನಿ, ಬಸವರಾಜು ಸರ್ಕಲ್ ಹತ್ತಿರ, ಹಿನಕಲ್ ಸ್ಮಶಾನ, ರಮೇಶ್ ಕೋಳಿ ಫಾರಂ ಹತ್ತಿರ, ಲಕ್ಷ್ಮೀಗೌಡರ ಮನೆ ಹತ್ತಿರ, ಎಫ್ ಬ್ಲಾಕ್, ಎಸ್‌ವಿ ಅಪಾರ್ಟ್‌ಮೆಂಟ್ ನೋಟ್ರೆ ಡ್ಯಾಂ ಸ್ಕೂಲ್ ಹತ್ತಿರ, ಆದಿತ್ಯ ಬಡಾವಣೆ, ಸುಬ್ರಮಣ್ಯ ನಗರದಲ್ಲಿ ವಿವಿಧ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಗ್ರಾಮದಲ್ಲಿ 95 ಲಕ್ಷ ರೂ. ವೆಚ್ಚದಲ್ಲಿ ಸಾರ್ವಜನಿಕ ಕಲ್ಯಾಣಿ ಅಭಿವೃದ್ಧಿ ಕಾಮಗಾರಿ, 56 ಲಕ್ಷ ರೂ. ವೆಚ್ಚದಲ್ಲಿ ದೇವರ ಕೆರೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ನೀಡಲಾಯಿತು. ಬಳಿಕ 1 ಕೋಟಿ ರೂ. ವೆಚ್ಚದಲ್ಲಿ ನಡೆಯಲಿರುವ ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು. ಹಿನಕಲ್‌ನ ಬಿ.ಎಂ.ರಸ್ತೆ ಎನ್‌ಹೆಚ್–275ರ ಯೋಗನರಸಿಂಹ ಸ್ವಾಮಿ ದೇವಸ್ಥಾನದ ವೃತ್ತದಿಂದ ಬೆಳವಾಡಿ ಪೊಲೀಸ್ ಚೆಕ್ ಪೋಸ್ಟ್‌ವರೆಗೆ ಹಾಲಿ ಇರುವ ಮಧ್ಯಂತರ ಕಂಬಗಳಿಗೆ ಯುಜಿ ಕೇಬಲ್ ಅಳವಡಿಕೆ, ಎಲ್‌ಇಡಿ ಬೀದಿ ದೀಪಗಳನ್ನು ಅಳವಡಿಸುವುದು ಮತ್ತು ಖಾಲಿಯಿರುವ ಜಾಗಗಳಲ್ಲಿ ವಿದ್ಯುತ್ ಕಂಬಗಳನ್ನು ಅಳವಡಿಸಿ, ಬೀದಿ ದೀಪಗಳನ್ನು ಅಳವಡಿಸುವ ಕೋಟ್ಯಾಂತರ ರೂ. ವೆಚ್ಚದ ಕಾಮಗಾರಿ ಚಾಲನೆ ನೀಡಲಾಯಿತು. ಹಿನಕಲ್‌ನ ಪ್ರಗತಿ ಕಣ್ಣಿನ ಆಸ್ಪತ್ರೆ ರಸ್ತೆಯಲ್ಲಿ 50 ಲಕ್ಷ ರೂ. ವೆಚ್ಚದಲ್ಲಿ ಒಳಚರಂಡಿ, ಸಿಸಿ ಚರಂಡಿ ಮತ್ತು ರಸ್ತೆ ನಿರ್ಮಾಣ ಕಾಮಗಾರಿ, 50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ನನ್ನೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಬಡಾವಣೆ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿ, ಬಿಎಂ ರಸ್ತೆಯಲ್ಲಿ ಮುಖಂಡ ರಾಜು ಸಿದ್ದಯ್ಯನವರ ಮನೆಯಿಂದ ಇಲ್ಲಿನ ಸರ್ಕಾರಿ ಶಾಲೆವರೆಗೆ ಮತ್ತು ಸರ್ಕಾರಿ ಶಾಲೆಯಿಂದ ಮುಖಂಡ ರವಿಯವರ ಮನೆವರೆಗೆ ಸಿಸಿ ಚರಂಡಿ ಮತ್ತು ಕಲ್ವರ್ಟ್ ನಿರ್ಮಾಣ ಕಾಮಗಾರಿಗೂ ಭೂಮಿ ಪೂಜೆ ನೆರವೇರಿಸಲಾಯಿತು.

75 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್ ಗ್ರಾಮದ ನನ್ನೇಶ್ವರ ದೇವಸ್ಥಾನದ ಮುಂಭಾಗದ ಮಳೆನೀರು ಚರಂಡಿ ಪಕ್ಕದಲ್ಲಿ ಹಾಗೂ ಹಿನಕಲ್ ಗ್ರಾಮದ ಹಳೆ ವಿಜಯ ಚಿತ್ರಮಂದಿರದ ಹಿಂಭಾಗದ ಪ್ರದೇಶ, ಗರುಡಾಚಾರ್ ಬಡಾವಣೆ ಮುಖ್ಯ ರಸ್ತೆಯ ಗ್ರಾಮ ಪಂಚಾಯಿತಿ ಬಡಾವಣೆ ರಸ್ತೆಗಳಲ್ಲಿ ಒಳಚರಂಡಿ ಮಾರ್ಗ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು. ಕೋಟಿ ವೆಚ್ಚದಲ್ಲಿ ಹಿನಕಲ್‌ನ ಸಾರ್ವಜನಿಕ ಸ್ಮಶಾನದಲ್ಲಿ ಮೂಲಭೂತ ಸೌಕರ್ಯ ಕಾಮಗಾರಿ, 60 ಲಕ್ಷ ರೂ. ವೆಚ್ಚದಲ್ಲಿ ಬಿಎಂ ರಸ್ತೆಯಿಂದ ನೋಟ್ರೆ ಡ್ಯಾಂ ಶಾಲೆಯ ರಸ್ತೆಯ ಅಡ್ಡ ರಸ್ತೆಗಳಲ್ಲಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ, ಕೋಟಿ ರೂ. ವೆಚ್ಚದಲ್ಲಿ ಬಿಎಂ ರಸ್ತೆ, ಮಾಸ್ ಫರ್ನಿಚರ್ ಹಿಂಭಾಗದ ಆದಿತ್ಯ ಬಡಾವಣೆಯಲ್ಲಿ ರಸ್ತೆ ಮತ್ತು ಚರಂಡಿ, ಒಳಚರಂಡಿ ನಿರ್ಮಾಣ ಕಾಮಗಾರಿಗೂ ಗುದ್ದಲಿ ಪೂಜೆ ನೆರವೇರಿಸಲಾಯಿತು.

50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ನನ್ನೇಶ್ವರ ಬಡಾವಣೆ, ಬಿಇಎಂಎಲ್ ಬಡಾವಣೆ, ತಮ್ಮಡಗೇರಿ, ಹೊಸಬೀದಿ, ಹುಂಡಿ ಬೀದಿ, ಚೆನ್ನೇಗೌಡ ಲೇಔಟ್, ಲಿಂಗಾಯಿತ ಸಮುದಾಯದ ಬೀದಿ, ಬ್ಯಾಂಕ್ ಕಾಲೋನಿ ರಸ್ತೆ ಮತ್ತು ವಿಶ್ವಕರ್ಮ ಸಮುದಾಯದ ಬೀದಿಗಳಲ್ಲಿ ಅಗತ್ಯವಿರುವ ಕಡೆ ಬೋರ್‌ವೆಲ್ ಕೊರೆದು ಕುಡಿಯುವ ನೀರಿನ ಪೈಪ್‌ಲೈನ್ ಅಳವಡಿಸುವ ಕಾಮಗಾರಿಗೆ ಚಾಲನೆ ದೊರೆಯಿತು.

37.50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್ ಗ್ರಾಮದ ಅಂಬೇಡ್ಕರ್ ಕಾಲೋನಿಯ ಡಾ.ಅಂಬೇಡ್ಕರ್ ಸಮುದಾಯ ಭವನದ ಉನ್ನತ್ತೀಕರಣ ಕಾಮಗಾರಿ, 48.60 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಹಳೆ ಗ್ರಾಮ ಪಂಚಾಯಿತಿ ಆವರಣದಲ್ಲಿ ಸಾರ್ವಜನಿಕ ಗ್ರಂಥಾಲಯ ಕಟ್ಟಡ ನಿರ್ಮಾಣ ಕಾಮಗಾರಿ, 50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ದಿವಾನ್ ಕೆರೆಯ ಕೆರೆ ಕೋಡಿಯಿಂದ ಬಾಕಿ ಉಳಿದಿರುವ ರಾಜ ಕಾಲುವೆ ನಿರ್ಮಾಣ ಕಾಮಗಾರಿ (ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ ಮೀಸಲು), 50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ದಿವಾನ್ ಕೆರೆಯ ಕೆರೆ ಕೋಡಿಯಿಂದ ಬಾಕಿ ಉಳಿದಿರುವ ರಾಜ ಕಾಲುವೆ ನಿರ್ಮಾಣ ಕಾಮಗಾರಿಗೂ ಚಾಲನೆ ನೀಡಲಾಯಿತು.

50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಬಿಎಂ ಮುಖ್ಯ ರಸ್ತೆ ರುಡ್‌ಸೆಟ್ ಸಂಸ್ಥೆಯಿಂದ ಫ್ಲೈಓವರ್‌ವರೆಗೆ ರಸ್ತೆ ಬದಿಯಲ್ಲಿ ಫುಟ್‌ಪಾತ್ ನಿರ್ಮಾಣ ಕಾಮಗಾರಿ, 50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಬಿಎಂ ಮುಖ್ಯ ರಸ್ತೆಯ ಮೇರಿ ಸ್ಟೋರ್‌ನಿಂದ ಹಿನಕಲ್‌ನ ಸಾರ್ವಜನಿಕ ಕಲ್ಯಾಣಿವರೆಗೆ ರಸ್ತೆ ಬದಿಯಲ್ಲಿ ಫುಟ್‌ಪಾತ್ ನಿರ್ಮಾಣ ಕಾಮಗಾರಿ, 45 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಬಿಎಂ ಮುಖ್ಯ ರಸ್ತೆಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿಂದ ಕೃಷ್ಣ ಹಾರ್ಡ್‌ವೇರ್‌ವರೆಗೆ ರಸ್ತೆಯ ಬದಿಯಲ್ಲಿ ಮಳೆನೀರಿನ ಚರಂಡಿ ಹಾಗೂ ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಲಾಯಿತು.

50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಬಿಎಂ ಮುಖ್ಯ ರಸ್ತೆಯಲ್ಲಿ ಮುಖಂಡ ಹುಚ್ಚೇಗೌಡರವರ ಮನೆಯಿಂದ ಕೆಲ್ಲಮ್ಮ ದೇವಸ್ಥಾನದ ರಸ್ತೆಯ ಮುಖಂಡ ಮೋಹನ್‌ರವರ ಮನೆವರೆಗೆ ರಸ್ತೆ ಬದಿಯಲ್ಲಿ ಮಳೆನೀರಿನ ಚರಂಡಿ ಹಾಗೂ ಕಲ್ವರ್ಟ್ ನಿರ್ಮಾಣ ಕಾಮಗಾರಿ, 40 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಬಿಎಂ ಮುಖ್ಯ ರಸ್ತೆಯ ಸಾರ್ವಜನಿಕ ಕಲ್ಯಾಣಿಯಿಂದ ಮೇರಿ ಸ್ಟೋರ್‌ವರೆಗೆ ರಸ್ತೆ ಬದಿಯಲ್ಲಿ ಒಳಚರಂಡಿ ಮಾರ್ಗ ನಿರ್ಮಾಣ ಕಾಮಗಾರಿ, 45 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಬಿಎಂ ಮುಖ್ಯ ರಸ್ತೆ ಹಳೆ ವಿಜಯ ಚಿತ್ರಮಂದಿರದಿಂದ ರುಡಸೆಟ್ ಸಂಸ್ಥೆವರೆಗೆ ರಸ್ತೆ ಬದಿಯಲ್ಲಿ ಒಳಚರಂಡಿ ಮಾರ್ಗ ನಿರ್ಮಾಣ ಕಾಮಗಾರಿ, 50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಸುಬ್ರಹ್ಮಣ್ಯನಗರದಲ್ಲಿ ರಸ್ತೆ ಬದಿಯಲ್ಲಿ ಚರಂಡಿ ಮತ್ತು ಕಲ್ವರ್ಟ್ ನಿರ್ಮಾಣ ಕಾಮಗಾರಿ, 40 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ಸುಬ್ರಹ್ಮಣ್ಯನಗರದಲ್ಲಿ ರಸ್ತೆ ನಿರ್ಮಾಣ ಕಾಮಗಾರಿ, 26 ಲಕ್ಷ ರೂ. ವೆಚ್ಚದಲ್ಲಿ ಬಸವರಾಜು ವೃತ್ತದ ರಸ್ತೆಯಿಂದ ಮುಖಂಡ ಕೋಟೆಗೌಡರ ಮನೆವರೆಗೆ ಹಾಗೂ ಮುಖಂಡ ಕೆಂಪೇಗೌಡರ ಮನೆಯಿಂದ ಮುಖಂಡ ನಾಗೇಗೌಡರ ಮನೆವರೆಗೆ ರಸ್ತೆ ಬದಿಯಲ್ಲಿ ಚರಂಡಿ, ಕಲ್ವರ್ಟ್ ಹಾಗೂ ಒಳಚರಂಡಿ ನಿರ್ಮಾಣ ಕಾಮಗಾರಿ,50 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್ ಗ್ರಾಮದ ವಾಲ್ಮೀಕಿ ಸಮುದಾಯ ಭವನದ ಮುಂದುವರೆದ ಕಾಮಗಾರಿಗೂ ಚಾಲನೆ ನೀಡಲಾಯಿತು.

15.75 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್, ಸರ್ಕಾರಿ ಶಾಲೆ ಮತ್ತು ಸರ್ಕಾರಿ ಕಟ್ಟಡಗಳಿಗೆ ವಿಕಲಚೇತನರ ಸ್ನೇಹಿ ಶೌಚಾಲಯ ನಿರ್ಮಾಣ ಮತ್ತು ವಿಕಲಚೇತನ ಸ್ನೇಹಿ ಜಾರುಹಾದಿ ನಿರ್ಮಾಣ ಕಾಮಗಾರಿ, 209.92 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್‌ನ ರಿಂಗ್ ರಸ್ತೆ ಎಸ್‌ವಿ ಅಪಾರ್ಟ್‌ಮೆಂಟ್‌ನಿಂದ ಹೂಟಗಳ್ಳಿ ಎಸ್‌ಆರ್‌ಎಸ್ ಪರಿಶಿಷ್ಟ ಜಾತಿ ಕಾಲೋನಿಯವರೆಗೆ ಮುಖ್ಯ ರಸ್ತೆ ಹಾಗೂ ಅಡ್ಡರಸ್ತೆಗಳ ಅಭಿವೃದ್ಧಿ ಕಾಮಗಾರಿ, 35.07 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್ ಗ್ರಾಮದ ನಾಯಕರ ಬೀದಿಯಲ್ಲಿ ಆಯ್ದ ಭಾಗಗಳಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಚಾಲನೆ ಕೊಡಲಾಯಿತು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್ ಗೌಡ, ಮುಖಂಡರಾದ ಹಿನಕಲ್ ಹೆಚ್.ಸಿ. ರಾಜು, ಅಕ್ಕಿ ವೆಂಕಟೇಶ್, ಈಶ್ವರಪ್ಪ, ಬಾಬಣ್ಣ, ಜೆ.ರಮೇಶ್, ಎಸ್.ಸಿ.ಸ್ವಾಮಿ, ವೆಂಕಟೇಶ್ ನಾಯಕ, ಶಂಕರ್ ನಾಯಕ, ಮಿಲ್ ಸೋಮಣ್ಣ, ಸಿ.ಸ್ವಾಮಿ, ವಿಜಯ್ ಕುಮಾರ್, ಗುರು ಆಚಾರ್, ಚೆಲುವರಾಜು, ವೈಕುಂಟಚಾರಿ, ಪ್ರಕಾಶ್ ಆಚಾರಿ, ಕುಮಾರ್, ಮಹೇಶ್, ಹೆಚ್.ಜವರಪ್ಪ, ಶಿವಕುಮಾರ್, ರೇವಣ್ಣ, ವಿಜಯನಗರ ಮಂಜು, ಪುಟ್ಟೇಗೌಡ, ಹಿನಕಲ್ ಮಂಜು, ಲೋಕೇಶ್, ಗಣೇಶ್, ದಾಸು, ಹೆಚ್.ಬಿ.ವಿಜಯ್‌ಕುಮಾರ್, ಹೆಚ್.ಬಿ.ಜಗದೀಶ್, ಹೆಚ್.ಬಿ. ಹೊನ್ನಪ್ಪ, ಟಿ.ಪಿ.ಹೊನ್ನಪ್ಪ, ಹೆಚ್.ಬಿ. ವೆಂಕಟೇಶ್, ಮಹದೇವು, ಹೆಚ್.ಸಿ. ಸಿದ್ದು, ಪ್ರಶಾಂತ್, ಹುಂಡಿ ನಾಗರಾಜು, ರಾಘುರಾಮಪ್ಪ, ಪ್ರಜ್ವಲ್, ಕುಮಾರ್ ವಿಜಯನಗರ ಹಲವು ಮುಖಂಡರು ಹಾಜರಿದ್ದರು.

> “ಕಳೆದ 9 ವರ್ಷದಿಂದ ನನ್ನ ಎಲ್ಲಾ ಅಭಿವೃದ್ಧಿ ಕಾರ್ಯಗಳಿಗೆ ಸಂಸದ ಪ್ರತಾಪ್‌ಸಿಂಹ ಸಾಥ್ ನೀಡುತ್ತಾ ಬಂದಿದ್ದಾರೆ. ಅವರದು ಸದಾ ಅಭಿವೃದ್ಧಿಪರ ಚಿಂತನೆ. ಪ್ರಧಾನಿ ಮೋದಿಯಿಂದ ಪ್ರೇರಿತರಾಗಿರುವ ಪ್ರತಾಪ್‌ಸಿಂಹ ಜನರಿಗೆ ಸರ್ಕಾರದ ಯೋಜನೆಗಳನ್ನು ತಲುಪಿಸುವ ವಿಷಯದಲ್ಲಿ ನನ್ನೊಂದಿಗೆ ಸಹಕರಿಸುತ್ತಾ ಬಂದಿದ್ದಾರೆ. ಅಂತಿಮವಾಗಿ ನಮ್ಮಿಬ್ಬರದ್ದು ಅಭಿವೃದ್ಧಿ ಅಜೆಂಡಾ.
> –ಜಿ.ಟಿ.ದೇವೇಗೌಡ, ಶಾಸಕರು



> “ರಾಜ್ಯದ 224 ಶಾಸಕರ ಪೈಕಿ ಜಿ.ಟಿ.ದೇವೇಗೌಡರ ರೀತಿ ಅಭಿವೃದ್ಧಿ ಕಾರ್ಯ ಕೈಗೊಂಡವರನ್ನು ನಾನು ಕಾಣೆ. ಅಭಿವೃದ್ಧಿ ವಿಷಯ ಬಂದರೆ ಜಿ.ಟಿ.ದೇವೇಗೌಡರಿಗೆ ಸರಿಸಾಟಿ ಇಲ್ಲ. ಹಿನಕಲ್‌ನಲ್ಲಿ ಸುಮಾರು 30 ಕೋಟಿ ವೆಚ್ಚದ ನಾನಾ ಕಾಮಗಾರಿ ಕೈಗೊಂಡು ಜನರಿಗೆ ಅನುಕೂಲ ಮಾಡಿ ಕೊಡುತ್ತಿದ್ದಾರೆ. ಉಂಡುವಾಡಿ ಯೋಜನೆಯ ರೂವಾರಿಗಳೂ ಜಿ.ಟಿ.ದೇವೇಗೌಡರು.
> –ಪ್ರತಾಪ್ ಸಿಂಹ, ಸಂಸದರು.



ವಿವಿಧೆಡೆ 2 ಕೋಟಿ ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ

ಮೈಸೂರು,ಫೆ.22(ಪಿಎಂ)– ಹಿನಕಲ್ ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ವಿವಿಧೆಡೆ ರಸ್ತೆ ನಿರ್ಮಾಣ–ಅಭಿವೃದ್ಧಿ ಕಾಮಗಾರಿಗೂ ಶಾಸಕರು, ಸಂಸದರು ಚಾಲನೆ ನೀಡಿದರು.

ಗ್ರಾಮದ ಚನ್ನೇಗೌಡ ಬಡಾವಣೆ ಪಕ್ಕದ ಮಲ್ಲೇಗೌಡರ ಮನೆಯಿಂದ ಬಾಬುರವರ ಮನೆವರೆಗೆ ಹಾಗೂ ಅಡ್ಡ ರಸ್ತೆಗಳು, ಹಿನಕಲ್ ಗ್ರಾಮದ ಲಕ್ಷ್ಮೀನಾರಾಯಣರವರ ಮನೆಯಿಂದ ರೇವಣ್ಣನವರ ಮನೆವರೆಗೆ, ಹಿನಕಲ್ ಗ್ರಾಮದ ವೆಂಕಟೇಶ್ ಅವರ ಮನೆಯಿಂದ ಉಮಾ ಮಹೇಶ್ ಅವರ ಮನೆವರೆಗೆ, ಹಿನಕಲ್ ಗ್ರಾಮದ ವೆಂಕಟೇಶ್ ಅವರ ಮನೆಯಿಂದ ಅಪ್ಪಾಜಿಗೌಡ ಅವರ ಮನೆವರೆಗೆ, ಹಿನಕಲ್ ಗ್ರಾಮದ ವೆಂಕಟರಮಣಯ್ಯರವರ ಮನೆಯಿಂದ ಮೆಡಿಕಲ್ ಸ್ಟೋರ್ ಕೃಷ್ಣಪ್ಪರವರ ಮನೆ ಮೂಲಕ ಲಿಂಗಯ್ಯನವರ ಮನೆವರೆಗೆ ರಸ್ತೆ ಮತ್ತು ಚರಂಡಿ ನಿರ್ಮಾಣ ಕಾಮಗಾರಿಗೆ ಚಾಲನೆ ದೊರಕಿತು. ಹಿನಕಲ್ ಗ್ರಾಮದ ಆಂಧ್ರ ಕಾಲೋನಿ ಕೆಂಡಗಣ್ಣಪ್ಪನವರ ಮನೆಯಿಂದ ನಂಜಪ್ಪನವರ ಮನೆವರೆಗೆ, ಹಿನಕಲ್ ಗ್ರಾಮದ ಕೆಂಪೇಗೌಡರವರ ಮನೆಯಿಂದ ರಮೇಶ್‌ರವರ ಕೋಳಿ ಫಾರಂವರೆಗೆ, ಹಿನಕಲ್ ಗ್ರಾಮದ ಧನಲಕ್ಷ್ಮೀರವರ ಮನೆಯಿಂದ ದೇಸರಾಜುರವರ ಮನೆವರೆಗೆ, ಹಿನಕಲ್ ಗ್ರಾಮದ ಸಿದ್ದಪ್ಪನವರ ಮನೆಯಿಂದ ಸಿಎಫ್‌ಟಿಆರ್‌ಐ ಪಾರ್ಪಿಯರವರ ಮನೆವರೆಗೆ, ಹಿನಕಲ್ ಗ್ರಾಮದ ಬಿಎಂ ರಸ್ತೆಯ ತವಸಿ ಮನೆಯಿಂದ ಮಾಯಪ್ಪನವರ ಮನೆವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು.



ಹಿನಕಲ್‌ನ ಆದಿತ್ಯ ಬಡಾವಣೆಯಲ್ಲಿ ರಸ್ತೆ, ಮಳೆ ನೀರು ಚರಂಡಿ ಹಾಗೂ ಒಳಚರಂಡಿ ಕಾಮಗಾರಿಗೆ ಚಾಲನೆ ನೀಡಲಾಯಿತು.



ಹಿನಕಲ್‌ನ ಶನಿಮಹಾತ್ಮ ದೇವಸ್ಥಾನದ ಬಳಿ ರಸ್ತೆ ಮತ್ತು ಚರಂಡಿ ಕಾಮಗಾರಿಗೆ ಶಾಸಕರು, ಸಂಸದರು, ಎಂಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್‌ಗೌಡರು ಭೂಮಿ ಪೂಜೆ ನೆರವೇಸಿದರು.

2 ಕೋಟಿ ವೆಚ್ಚದ ನೀರು ಸಂಗ್ರಹಾಗಾರ ನಿರ್ಮಾಣ ಕಾಮಗಾರಿಗೆ ಪೂಜೆ

ಮೈಸೂರು,ಫೆ.22(ಪಿಎಂ)– ಹಿನಕಲ್ ಗ್ರಾಮದಲ್ಲಿ 2 ಕೋಟಿ ರೂ. ವೆಚ್ಚದಲ್ಲಿ ನೀರು ಸಂಗ್ರಹಾಗಾರ ನಿರ್ಮಾಣ ಹಾಗೂ ಅಗತ್ಯ ಕುಡಿಯುವ ನೀರು ಸರಬರಾಜು ಕಾಮಗಾರಿಗೂ ಶಾಸಕರು, ಸಂಸದರು ಚಾಲನೆ ನೀಡಿದರು.

ಹಿನಕಲ್‌ನ ಆಶ್ರಮ ರಸ್ತೆಯ ನಗರಸಭೆಯ ಸ್ಥಳದಲ್ಲಿ ವಾಣಿ ವಿಲಾಸ ನೀರು ಸರಬರಾಜು ಕೇಂದ್ರದಿಂದ ಸರಬರಾಜಾಗುವ ನೀರನ್ನು ಸಂಗ್ರಹಿಸಲು ಮೇಲ್ಮಟ್ಟದ ನೀರು ಸಂಗ್ರಹಾಗಾರ ಹಾಗೂ ಅಗತ್ಯ ಕುಡಿಯುವ ನೀರು ಸರಬರಾಜಿನ ಕಾಮಗಾರಿಗೆ ಚಾಲನೆ ಸಿಕ್ಕಿತು. ಬಳಿಕ 36 ಲಕ್ಷ ರೂ. ವೆಚ್ಚದಲ್ಲಿ ಹಿನಕಲ್ ಸರ್ಕಾರಿ ಪ್ರೌಢಶಾಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳನ್ನು ಶಾಸಕರು, ಸಂಸದರು ಉದ್ಘಾಟಿಸಿದರು.


3.50 ಕೋಟಿ ವೆಚ್ಚದಲ್ಲಿ ಕಾಮಗಾರಿ: 3.50 ಕೋಟಿ ರೂ. ವೆಚ್ಚದಲ್ಲಿ ಹಿನಕಲ್‌ನ ವಿವಿಧೆಡೆ ರಸ್ತೆ, ಚರಂಡಿ ಅಭಿವೃದ್ಧಿ ಹಾಗೂ ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಯಿತು. ಗ್ರಾಮದ ಮರೀಗೌಡರ ಮನೆಯಿಂದ ಕುಮಾರ್‌ರವರ ಮನೆವರೆಗೆ, ಹಿನಕಲ್ ಗ್ರಾಮದ ಎಚ್.ಸಿ.ಮಹದೇವುರವರ ಮನೆಯಿಂದ ಬೀರಪ್ಪರವರ ಮನೆವರೆಗೆ, ಹಿನಕಲ್ ಗ್ರಾಮದ ರಸ್ತೆ ಹಾಗೂ ಚರಂಡಿ ನಿರ್ಮಾಣ ಮತ್ತು ಚರಂಡಿ ಮೇಲ್ಭಾಗದಲ್ಲಿ ಕಾಂಕ್ರೀಟ್ ಸ್ಲ್ಯಾಬ್ ಅಳವಡಿಸುವ ಕಾಮಗಾರಿಗೆ ಚಾಲನೆ ನೀಡಲಾಯಿತು.

ಹೂಟಗಳ್ಳಿ ನಗರಸಭಾ ವ್ಯಾಪ್ತಿಯ ಹಿನಕಲ್‌ನ ಬಿಎಂ ರಸ್ತೆಯಿಂದ ನನ್ನೇಶ್ವರ ದೇವಸ್ಥಾನದ ಮೂಲಕ ಪೋದಾರ್ ಶಾಲೆವರೆಗೆ, ಹಿನಕಲ್‌ನ ಚರ್ಚ್ ರಸ್ತೆಯ ಕನಕ ದೇವಸ್ಥಾನದಿಂದ ಚಿಕ್ಕಮ್ಮ ಶಾಲೆಯ ವೃತ್ತದವರೆಗೆ, ಹಿನಕಲ್‌ನ ಮಂಜುನಾಥ ಫ್ಲೋರ್ ಮಿಲ್‌ನಿಂದ ತಿಮ್ಮಬೋವಿಯವರ ಮನೆವರೆಗೆ, ಹಿನಕಲ್‌ನ ಅಮಾಸೇಗೌಡರ ಮನೆಯಿಂದ ಕರಿಯಪ್ಪನವರ ಮನೆವರೆಗೆ ಹಾಗೂ ಹಿನಕಲ್‌ನ ಬಿಎಂ ರಸ್ತೆ ಸುನೀಲ್ ವೈನ್ಸ್ ಸ್ಟೋರ್‌ನಿಂದ ವೆಂಕಟೇಶರವರ ಮನೆವರೆಗೆ ಹಾಗೂ ಅಡ್ಡ ರಸ್ತೆಗಳಲ್ಲಿ ಮತ್ತು ಹಿನಕಲ್‌ನ ಕಂಡಕ್ಟರ್ ನಾಗರಾಜುರವರ ಮನೆಯಿಂದ ಮುಷ್ಟಿ ಮಹದೇವುರವರ ಮನೆವರೆಗೆ, ಹಿನಕಲ್‌ನ ಪುಟ್ಟಬೋವಿರವರ ಮನೆಯಿಂದ ಸಣ್ಣಮರೀಗೌಡರವರ ಮನೆವರೆಗೆ, ಹಿನಕಲ್‌ನ ವರಲಕ್ಷ್ಮೀರವರ ಮನೆ ಹತ್ತಿರ ಹಾಗೂ ಅಪ್ಪಾಜಿರವರ ಮನೆಯಿಂದ ಶ್ರೀಧರ್‌ರವರ ಮನೆಯ ಮೂಲಕ ಮಜ್ಜಪ್ಪರವರ ಮನೆವರೆಗೆ, ಹಿನಕಲ್‌ನ ಅಮಾಸೇಗೌಡರ ಮನೆಯಿಂದ ಆಟೋ ರವಿರವರ ಮನೆವರೆಗೆ ಹಾಗೂ ಹಿನಕಲ್‌ನ ಗುರುಮಲ್ಲುರವರ ಮನೆಯಿಂದ ಲಾಯರ್ ರಮೇಶ್‌ರವರ ಮನೆವರೆಗೆ ಮತ್ತು ಹಿನಕಲ್‌ನ ಸಿದ್ದಪ್ಪರವರ ಮನೆಯಿಂದ ಡಾ.ವಿಜಯ್‌ರವರ ಮನೆವರೆಗೆ ಮತ್ತು ಹಿನಕಲ್‌ನ ಪ್ರಮೀಳಾರವರ ಮನೆಯಿಂದ ಗವಿಸಿದ್ದೇಗೌಡರವರ ಮನೆವರೆಗೆ, ಹಿನಕಲ್‌ನ ಬಸಪ್ಪ ದೇವಸ್ಥಾನಕ್ಕೆ ಸಂಪರ್ಕ ರಸ್ತೆ ಹಾಗೂ ಹಿನಕಲ್‌ನ ರಾಮಸ್ವಾಮಿರವರ ಮನೆಯಿಂದ ನಜೀರ್‌ರವರ ಮನೆ ಮೂಲಕ ಬೆಟ್ಟಯ್ಯರವರ ಮನೆವರೆಗೆ ರಸ್ತೆ, ಚರಂಡಿ, ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ ಚಾಲನೆ ದೊರೆಯಿತು.


ಮತ್ತು ಹಿನಕಲ್‌ನ ಎಲ್ಲಮ್ಮರವರ ಮನೆಯಿಂದ ಬೀರಪ್ಪರವರ ಮನೆಯ ಮೂಲಕ ಗಣೇಶ್‌ರವರ ಮನೆವರೆಗೆ, ಹಿನಕಲ್‌ನ ನನ್ನೇಶ್ವರ ದೇವಸ್ಥಾನದ ಪಕ್ಕದ ಬಡಾವಣೆಯ ಬಿಎಂ ಮುಖ್ಯ ರಸ್ತೆಯಿಂದ ಶೈಲೇಂದ್ರರವರ ಮನೆವರೆಗೆ ಹಾಗೂ ಬಿ.ಎಂ. ಮುಖ್ಯ ರಸ್ತೆಯಿಂದ ಹಳೇ ಭೂಮಿಪುತ್ರ ಬಾರ್‌ವರೆಗೆ, ತಮ್ಮಡಗೇರಿ ಬೀದಿ, ಪಾತ್ರೆ ಚಂದ್ರುರವರ ಮನೆಯಿಂದ ಕಂಟ್ರಾಕ್ಟರ್ ಪುಟ್ಟಸ್ವಾಮಿಯವರ ಮನೆವರೆಗೆ ಹಾಗೂ ಗಣಪತಿ ದೇವಸ್ಥಾನದ ಮುಂಭಾಗದಿಂದ ಶೈಲೇಂದ್ರರವರ ಅಂಗಡಿವರೆಗೆ, ವಾಸ್ತುಯ್ಯನ ಮರೀಗೌಡರ ಮನೆಯಿಂದ ಕಾಳಚಾರಿರವರ ಮನೆವರೆಗೆ ಹಾಗೂ ಹಿನಕಲ್‌ನ ಆಚಾರ್ ಬೀದಿಯ ಚೆಲುವಚಾರಿರವರ ಮನೆಯಿಂದ ಸಿದ್ದಚಾರಿರವರ ಮನೆವರೆಗೆ ಹಾಗೂ ನಳಿನಿ ಅರಸ್‌ರವರ ಮನೆಯ ಹತ್ತಿರ ಮತ್ತು ಕೆಇಬಿ ದೊಡ್ಡಣ್ಣರವರ ಮನೆಯ ಹತ್ತಿರದ ರಸ್ತೆ, ಚರಂಡಿ, ಕಲ್ವರ್ಟ್ ನಿರ್ಮಾಣ ಕಾಮಗಾರಿಗೆ ಭೂಮಿ ಪೂಜೆ ಮಾಡಲಾಯಿತು. ಹಿನಕಲ್‌ನ ನೋಟ್ರೆ ಡ್ಯಾಂ ಶಾಲೆ ರಸ್ತೆಯ ರಾಮಯ್ಯ ಬಡಾವಣೆ, ಜಯರಾಮ್‌ರವರ ಮನೆಯಿಂದ ಜಯಲಕ್ಷ್ಮಿರವರ ಮನೆವರೆಗೆ ಹಾಗೂ ಸೌಪರ್ಣಿಕ ಆಪಾರ್ಟ್‌ಮೆಂಟ್ ರಸ್ತೆಯಿಂದ ರಾಜೇಶ್‌ರವರ ಮನೆವರೆಗೆ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ಕೊಡಲಾಯಿತು.



ಇದೇ ವೇಳೆ ಜಿ.ಟಿ.ದೇವೇಗೌಡರು, ಸಂಸದ ಪ್ರತಾಪ್‌ಸಿಂಹ ಹಾಗೂ ಹರೀಶ್‌ಗೌಡರು ಸಂಗೊಳ್ಳಿ ರಾಯಣ್ಣ ಪ್ರತಿಮೆಗೆ ಮಾಲಾರ್ಪಣೆ ಮಾಡಿದರು.



ಹಿನಕಲ್‌ನ ವಾಲ್ಮೀಕಿ ಭವನದ ಮುಂದುವರೆದ ಕಾಮಗಾರಿಗೆ ಜಿ.ಟಿ.ದೇವೇಗೌಡ, ಪ್ರತಾಪ್‌ಸಿಂಹ, ಹರೀಶ್‌ಗೌಡರು ಚಾಲನೆ ನೀಡಿದರು.



ಇದೇ ವೇಳೆ ಅಂಬೇಡ್ಕರ್ ಭವನದ ಮುಂದುವರೆದ ಕಾಮಗಾರಿಗೆ ಚಾಲನೆ ನೀಡಿ, ಪೀಠೋಪಕರಣಗಳನ್ನು ವಿತರಣೆ ಮಾಡಲಾಯಿತು.

ಮಂಡ್ಯ ಜನ ಕುಟುಂಬ ರಾಜಕಾರಣ ತಿರಸ್ಕರಿಸಲಿದ್ದಾರೆ

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ



ಮಂಡ್ಯ, ಫೆ.22– ಜಿಲ್ಲೆಯ 7 ವಿಧಾನಸಭಾ ಕ್ಷೇತ್ರಗಳಲ್ಲೂ ಬದಲಾವಣೆ ಪರ್ವ ಆರಂಭವಾಗಿದ್ದು, ಜಿಲ್ಲೆಯ ಜನತೆ ಅಪ್ಪ ಹಾಕಿದ ಆಲದ ಮರಕ್ಕೆ ನೇಣು ಹಾಕಿಕೊಳ್ಳಲು ಸಿದ್ಧರಿಲ್ಲ. ಆ ಮೂಲಕ ಕುಟುಂಬ ರಾಜಕಾರಣ ತಿರಸ್ಕರಿಸಲಿದ್ದಾರೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ವ್ಯಂಗ್ಯವಾಡಿದರು.

ನಗರದ ಮೈಸುಗರ್ ಕ್ರೀಡಾಂಗಣದಲ್ಲಿ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಆಯೋಜಿಸಿದ್ದ ಯುವ ಸಮಾವೇಶದಲ್ಲಿ ಮಾತನಾಡಿದ ಅವರು, ನಮ್ಮ ಸಂವಿಧಾನ 'ಜನರಿಂದ ಜನರಿಗಾಗಿ' ಎನ್ನುವ ಘೋಷ ವಾಕ್ಯ ಸಾರುತ್ತದೆ. ಆದರೆ, ನಮ್ಮ ದೊಡ್ಡಗೌಡರು 'ಕುಟುಂಬದಿಂದ ಕುಟುಂಬಕ್ಕಾಗಿ, ಕುಟುಂಬಸ್ಥರಿಗಾಗಿ' ಎಂಬ ಘೋಷ ವಾಕ್ಯವನ್ನು ಜನರಿಗೆ ಮನವರಿಕೆ ಮಾಡಿ, ಮಗ, ಮೊಮ್ಮಗ, ಮರಿಮೊಮ್ಮಗನಿಗಾಗಿ ಕಣ್ಣೀರು ಹಾಕುತ್ತಾರೆ. ಆದರೆ, ನಾವು ನಮ್ಮ ಪಕ್ಷಕ್ಕಾಗಿ ದುಡಿದು ಹತ್ಯೆ ಯಾದ ಕಾರ್ಯಕರ್ತರಿಗಾಗಿ ಕಣ್ಣೀರು ಹಾಕುತ್ತೇವೆ ಎಂದು ಲೇವಡಿ ಮಾಡಿದರು.

ಕೆಲವರಿಗೆ ಗ್ಲಿಸರಿನ್ ಹಾಕಿಕೊಂಡು ಕಣ್ಣೀರು ಸುರಿಸುವ ಕಾಯಕ ಚೆನ್ನಾಗಿ ಅರಿತಿದೆ. ಜಿಲ್ಲೆಯ ಜನರನ್ನು ಕರೆಯುವ ಬದಲು ತನ್ನ ಮಗನನ್ನು ಎಲ್ಲಿಟ್ಟಿದ್ದೀಯಪ್ಪ ಎಂದು ಕರೆದು ಜಿಲ್ಲೆಯ ಜನರ ಸ್ವಾಭಿಮಾನ ಕೆಣಕಿದವರಿಗೆ ಜನತೆ ಸ್ವಾಭಿಮಾನದ ಪೆಟ್ಟು ನೀಡಿ ನಮ್ಮ ಅಂಬರೀಶಣ್ಣನ ಪತ್ನಿ ಸುಮಲತಾ ಅವರನ್ನು ಗೆಲ್ಲಿಸಿದ್ದಾರೆ. ಆ ಮೂಲಕ ಜಿಲ್ಲೆಯ ಸ್ವಾಭಿಮಾನವನ್ನು ಎತ್ತಿ ಹಿಡಿದಿದ್ದಾರೆ ಎಂದು ನಿಖಿಲ್ ಸೋಲನ್ನು ಕುರಿತು ವ್ಯಾಖ್ಯಾನಿಸಿದರು. ನಮ್ಮ ದೊಡ್ಡಗೌಡರು ನಮ್ಮ ಮತ ಪಡೆದು ಅಧಿಕಾರ ನಡೆಸಿ, ನಾನು ಮುಂದಿನ ಜನ್ಮದಲ್ಲಿ ಮುಸ್ಲಿಂ ಆಗಿ ಜನಿಸುತ್ತೇನೆ ಎನ್ನುತ್ತಾರೆ. ಮುಸ್ಲಿಮರಿಗೆ ಮುಂದಿನ ಜನ್ಮದ ಬಗ್ಗೆ ನಂಬಿಕೆ ಇಲ್ಲ. ಅದು ಹಿಂದೂಗಳಿಗೆ ಮಾತ್ರ. ಹಾಗಾದರೆ ದೇವೇಗೌಡರು ಈಗಲೇ ಮುಸ್ಲಿಮರಾಗಲಿ ಎಂದು ಸವಾಲು ಹಾಕಿದರು.

ಜಯಚಾಮರಾಜೇಂದ್ರ ಒಡೆಯರ್, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಹಾಗೂ ಸರ್ ಎಂ.ವಿಶ್ವೇಶ್ವರಯ್ಯ ಅವರನ್ನು ನಾವು ಸ್ಮರಿಸುತ್ತೇವೆ. ಏಕೆಂದರೆ ಅವರು ಕನ್ನಂಬಾಡಿ ಅಣೆಕಟ್ಟೆ, ಅನೇಕ ಶಿಕ್ಷಣ ಸಂಸ್ಥೆ, ಮೈಶುಗರ್ ಕಾರ್ಖಾನೆ ಉಕ್ಕು ಮತ್ತು ಕಬ್ಬಿಣ ಕಾರ್ಖಾನೆ ಸ್ಥಾಪನೆ ಮಾಡಿದ್ದಾರೆ. ಅಂತಹವರ ಸ್ಮರಣೆ ಕಾಂಗ್ರೆಸ್ಸಿಗರಿಗೆ ಏಕಿಲ್ಲ ಎಂದು ಪ್ರಶ್ನಿಸಿದರು. ನಮ್ಮ ಪೂರ್ವಿಕರು ಕನ್ನಡ ಭಾಷೆಯನ್ನೇ ಮಾತನಾಡಿ ಬೆಳೆಸಿದ್ದಾರೆ. ಆದರೆ, ಟಿಪ್ಪು ಸುಲ್ತಾನ್ ಮತ್ತು ಹೈದರಾಲಿ ಪಾರ್ಸಿ ಭಾಷೆಯನ್ನು ಆಡಳಿತ ಭಾಷೆಯಾಗಿ ರೂಪಿಸಿದ್ದಾರೆ. ಇಂತಹವರನ್ನು ಕನ್ನಡ ಪ್ರೇಮಿ ಎಂದು ಸಿದ್ದರಾಮಯ್ಯ ಮತ್ತು ಕಾಂಗ್ರೆಸ್ ಬಿಂಬಿಸುತ್ತಿದೆ. ಇಂತಹವರಿಗೆ ಬುದ್ಧಿ ಕಲಿಸಿ ಎಂದು ಕರೆ ನೀಡಿದರು. ವೇದಿಕೆಯಲ್ಲಿ ಸಚಿವ ಕೆ.ಸಿ.ನಾರಾಯಣಗೌಡ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಹಾಗೂ ಸಂಸದ ತೇಜಸ್ವಿ ಸೂರ್ಯ, ರಾಜ್ಯ ಯುವ ಮೋರ್ಚಾ ಅಧ್ಯಕ್ಷ ಡಾ.ಸಂದೀಪ್, ಜಿಲ್ಲಾಧ್ಯಕ್ಷ ಸಿ.ಪಿ.ಉಮೇಶ್, ಜಿಲ್ಲಾ ಯುವ ಘಟಕದ ಅಧ್ಯಕ್ಷ ವಿಶ್ವತ್ ನಾಗೇಂದ್ರ, ಮುಖಂಡರಾದ ಡಾ.ಸಿದ್ದರಾಮಯ್ಯ, ಅಶೋಕ್ ಜಯರಾಂ, ಜಗದೀಶ್ ಹಿರೇಮನಿ, ಫೈಟರ್ ರವಿ, ಮುನಿರಾಜು, ಡಾ.ಇಂದ್ರೇಶ್, ಎಸ್.ಸಚ್ಚಿದಾನಂದ, ಎಸ್.ಪಿ.ಸ್ವಾಮಿ, ಶಿವಣ್ಣ, ಕೆ.ಎಸ್.ನಂಜುಂಡೇಗೌಡ ಇತರರಿದ್ದರು.

ಬಿಜೆಪಿ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ

ಮಂಡ್ಯ: ಕಾಂಗ್ರೆಸ್ ಮತ್ತು ಜೆಡಿಎಸ್ ಜಾತಿಗಳ ನಡುವೆ ವಿಷಬೀಜ ಬಿತ್ತುತ್ತಿವೆ. ಜಿಲ್ಲೆಯಲ್ಲಿ ಗೆದ್ದ ಶಾಸಕರು ಜಿಲ್ಲೆ ಅಭಿವೃದ್ಧಿ ಮಾಡಲಿಲ್ಲ. ಕಾಂಗ್ರೆಸ್ 5 ವರ್ಷ ಅಭಿವೃದ್ಧಿ ಮಾಡದೆ ಮತ್ತೆ ಅಧಿಕಾರಕ್ಕೆ ಬರಬೇಕು ಎಂಬ ಹಗಲುಗನಸು ಕಾಣುತ್ತಿದೆ. ಮತ್ತೊಮ್ಮೆ ಬಿಜೆಪಿ ಅಧಿಕಾರಕ್ಕೆ ಬರುವುದನ್ನು ಯಾರಿಂದಲೂ ತಡೆಯಲು ಸಾಧ್ಯವಿಲ್ಲ ಎಂದು ರಾಜ್ಯ ಬಿಜೆಪಿ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ವಿಶ್ವಾಸ ವ್ಯಕ್ತಪಡಿಸಿದರು.

ನಗರದಲ್ಲಿ ಬಿಜೆಪಿ ನಡೆದ ಯುವ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಅವರಿಗೆ ಯುವಶಕ್ತಿ ಮೇಲೆ ಭರವಸೆ ಇದೆ. ಜಗತ್ತಿನಲ್ಲಿ ಭಾರತ ಅಗ್ರಗಣ್ಯವಾಗಿ ನಿಲ್ಲಬೇಕು. ಭಾರತ ಅಭಿವೃದ್ಧಿ ರಾಷ್ಟ್ರವಾಗಬೇಕು ಎಂಬ ಹಂಬಲವಿದೆ. ಯಡಿಯೂರಪ್ಪ ರೈತರು, ಬಡವರು ದೀನದಲಿತರು, ಪರಿಶಿಷ್ಟ ಜಾತಿ ವರ್ಗದ ಯುವಕರ ಕಣ್ಣೀರು ಒರೆಸುವ ಕೆಲಸ ಮಾಡಿದ್ದಾರೆ. ಕೆ.ಆರ್.ಪೇಟೆ ತಾಲೂಕಿನ ಅಭಿವೃದ್ಧಿ ಯೋಜನೆಗಳಿಗೆ 1800 ಕೋಟಿ ರೂ. ಅನುದಾನ ನೀಡಿದ್ದಾರೆ. ಮೈಶುಗರ್ ಕಾರ್ಖಾನೆಗೆ ಹಣಕಾಸು ವ್ಯವಸ್ಥೆ ಮಾಡಿ ಶಕ್ತಿ ಕೊಟ್ಟದ್ದು ಬಿಜೆಪಿ ಎಂದು ನುಡಿದರು. ಯಾರದೋ ದುಡ್ಡು ಎಲ್ಲಮ್ಮನ ಜಾತ್ರೆ ರೀತಿ ಕಾಂಗ್ರೆಸ್ ಕೇಂದ್ರ ನೀಡುವ 30 ಕೆಜಿ ಅಕ್ಕಿಯನ್ನು 3 ಕೆಜಿ ಚೀಲದಲ್ಲಿ ತುಂಬಿ ಮೇಲೆ ಸಿದ್ದರಾಮಯ್ಯ ತಮ್ಮ ಫೋಟೋ ಹಾಕಿಕೊಂಡು ವಿತರಿಸಿದರು ಎಂದು ಲೇವಡಿ ಮಾಡಿದರು.

ಮಹಿಳಾ ಸಬಲೀಕರಣಕ್ಕೆ ಹತ್ತಾರು ಕಾರ್ಯಕ್ರಮ ಅನುಷ್ಠಾನ

ಮಹಿಳಾ ಸಮಾವೇಶದಲ್ಲಿ ಉನ್ನತ ಶಿಕ್ಷಣ ಸಚಿವ ಡಾ.ಅಶ್ವತ್ಥ್ ನಾರಾಯಣ್



ನಾಗಮಂಗಲ, ಫೆ.22– ಮಹಿಳೆಯರು ಈ ದೇಶದ ಶಕ್ತಿ. ಮಹಿಳೆಯರ ಸಬಲೀಕರಣಕ್ಕಾಗಿ ಪ್ರಧಾನಿ ಮೋದಿ ಹತ್ತಾರು ಕಾರ್ಯಕ್ರಮ ಅನುಷ್ಠಾನಕ್ಕೆ ತಂದಿದ್ದಾರೆ ಎಂದು ಉನ್ನತ ಶಿಕ್ಷಣ ಸಚಿವ ಅಶ್ವತ್ಥನಾರಾಯಣ ತಿಳಿಸಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ನಡೆದ ತಾಲೂಕು ಮಹಿಳಾ ಸಮಾವೇಶದಲ್ಲಿ ಮಾತನಾಡಿದ ಅವರು, ದೇಶದ ಒಳಿತಿಗಾಗಿ ಕೆಲವು ಕುಟುಂಬ ರಾಜಕಾರಣಗಳಿಗೆ ಮಾನ್ಯತೆ ನೀಡದ ಜೆಡಿಎಸ್ ಹಾಗೂ ಕಾಂಗ್ರೆಸ್ ಪಕ್ಷಗಳನ್ನು ತಿರಸ್ಕರಿಸುವ ಸಾಮರ್ಥ್ಯ ಮಹಿಳಾ ಮತದಾರರಿಗಿದೆ. ಜಿಲ್ಲೆಯಲ್ಲಿ ಬಿಜೆಪಿ ಅಲೆ ಹೆಚ್ಚುತ್ತಿದ್ದು, ನಾಗಮಂಗಲ ಸೇರಿದಂತೆ ಕನಿಷ್ಠ 3 ತಾಲೂಕುಗಳನ್ನು ಗೆದ್ದೇ ಗೆಲ್ಲುತ್ತೇವೆ. ಇದೊಂದು ಅರ್ಥಪೂರ್ಣ ಮಹಿಳಾ ಸಮಾವೇಶ. ರಾಷ್ಟ್ರ ಹಾಗೂ ರಾಜ್ಯದಲ್ಲಿ ನಮ್ಮ ಸರ್ಕಾರ ಅನೇಕ ಜನೋಪಯೋಗಿ ಯೋಜನೆಗಳನ್ನು ತಂದಿದ್ದು ಸಾಮಾನ್ಯ ಜನತೆ ಪರವಾಗಿ ಕೆಲಸ ಮಾಡುತ್ತಿದ್ದೇವೆ ಮೋದಿ ನಮ್ಮ ರಾಜ್ಯಕ್ಕೆ ಕುಡಿಯುವ ನೀರಿನ ಯೋಜನೆಗೆ 85 ಸಾವಿರ ಕೋಟಿ ನೀಡಿದ್ದಾರೆ. ಮನೆ ಮನೆಗಂಗೆ ಹೆಸರಿನಡಿ ನೀರನ್ನು ನೀಡ ಲಾಗಿದೆ. ಸ್ವಚ್ಛ ಭಾರತದ ಯೋಜನೆಗೆ ಮಹಿಳೆಯರೇ ಬುನಾದಿಯಾಗಿದ್ದಾರೆ. ಮಹಿಳೆಯರನ್ನು ಸಬಲೀಕರಣ ಮಾಡುವ ದೃಷ್ಟಿಯಲ್ಲಿ ನಮ್ಮ ಸರ್ಕಾರ ದಿಟ್ಟ ಹೆಜ್ಜೆ ಇಟ್ಟಿದೆ. ಪ್ರಧಾನಿ ಮೋದಿ 50 ವರ್ಷಗಳಿಂದ ಸಂಘಟನೆಯಲ್ಲಿದ್ದು, 11 ವರ್ಷ ಮುಖ್ಯಮಂತ್ರಿಯಾಗಿ 9 ವರ್ಷ ಪ್ರಧಾನಿಯಾಗಿ ಜಗತ್ತೇ ಭಾರತವನ್ನು ತಿರುಗಿ ನೋಡುವಂತೆ ಮಾಡಿ ಭ್ರಷ್ಟಾಚಾರ ರಹಿತ ಆಡಳಿತ ನೀಡಿರುವುದು ನಮ್ಮ ನಿಮ್ಮೆಲ್ಲರಿಗೂ ಪ್ರೇರಣೆ. ನಮ್ಮ ಸರ್ಕಾರ ಯಾವ ಯೋಜನೆ ಮಾಡಿದರೂ ಅದು ಜನಪರವಾಗಿರುತ್ತದೆ ಎಂದರು.

ರಾಜ್ಯ ಬಿಜೆಪಿ ಮಹಿಳಾಧ್ಯಕ್ಷೆ ಗೀತಾ ವಿವೇಕಾನಂದ, ಮಲ್ಲಿಕಾರ್ಜುನ್ ಫೈಟರ್ ರವಿ ಮಾತನಾಡಿದರು. ಈ ವೇಳೆ ರಾಜ್ಯ ಉಪಾಧ್ಯಕ್ಷ ನಿರ್ಮಲ್ ಕುಮಾರ್ ಸುರಾನಾ, ಮಹಿಳಾ ಜಿಲ್ಲಾಧ್ಯಕ್ಷೆ ಯಶೋಧ ಜಿಲ್ಲಾಧ್ಯಕ್ಷ ಉಮೇಶ್, ಜಿಲ್ಲಾ ಪ್ರಭಾರಿ ಜಗದೀಶ್ ಹಿರೇಮನಿ ಇತರರು ಉಪಸ್ಥಿತರಿದ್ದರು.

ಸಂತೆ, ಜಾತ್ರೆ ನಿಷೇಧ

ಮಂಡ್ಯ, ಫೆ.22– ತಾಲೂಕಿನ ಆಲಕೆರೆ, ಡಣಾಯಕನಪುರ ಗ್ರಾಪಂ ಉಪ ಚುನಾವಣೆ ಫೆ.25ರಂದು ನಡೆಯಲಿದೆ. ಮತದಾನ ನಡೆಯುವ ಗ್ರಾಪಂ ವ್ಯಾಪ್ತಿಯಲ್ಲಿ ಅಂದು ಮುಕ್ತ ಮತ್ತು ನ್ಯಾಯೋಚಿತ ಚುನಾವಣೆ ಖಚಿತಪಡಿಸಲು ಜಾತ್ರೆ ಸಂತೆ ಹಾಗೂ ಇನ್ನಿತರ ಉತ್ಸವ ನಿಷೇಧಿಸಿ ಡಿಸಿ ಡಾ.ಹೆಚ್.ಎನ್ ಗೋಪಾಲಕೃಷ್ಣ ಆದೇಶ ಹೊರಡಿಸಿದ್ದಾರೆ

ಕೆಂಪೇಗೌಡ ನಿಧನ



ಮೇಲುಕೋಟೆ, ಫೆ.22– ಕದಲಗೆರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಶಿಕ್ಷಕ ಎಂ.ಕೆ. ವಿಜಯಕುಮಾರ್ ಅವರ ತಂದೆ ಕೆಂಪೇಗೌಡ ಉರುಫ್ ಪಾಪಣ್ಣ (70) ನಿಧನರಾದರು. ಮೃತರು ಓರ್ವ ಪುತ್ರ ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ ಬೆಳಗ್ಗೆ 10.30ಕ್ಕೆ ಸ್ವಗ್ರಾಮ ಮಾಣಿಕ್ಯನಹಳ್ಳಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನಪರ ಸರ್ಕಾರಕ್ಕೆ ನನ್ನನ್ನು ಬೆಂಬಲಿಸಿ: ಎಂ.ಶ್ರೀನಿವಾಸ್



ಮಂಡ್ಯ, ಫೆ.22– ರಾಜ್ಯದಲ್ಲಿ ಸದೃಢ ಹಾಗೂ ಜನಪರ ಸರ್ಕಾರ ಅಧಿಕಾರಕ್ಕೆ ತಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಪಂಚರತ್ನ ಯೋಜನೆ ಜಾರಿಗೆ ತರಲು ಮಂಡ್ಯ ಕ್ಷೇತ್ರದ ಜನ ನನ್ನನ್ನು ಬೆಂಬಲಿಸಬೇಕೆಂದು ಶಾಸಕ ಹಾಗೂ ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಂ.ಶ್ರೀನಿವಾಸ್ ಮನವಿ ಮಾಡಿದರು.

ತಾಲೂಕಿನ ರಾಯಶೆಟ್ಟಿಪುರದಲ್ಲಿ ಜೆಡಿಎಸ್ ವತಿಯಿಂದ ಆಯೋಜಿಸಿದ್ದ ಪಂಚರತ್ನ ಯೋಜನೆ ಪ್ರಣಾಳಿಕೆಯನ್ನು ಮನೆ– ಮನೆಗೆ ತಲುಪಿಸುವ ಕಾರ್ಯಕ್ರಮ ಹಾಗೂ ಚುನಾವಣಾ ಪ್ರಚಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಕುಮಾರಸ್ವಾಮಿ ತಮ್ಮ ಅಧಿಕಾರವಧಿಯಲ್ಲಿ ರೈತರ ಸಾಲಮನ್ನಾ, ಬೆಂಬಲ ಬೆಲೆಯಲ್ಲಿ ಧಾನ್ಯ ಖರೀದಿ ಸೇರಿದಂತೆ ಹಲವು ರೈತ ಉಪಯೋಗಿ ಕಾರ್ಯಕ್ರಮ ಜಾರಿಗೆ ತಂದಿದ್ದರು. ಸಮಾಜದ ಅಶಕ್ತರು, ಬಡವರು ಹಾಗೂ ಮಹಿಳೆಯರ ಅಭ್ಯುದಯದ ಬಗ್ಗೆ ಚಿಂತಿಸುವ ದೂರ ದೃಷ್ಟಿಯುಳ್ಳ ಕುಮಾರಸ್ವಾಮಿ 2023ಕ್ಕೆ ಮುಖ್ಯಮಂತ್ರಿಯಾಗಿ ಆಯ್ಕೆಯಾದರೆ, ಪಂಚರತ್ನ ಯೋಜನೆ ಜಾರಿಗೊಳಿಸಿ, ಜನರ ಕಲ್ಯಾಣಕ್ಕೆ ನಾಂದಿ ಹಾಡುವರು ಎಂದರು. ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಯೋಗೇಶ್, ನಗರಸಭಾಧ್ಯಕ್ಷ ಎಚ್.ಎಸ್.ಮಂಜು, ಉಪಾಧ್ಯಕ್ಷೆ ಇಶ್ರತ್ ಫಾತೀಮಾ, ಸದಸ್ಯರಾದ ರವಿ, ನಾಗೇಶ್, ಮಂಜುಳಾ, ಮೀನಾಕ್ಷಿ ಜೆಡಿಎಸ್ ತಾಲೂಕು ಘಟಕದ ಅಧ್ಯಕ್ಷ ತಿಮ್ಮೇಗೌಡ ಸೇರಿದಂತೆ ಇತರರಿದ್ದರು.

ಅಕ್ರಮ ಮರಳು ಅಡ್ಡೆ ಮೇಲೆ ದಾಳಿ

10 ಟಿಪ್ಪರ್ ಮರಳು, 15ಕ್ಕೂ ಹೆಚ್ಚು ಕೊಪ್ಪರಿಕೆ ವಶ

ಮದ್ದೂರು, ಫೆ.22– ತಾಲೂಕಿನ ಕೆ.ಕೋಡಿಹಳ್ಳಿ ಶಿಂಷಾ ನದಿ ಪಾತ್ರದಲ್ಲಿ ಅಕ್ರಮವಾಗಿ ಮರಳುಗಾರಿಕೆ ನಡೆಸುತ್ತಿದ್ದ ಅಡ್ಡೆ ಮೇಲೆ ಉಪ ವಿಭಾಗಾಧಿಕಾರಿ ಎಚ್.ಎಸ್.ಕೀರ್ತನಾ ಹಾಗೂ ಮದ್ದೂರು ಪೊಲೀಸರು ದಾಳಿ ನಡೆಸಿ 10 ಟಿಪ್ಪರ್ ನಷ್ಟು ಮರಳು, 15ಕ್ಕೂ ಹೆಚ್ಚು ಕೊಪ್ಪರಿಕೆಯನ್ನು ವಶಪಡಿಸಿಕೊಂಡಿದ್ದಾರೆ.

ಶಿಂಷಾ ನದಿ ಪಾತ್ರದಲ್ಲಿ 144 ಸೆಕ್ಷನ್ ಜಾರಿಯಲ್ಲಿದ್ದರೂ ಅಕ್ರಮವಾಗಿ ದಂಧೆಕೋರರು ಮರಳು ತೆಗೆಯುತ್ತಿದ್ದ ಬಗ್ಗೆ ದೂರುಗಳು ಕೇಳಿ ಬಂದ ಹಿನ್ನೆಲೆಯಲ್ಲಿ ದಿಢೀರ್ ದಾಳಿ ನಡೆಸಿದ ಮಂಡ್ಯ ಉಪ ವಿಭಾಗಾಧಿಕಾರಿ ಎಚ್.ಎಸ್.ಕೀರ್ತನಾ ಹಾಗೂ ಮದ್ದೂರು ಪೊಲೀಸರು ದಾಳಿ ನಡೆಸಿದರು. ಈ ವೇಳೆ ಮರಳು ದಂಧೆಕೋರರು ಸ್ಥಳದಿಂದ ಕಾಲ್ಕಿತ್ತಿದ್ದಾರೆ. ಈ ಸಂಬಂಧ ಮದ್ದೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಛತ್ರಪತಿ ಶಿವಾಜಿ ದೇಶಭಕ್ತಿ, ತ್ಯಾಗ ಅಜರಾಮರ



ಮಂಡ್ಯ, ಫೆ.22– ಛತ್ರಪತಿ ಶಿವಾಜಿ ಅವರ ಆಡಳಿತ, ಕಾರ್ಯಶೀಲತೆ, ದೇಶಭಕ್ತಿ ಹಾಗೂ ತ್ಯಾಗ ಅಜರಾಮರ ಎಂದು ಜಿಪಂ ಉಪ ಕಾರ್ಯದರ್ಶಿ ಎಂ.ಬಾಬು ತಿಳಿಸಿದರು.

ಜಿಲ್ಲಾಡಳಿತ, ಜಿಪಂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಆಶ್ರಯದಲ್ಲಿ ಕಲಾಮಂದಿರದಲ್ಲಿ ನಡೆದ ಛತ್ರಪತಿ ಶಿವಾಜಿ 396ನೇ ಜಯಂತಿ ಉದ್ಘಾಟಿಸಿ ಅವರು ಮಾತನಾಡಿದರು. ಛತ್ರಪತಿ ಶಿವಾಜಿ ಪುರುಷರಷ್ಟೇ ಮಹಿಳೆ ಯರಿಗೂ ಸ್ಥಾನಮಾನ ಹಾಗೂ ಗೌರವ ನೀಡುತ್ತಿದ್ದರು. ಇವರ ಆಡಳಿತ ವ್ಯವಸ್ಥೆ ಮರಾಠ ಸಾಮ್ರಾಜ್ಯದ ಸ್ಥಾಪನೆಗೆ ತಳಪಾಯವಾಗಿತ್ತು ಎಂದರು.

ಭಾರತವು ಪ್ರಾಚೀನ ಕಾಲದಿಂದಲೂ ಸಾಕಷ್ಟು ಧೈರ್ಯಶಾಲಿ ಮತ್ತು ವೀರ ಆಡಳಿತಗಾರರ ಹಿನ್ನಲೆ ಹೊಂದಿದೆ. ಧೈರ್ಯಶಾಲಿ ಅಧಿಪತಿಗಳು ತಾಯಿನಾಡು ಮತ್ತು ಸ್ವರಾಜ್ಯ ರಕ್ಷಿಸಲು ತಮ್ಮ ಪ್ರಾಣವನ್ನೇ ಮುಡಿ ಪಾಗಿಟ್ಟಿದ್ದರು ಎಂದರು. ಮಹಾನ್ ಧೈರ್ಯ ಶಾಲಿ ಯೋಧರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಒಬ್ಬರು, ಭಾರತದಾದ್ಯಂತ ಮರಾಠ ಸಾಮ್ರಾಜ್ಯ ಸ್ಥಾಪಿಸಿ, ವಿಸ್ತರಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ ಎಂದರು.

ಶಿವಾಜಿ ಮತ್ತು ಅವರ ತಾಯಿ ಜೀಜಾ ಬಾಯಿಯವರ ಧಾರ್ಮಿಕ ನಿಷ್ಠೆ, ದೇಶಭಕ್ತಿ, ಚಾಣಾಕ್ಷತೆ, ಕಾರ್ಯದಕ್ಷತೆ ಹೀಗೆ ಅನೇಕ ಮಾಹಿತಿ ಹಾಗೂ ಅವರು ಬೆಳೆದು ಬಂದ ಹಾದಿಯನ್ನು 5ನೇ ತರಗತಿಯಿಂದ ಪದವಿ ಶಿಕ್ಷಣದವರೆಗೂ ಪಠ್ಯಗಳಲ್ಲಿ ತಿಳಿಯಬಹುದು.

ಶಿವಾಜಿಯವರು ಸೇನಾ ಪಡೆಗಳನ್ನು ರಚಿಸಿ ತರಬೇತಿ ನೀಡುತ್ತಿದ್ದರು. ಶತ್ರುಗಳನ್ನು ಜಾಣ್ಮೆ ಹಾಗೂ ತಾಳ್ಮೆಯಿಂದ ಸೋಲಿಸುತ್ತಿದ್ದರು ಎಂದರು. ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಉದಯ್ ಕುಮಾರ್, ಸ್ವಾತಂತ್ರ್ಯ ಹೋರಾಟಗಾರರಾದ ಶಂಕರ್ ಜಾಧವ್, ಮರಾಠ ಪರಿಷತ್ ಅಧ್ಯಕ್ಷ ಸುರೇಶ್ ರಾವ್, ಕಾರ್ಯದರ್ಶಿ ಅಂಬೋಜಿ, ಹಾಗೂ ಇನ್ನಿತರರಿದ್ದರು.

ಮದ್ಯ ಮಾರಾಟ ನಿಷೇಧ

ಮಂಡ್ಯ, ಫೆ.22– ತಾಲೂಕಿನ ಆಲಕೆರೆ, ಡಣಾಯಕನಪುರ ಗ್ರಾಪಂ ಉಪ ಚುನಾವಣೆ ಫೆ.25ರಂದು ನಡೆಯಲಿದ್ದು, ಅಂದು ಮತದಾನ ನಡೆಯುವ ಗ್ರಾಪಂನ 5 ಕಿಮೀ ಸುತ್ತಳತೆ ವ್ಯಾಪ್ತಿಯಲ್ಲಿ ಫೆ.23ರ ಸಂಜೆ 5 ರಿಂದ 25ರ ಸಂಜೆ 5 ಗಂಟೆವರೆಗೆ ಎಲ್ಲಾ ತರಹದ ಮದ್ಯದಂಗಡಿ, ಬಾರ್ ಆಂಡ್ ರೆಸ್ಟೋರೆಂಟ್ ಹಾಗೂ ಕ್ಲಬ್‌ಗಳಲ್ಲಿ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾಧಿಕಾರಿ ಡಾ.ಹೆಚ್. ಎನ್ ಗೋಪಾಲಕೃಷ್ಣ ಆದೇಶ ಹೊರಡಿಸಿದ್ದಾರೆ.

ಹೆಣ್ಣು ದನಿಯೆತ್ತಲು ಕಾರಣವಾದ ವಚನ ಸಾಹಿತ್ಯ ಎಲ್ಲಾ ಕಾಲಕ್ಕೂ ಸಲ್ಲುತ್ತೆ

● ಅಧ್ಯಾತ್ಮಿಕ ಚಿಂತಕ ಶಂಕರ ದೇವನೂರು ಅಭಿಮತ ● ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವದಲ್ಲಿ 'ವಚನ ಸಾಹಿತ್ಯದಲ್ಲಿ ಆಧ್ಯಾತ್ಮ' ವಿಚಾರವಾಗಿ ಉಪನ್ಯಾಸ



ಮೈಸೂರು, ಫೆ.22(ಎಸ್‌ಪಿಎನ್)– ಸಮಾಜದಲ್ಲಿ ಹೆಣ್ಣು ದನಿಯೆತ್ತಿದ್ದು ಹನ್ನೆರಡನೇ ಶತಮಾನದಲ್ಲಿ ಎಂದು ಖ್ಯಾತ ಅಧ್ಯಾತ್ಮಿಕ ಚಿಂತಕ ಹಾಗೂ ಕೆಪಿಟಿಸಿಎಲ್ ಮುಖ್ಯ ಅಭಿಯಂತರರಾದ ಶಂಕರ ದೇವನೂರು ಅಭಿಪ್ರಾಯಪಟ್ಟರು.

ಮೈಸೂರು ಶ್ರೀ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಮೈಸೂರಿನ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ, ಶ್ರೀ ರಾಮಕೃಷ್ಣ ಸೇವಾ ಸಂಘ ಮತ್ತು ವಿವೇಕ ಬಳಗ, ಶ್ರೀ ರಾಮಕೃಷ್ಣ ಸೇವಾ ಬಳಗ, ಶ್ರೀ ರಾಮಕೃಷ್ಣಾಶ್ರಮ ಹಾಗೂ ರಾಮ ಕೃಷ್ಣ ಸಾಂಸ್ಕೃತಿಕ ಮತ್ತು ಕ್ರೀಡಾ ಸಮಿತಿ ಸಹಯೋಗದೊಂದಿಗೆ ಆಯೋಜಿಸಿದ್ದ ಜಾತ್ರಾ ಮಹೋತ್ಸವದ 2ನೇ ದಿನದ ಕಾರ್ಯಕ್ರಮದಲ್ಲಿ 'ವಚನ ಸಾಹಿತ್ಯದಲ್ಲಿ ಆಧ್ಯಾತ್ಮ' ವಿಷಯ ಕುರಿತು ಮಾತನಾಡಿದ ಅವರು, ಆಯ್ದಕ್ಕಿ ಲಕ್ಕಮ್ಮ, ಸೋಮವ್ವ, ಮಸಣವ್ವ ಗೊಗ್ಗವ್ವ ಸೂಳೆ ಸಂಕವ್ವ ಇನ್ನು ಅನೇಕ ವಚನಗಾರ್ತಿಯರು ದನಿಯೆತ್ತಿ ಮಾತನಾಡಿದ್ದ ಕಾಲಘಟ್ಟವಿದು. ಈ ಸಾಹಿತ್ಯ ಎಲ್ಲಾ ಕಾಲಕ್ಕೂ ಸಲ್ಲುತ್ತದೆ ಎಂದರು.

ಈ ವೇದಿಕೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ 188ನೇ ಜಯಂತಿ, ಜಾತ್ರಾ ಮಹೋತ್ಸವದ ಮೂಲಕ ಗುರುದೇವರನ್ನು ನೆನೆಯುತ್ತಿರುವುದು ಉತ್ತಮ ಬೆಳವಣಿಗೆ. ತನ್ನ ಪತ್ನಿಯಲ್ಲಿ ತಾಯಿ ಸ್ವರೂಪ ಕಂಡ ಮಹಾನುಭಾವ ಶ್ರೀ ರಾಮಕೃಷ್ಣ ಪರಮಹಂಸರು ಎಂದರು.

ಈ ವೃತ್ತದಲ್ಲಿ ಹಲವರ ಪ್ರಯತ್ನದಿಂದಾಗಿ ಗುರುದೇವ ರಾಮಕೃಷ್ಣ ಪರಮಹಂಸರ ಜಾತ್ರಾ ಮಹೋತ್ಸವ ನಡೆಯುತ್ತಿದೆ. ಇಲ್ಲಿನ ನೂರಾರು ಜನರು ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಹೋತ್ಸವ ಕಳೆಗಟ್ಟುವಂತೆ ಮಾಡಿದ್ದಾರೆ. ಉತ್ಸಾಹ– ಉತ್ಸವ ಭಿನ್ನಭಿನ್ನ ಪದಗಳು. 'ಉತ್ಸಾಹ' ವ್ಯಕ್ತಿಗತವಾಗಿರುತ್ತದೆ. 'ಉತ್ಸವ' ಸಾಮೂಹಿಕವಾಗಿರುತ್ತದೆ. ಅಂತೆಯೇ 'ಬದುಕು' ಬೆಳಕಾಗಬೇಕು. 'ಬೆಳಕು' ಬಯಲಾಗಬೇಕು. ಹಾಗಾಗಿ ನಾವು–ನೀವು ರಾಮಕೃಷ್ಣ ಪರಮಹಂಸರ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡು ಇತರರ ಬದುಕಿಗೆ ಬೆಳಕಾಗಬೇಕು ಎಂದು ಅಭಿಪ್ರಾಯಪಟ್ಟರು.

ನಮ್ಮ–ನಿಮ್ಮ ಮನೆಯ ಮುಂದೆ ಸುವಾಸನೆ ಬರುವ ಒಂದು ಸಂಪಿಗೆ ಗಿಡವನ್ನೋ ಇಲ್ಲವೆ ಮಲ್ಲಿಗೆ ಗಿಡವನ್ನೋ ಹಾಕಿ ಪೋಷಿಸುತ್ತೇವೆ. ಅದು ಬೆಳೆದು ದೊಡ್ಡದಾದ ಮೇಲೆ ಹೂ ಬಿಟ್ಟು, ಅದು ತನ್ನ ಪರಿಮಳವನ್ನು ಸುತ್ತಮುತ್ತಲಿನ ಪರಿಸರಕ್ಕೆ ಹರಡುತ್ತದೆ. ಹಾಗೆಯೇ ವಿದ್ಯಾರ್ಥಿ ದಿಸೆಯಲ್ಲಿ ಉತ್ತಮ ಅಭಿರುಚಿಗಳನ್ನು ಮೈಗೂಡಿಸಿಕೊಂಡು, ಬೆಳೆದು ದೊಡ್ಡವರಾದ ಮೇಲೆ ಸಾಮಾಜಿಕ ಮೌಲ್ಯಗಳನ್ನು ಎಲ್ಲರಿಗೂ ಪಸರಿಸಬೇಕು ಎಂದು ಸಲಹೆ ನೀಡಿದರು.

ಭಾರತ ಹಲವು ವಿಭಿನ್ನ ಸಂಸ್ಕೃತಿ– ಪರಂಪರೆಗಳನ್ನೊಳಗೊಂಡಿರುವ ದೇಶ. ಇದು ಹಲವು ಸಂಸ್ಕೃತಿಗಳ ತವರೂರು ಎಂದು ಜಗತ್ತಿನ ಮುಂದೆ ಗುರುತಿಸಿಕೊಂಡಿದೆ. ಭಾರತದ ಋಷಿ ಪರಂಪರೆ ಸಾದೃಶ್ಯರ ಬೆಳಕು ಇತರರ ಬದುಕಿಗೆ ಜೀವದಾಯಕ, ಪ್ರಾಣ ಪೋಷಕ ಎಂದ ಅವರು, ಬಹುದಿನಗಳ ಹಿಂದೆ ಋಷಿ ಸಂಸ್ಕೃತಿ ಆಚರಣೆಯಲ್ಲಿತ್ತು. ನಂತರ 'ಕೃಷಿ' ಸಂಸ್ಕೃತಿ ಆಚರಣೆಗೆ ಬಂತು. 'ಕೃಷಿ'ಯಿಂದ 'ಋಷಿ' ಸಂಸ್ಕೃತಿಗೆ ಬದಲಾಯ್ತು 'ಋಷಿ' ಸಂಸ್ಕೃತಿ ಅನುಸರಿಸಿದವರ ಬದುಕು ಹುಸಿಯಾಗಿದೆ. ಇಂತಹ ಕಾಲಘಟ್ಟದಲ್ಲಿ ನಾವು–ನೀವು ಬದುಕುತ್ತಿದ್ದೇವೆ. ಇಂತಹ ಪರಿಸರದಿಂದ ಹೊರಬರಲು ಶ್ರೀ ರಾಮಕೃಷ್ಣ ಪರಮಹಂಸರ ಸಂದೇಶ ಪೂರಕವಾಗಿದೆ ಎಂದರು.

ಭಾರತದ ಧಾರ್ಮಿಕ ಇತಿಹಾಸದಲ್ಲಿ 12 ನೇ ಶತಮಾನದ ವಚನಗಳು ಅತ್ಯಂತ ಪವಿತ್ರ, ಮೌಲ್ಯಯುತ, ಭಾವ ಪೂರ್ಣವಾಗಿವೆ. ಇಡೀ ಜಗತ್ತಿಗೆ ವಚನ ಆಧ್ಯಾತ್ಮಿಕ ಪರಂಪರೆ ಪ್ರಸ್ತುತವಾಗಿದೆ. ಅಲ್ಲದೆ, ಮಾನವನ ವಿಕಾಸಕ್ಕೆ ಬಸವಾದಿ ಪ್ರಥಮರ ಕೊಡುಗೆ ಅಪಾರ. ಮುಂದೆ ದಾಸ ಸಾಹಿತ್ಯ ಉಗಮಕ್ಕೆ ವಚನ ಸಂಸ್ಕೃತಿ ಅಡಿಗಲ್ಲಾಗಿದೆ ಎಂದು ಹಲವು ಪ್ರಸಂಗಗಳನ್ನು ಉದಾಹರಿಸಿ ವಿವರಿಸಿದರು. ಅಂತೆಯೇ 12ನೇ ಶತಮಾನದ ವಚನ ಸಂಸ್ಕೃತಿ, ಕಾಯಕ, ದಾಸೋಹ, ಸಂಘ ತತ್ವದ ಮೂಲಕ ತಮ್ಮ ವ್ಯಕ್ತಿಗತ ವ್ಯಕ್ತಿತ್ವ ರೂಢಿಸಿಕೊಳ್ಳಲು ಸಹಕಾರಿಯಾಗಲಿದೆ ಎಂದರು.

ಈ ನೆಲದಲ್ಲಿ ನಾವು ಹುಟ್ಟಿದ್ದೇವೆ. ಈ ನೆಲದ 'ಫಲ' ತಿಂದು ನಾವು ಬದುಕಿದ್ದೇವೆ. ಈ ನೆಲದ 'ಜಲ'ವನ್ನು ಸೇವಿಸುತ್ತಿದ್ದೇವೆ. ಈ ನೆಲದ 'ಗಾಳಿ'ಯನ್ನು ಎದೆಗೆ ತುಂಬಿಕೊಂಡು ಜೀವಿಸಿದ್ದೇವೆ. ಆ ಬದುಕಿಗೆ ಮೆರುಗು ನೀಡುವಂತಹ ಸಂಸ್ಕೃತಿ, ಪರಂಪರೆಯನ್ನು ಅಳವಡಿಸಿಕೊಂಡಿದ್ದೇವೆ. ಹಾಗಾಗಿ 12 ನೇ ಶತಮಾನದ ವಚನ ಸಂಸ್ಕೃತಿ ಅತ್ಯಂತ ಶಕ್ತಿಯುತ, ಮೌಲ್ಯಯುತ ಎನ್ನುತ್ತಾರೆ ವಿದ್ವಾಂಸರು. ಈ ಮೌಲ್ಯಗಳನ್ನು ಸಮಾಜ ಮೈಗೂಡಿಸಿಕೊಂಡು ಮುಂದೆ ಸಾಗಬೇಕು ಎಂದು ಸಲಹೆ ನೀಡಿದರು.

ಈ ವೇಳೆ ವಾಸು ಬಡಾವಣೆಯ ವೇದಾವ್ಯಾಸ ಭಜನಾ ಮಂಡಳಿ ಕಲಾವಿದರು ಹಲವು ಭಜನೆಗಳನ್ನು ಹಾಡಿದರು. ನಂತರ ರಾಜರಾಜೇಶ್ವರಿ ತಂಡದ ಕಲಾವಿದರು ವಿವಿಧ ಭಕ್ತಿ ಗೀತೆಗಳನ್ನು ಹಾಡಿದರು. ಪತಂಜಲಿ ಯೋಗ ಶಿಕ್ಷಣ ಸಮಿತಿಯಿಂದ ಯೋಗಾಸನ ಪ್ರದರ್ಶಿಸಿ, ಸಭಿಕರ ಮನಸೆಳೆದರು.

ವೇದಿಕೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ, ಸುಯೋಗ ಆಸ್ಪತ್ರೆಯ ಅಧ್ಯಕ್ಷರು, ಹೃದ್ರೋಗ ತಜ್ಞ ಹಾಗೂ ಶ್ರೀ ರಾಮಕೃಷ್ಣ ಜಾತ್ರಾ ಮಹೋತ್ಸವ ಸಮಿತಿ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ, ಕಾರ್ಯದರ್ಶಿ ದೊರೈರಾಜ್, ಸಂಚಾಲಕರಾದ ಬಸವಣ್ಣ, ಬಸವಲಂಗಪ್ಪ, ಬಸವರಾಜ್, ಗೋಪಿನಾಥ್ ಉಪಸ್ಥಿತರಿದ್ದರು.

ಕಲಾವಿದ ಚನ್ನಪ್ಪಚಾರ್ಯರಿಗೆ ನುಡಿನಮನ



ಮೈಸೂರು, ಫೆ.22– ಮೈಸೂರಿನ ಮುಕುಂದ ಸಭಾಂಗಣದಲ್ಲಿ ಕಲಾವಿದ ದಿವಂಗತ ಚನ್ನಪ್ಪಚಾರ್ಯ ಸ್ಮರಣಾರ್ಥ ನುಡಿನಮನ ಕಾರ್ಯಕ್ರಮ ನಡೆಯಿತು.

ಕರ್ನಾಟಕ ಶಿಲ್ಪ ಕಲಾ ಅಕಾಡೆಮಿ ಅಧ್ಯಕ್ಷ ವೀರಣ್ಣ ಅರ್ಕಶಾಲಿ ನುಡಿನಮನ ಸಲ್ಲಿಸುತ್ತ ಕಲಾವಿದ ಚನ್ನಪ್ಪಚಾರ್ಯರ ನಡೆ–ನುಡಿ, ಸರಳತೆ, ಪ್ರಾಮಾಣಿಕತೆಗೆ ಹೆಸರುವಾಸಿಯಾಗಿದ್ದರು. ಕೆಲಸದಲ್ಲಿ ತೋರುತ್ತಿದ್ದ ಚಾಕಚಕ್ಯತೆ ಕುರಿತು ಗುಣಗಾನ ಮಾಡಿದರು.

ಈ ವೇಳೆ ಶ್ರೀ ಕ್ಷೇತ್ರದ ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಡೆ ಅವರ ಪ್ರತಿನಿಧಿಯಾಗಿ ಸುರೇಶ್ ಆಚಾರ್, ರಾಮಸನ್ಸ್ ಕಲಾ ಪ್ರತಿಷ್ಠಾನದ ಕಾರ್ಯದರ್ಶಿ ಆರ್.ಜಿ.ಸಿಂಗ್, ಚಾಮರಾಜನಗರ ಚಿತ್ರಕಲಾವಿದ ಮಹದೇವಸ್ವಾಮಿ, ಹವ್ಯಾಸಿ ಕಲಾವಿದ ಜಯಣ್ಣ, ಬಿಜೆಪಿ ಮುಖಂಡ ರಂಗಪ್ಪ, ರಾಮಲಿಂಗ ಚೌಡೇಶ್ವರಿ ದೇವಸ್ಥಾನದ ಅಶ್ವಥ್ ನಾರಾಯಣ, ನಿವೃತ್ತ ಡಿವೈಎಸ್ಪಿ ಮರಿಸ್ವಾಮಾಚಾರ್ ಭಾಗವಹಿಸಿ ದಿವಂಗತ ಚನ್ನಪ್ಪಚಾರ್ಯ ಅವರಿಗೆ ನುಡಿನಮನ ಸಲ್ಲಿಸಿದರು.

ಈ ವೇಳೆ ನೆರೆದಿದ್ದ ಗಣ್ಯರು, ಕಲಾವಿದ ದಿವಂಗತ ಚನ್ನಪ್ಪಚಾರ್ಯ ಅವರ ಹೆಸರನ್ನು ಚಿರಸ್ಥಾಯಿಯಾಗಿಸಲು ಮೈಸೂರಿನ ಯಾವುದಾದರೊಂದು ವೃತ್ತ ಮತ್ತು ಬಿಳಿಕೆರೆಯ ಪ್ರಮುಖ ವೃತ್ತಕ್ಕೆ ಹೆಸರಿಡುವಂತೆ ಜಿಲ್ಲಾಡಳಿತವನ್ನು ಒತ್ತಾಯಿಸಿದ್ದಾರೆ.

ಇಂದು ಜಿಲ್ಲಾ ಪಂಚಾಯತ್ ಕೆಡಿಪಿ ಸಭೆ

ಮೈಸೂರು, ಫೆ.22–ನಾಳೆ (ಫೆ.23) ಬೆಳಗ್ಗೆ 11.30 ಗಂಟೆಗೆ ಜಿಲ್ಲಾ ಪಂಚಾ ಯತ್‌ನ ಅಬ್ದುಲ್ ನಜೀರ್ ಸಭಾಂಗಣದಲ್ಲಿ ಕೆಡಿಪಿ ಸಭೆಯನ್ನು ಏರ್ಪಡಿಸಲಾಗಿದೆ. ಸಭೆಯ ಅಧ್ಯಕ್ಷತೆಯನ್ನು ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಎನ್.ಜಯರಾಮ್ ವಹಿಸಲಿದ್ದು, ಸದರಿ ಸಭೆಗೆ ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳು ಅಗತ್ಯ ಮಾಹಿತಿಯೊಂದಿಗೆ ಖುದ್ದು ಹಾಜರಾಗುವಂತೆ ಜಿಪಂನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಮಿಳು ನಟ ಪ್ರಭು ಆಸ್ಪತ್ರೆಗೆ ದಾಖಲು



ಚೆನ್ನೈ: ಬಹುಭಾಷಾ ನಟ ಪ್ರಭು ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ತೀವ್ರ ಹೊಟ್ಟೆ ನೋವಿನಿಂದ ಬಳಲುತ್ತಿದ್ದು, ಅವರನ್ನು ಚೆನ್ನೈನ ಮೆಡ್ವೇ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕನ್ನಡ, ತೆಲುಗು, ತಮಿಳು, ಮಲಯಾಳಂ ಚಿತ್ರಗಳಲ್ಲಿ ನಟ ಪ್ರಭು ನಟಿಸಿದ್ದಾರೆ. ನಟ, ಪೋಷಕ ನಟನಾಗಿ ಪ್ರಭು ಛಾಪು ಮೂಡಿಸಿದ್ದಾರೆ. ಖ್ಯಾತ ನಟ ಶಿವಾಜಿ ಗಣೇಶನ್ ಪುತ್ರ ಪ್ರಭು ಅವರಿಗೆ ಚಿಕಿತ್ಸೆ ನೀಡಲಾಗುತ್ತಿದೆ. ತಪಾಸಣೆಯ ಬಳಿಕ ಕಿಡ್ನಿಯಲ್ಲಿ ಕಲ್ಲು ಇರುವುದು ಪತ್ತೆಯಾಗಿದೆ. ಪ್ರಭು ಅವರನ್ನು ಶಸ್ತ್ರಚಿಕಿತ್ಸೆಗೆ ಕಳುಹಿಸಲಾಗಿದೆ. ಅವರಿಗೆ ಲೇಸರ್ ಎಂಡೋಸ್ಕೋಪಿ ಸಹ ಮಾಡಲಾಗಿದ್ದು, ಇದೀಗ ಅವರ ಆರೋಗ್ಯ ಸ್ಥಿತಿ ಉತ್ತಮವಾಗಿದೆ ಎಂದು ಆಸ್ಪತ್ರೆಯ ಹೆಲ್ತ್ ಅಪ್‌ಡೇಟ್ ಬಂದಿದೆ. ಶಸ್ತ್ರಚಿಕಿತ್ಸೆಯ ಬಳಿಕ ಅವರು ಕೆಲ ದಿನಗಳ ಕಾಲ ವಿಶ್ರಾಂತಿಯನ್ನ ಪಡೆಯಲಿದ್ದಾರೆ. ಒಂದೆರಡು ದಿನಗಳಲ್ಲಿ ಡಿಸ್ಚಾರ್ಜ್ ಆಗಲಿದ್ದಾರೆ.

ನಾಳೆಯಿಂದ ಜೆಎಸ್‌ಎಸ್ ಅರ್ಬನ್‌ಹಾತ್‌ನಲ್ಲಿ ಗುಜರಾತ್ ಕರಕುಶಲ ಉತ್ಸವ



ಮೈಸೂರು,ಫೆ.22(ಪಿಎಂ)– ಹೆಬ್ಬಾಳು ಕೈಗಾರಿಕಾ ಪ್ರದೇಶದಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್‌ನಲ್ಲಿ ಫೆ.24ರಿಂದ ಮಾ.5ರವರೆಗೆ ಗುಜರಾತ್ ಕರಕುಶಲ ಉತ್ಸವ–2023 ಅನ್ನು ಆಯೋಜಿಸಲಾಗಿದೆ ಎಂದು ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕ ಡಾ. ಹೆಚ್.ಆರ್.ಮಹದೇವಸ್ವಾಮಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಜರಾತ್ ಸರ್ಕಾರದ ಹಸ್ತಕಲಾ ಸೇತು ಯೋಜನೆಯಡಿ ಈ ಮೇಳ ಆಯೋಜಿಸಲಾಗಿದೆ. ಅಹಮದಾಬಾದ್‌ನ ಎಂಟರ್ಪ್ರಿ ಯಾಶಿಪ್ ಡೆವಲಪ್‌ಮೆಂಟ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ, ಗುಜರಾತ್ ಸರ್ಕಾರ ಅಧೀನದ ಇಂಡಸ್ಟ್ರಿಯಲ್ ಎಕ್ಸ್‌ಟೆನ್ಸ್‌ನ್ ಕಾಟೇಜ್, ಕಾಟೇಜ್ ಅಂಡ್ ರೂಲರ್ ಇಂಡಸ್ಟ್ರಿಸ್ ಸಂಯುಕ್ತಾಶ್ರಯದಲ್ಲಿ ಈ ಮೇಳ ಆಯೋಜಿಸಲಾಗಿದೆ ಎಂದರು. ಸದರಿ ಮೇಳವು ಹಿಂದಿನ ಮೇಳಗಳಿಂತಲೂ ವಿಶೇಷವಾಗಿರಲಿದೆ. ಗುಜರಾತ್ ರಾಜ್ಯದ ವಿವಿಧ ಭಾಗಗಳ ಪ್ರಸಿದ್ಧ ಹಾಗೂ ಕ್ರಿಯಾಶೀಲವಾಗಿರುವ 60ಕ್ಕೂ ಹೆಚ್ಚು ಕುಶಲಕರ್ಮಿಗಳು ಮೇಳದಲ್ಲಿ ಭಾಗವಹಿಸಿ ತಮ್ಮ ಉತ್ಪನ್ನ ಗಳ ಪ್ರದರ್ಶನ ಮತ್ತು ಮಾರಾಟ ಮಾಡಲಿದ್ದಾರೆ. ಪಟೋಲ ಸೀರೆ, ಬಾಂದಿನಿ ಸೀರೆ, ಕಸೂತಿ ಮಾಡಿದ ಬೆಡ್ ಶೀಟ್, ಟವಲ್, ಕುಶನ್ ಕವರ್, ಪರಿಸರ ಸ್ನೇಹಿ ಆಭರಣ, ಡ್ರೆಸ್ ಮೆಟೀರಿಯಲ್, ಮಣ್ಣಿನಿಂದ ಮಾಡಿದ ವಸ್ತುಗಳು, ಮೆಟಲ್ ವರ್ಕ್, ಕುರ್ತಿ, ಚನಿಯಾ ಚೋಲಿ ಸೇರಿದಂತೆ ಮೊದಲಾದ ಸಾಮಗ್ರಿಗಳು ದೊರೆಯಲಿವೆ ಎಂದು ತಿಳಿಸಿದರು. ತಯಾರಕರಿಂದಲೇ ನೇರವಾಗಿ ಗ್ರಾಹಕರಿಗೆ ಕೈಗೆಟಕುವ ದರದಲ್ಲಿ ಸಾಮಗ್ರಿಗಳನ್ನು ಒದಗಿಸಬೇಕೆಂದು ಗುಜರಾತ್ ಸರ್ಕಾರದ ಆಶಯ. ಈ ನಿಟ್ಟಿನಲ್ಲಿ ಈ ಮೇಳ ಆಯೋಜನೆಗೊಳ್ಳುತ್ತಿದೆ. ಮೈಸೂರು ಹಾಗೂ ಸುತ್ತಮುತ್ತಲ ಗ್ರಾಹಕರು ಗುಜರಾತ್ ಸಂಸ್ಕೃತಿಯ ಉಡುಗೆ–ತೊಡುಗೆ, ಅಲಂಕಾರಿಕ ವಸ್ತುಗಳನ್ನು ಉತ್ಪಾದಕರಿಂದ ನೇರವಾಗಿ ಖರೀದಿಸಲು ಈ ಮೇಳ ವೇದಿಕೆಯಾಗಲಿದೆ ಎಂದರು.

ಉದ್ಘಾಟನೆ: ಫೆ.24ರಂದು ಸಂಜೆ 4ಕ್ಕೆ ಜಿಪಂ ಸಿಇಓ ಕೆ.ಎಂ. ಗಾಯಿತ್ರಿ ಮೇಳ ಉದ್ಘಾಟಿಸಲಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯ ದರ್ಶಿ ಡಾ.ಸಿ.ಜಿ.ಬೆಟಸೂರ ಮಠ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ಇತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಬೆಳಗ್ಗೆ 10ರಿಂದ ರಾತ್ರಿ 8ರವರೆಗೆ ಮೇಳಕ್ಕೆ ಗ್ರಾಹಕರು ಭೇಟಿ ನೀಡಬಹುದು. ಮೇಳಕ್ಕೆ ಪ್ರವೇಶ ಉಚಿತವಿದ್ದು, ಮೇಳದ ಸಂದರ್ಭದಲ್ಲಿ ಆಸಕ್ತರಿಗೆ ಕುಶಲಕರ್ಮಿಗಳು ತಮ್ಮ ಕಲೆಯ ಬಗ್ಗೆ ತರಬೇತಿ ಸಹ ನೀಡಲಿದ್ದಾರೆ ಎಂದು ಹೇಳಿದರು. ಜೆಎಸ್‌ಎಸ್ ಅರ್ಬನ್ ಹಾತ್‌ನ ಯೋಜನಾಧಿಕಾರಿ ಶಿವನಂಜಸ್ವಾಮಿ ಗೋಷ್ಠಿಯಲ್ಲಿದ್ದರು.

ಪ್ರಸಕ್ತ ಸಾಲಿನಲ್ಲಿ PUCಯಲ್ಲಿ 7.27 ಲಕ್ಷ, SSLCಯಲ್ಲಿ 8.69 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರು

- ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವ ನಾಗೇಶ್ ಮಾಹಿತಿ
- ಮಾ. 9ರಿಂದ 15ರವರೆಗೆ ಪರೀಕ್ಷೆಗಳು ನಡೆಯಲಿವೆ

ಬೆಂಗಳೂರು: ಮಾರ್ಚ್ 9 ರಿಂದ ಏಪ್ರಿಲ್ 15ರವರೆಗೆ ನಡೆಯಲಿರುವ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಮಂಗಳವಾರ ಹೇಳಿದರು.

ಪರೀಕ್ಷೆ ಹಿನ್ನೆಲೆಯಲ್ಲಿ ಸಚಿವರು ವಿಧಾನಸೌಧದಲ್ಲಿ ಹಿರಿಯ ಪೊಲೀಸ್ ಅಧಿಕಾರಿಗಳ ಜೊತೆ ಸಭೆ ನಡೆಸಿದರು. ಸಭೆಯಲ್ಲಿ ಪರೀಕ್ಷಾ ಕ್ರಮ, ಪರೀಕ್ಷೆಯಲ್ಲಿ ಆದ ಬದಲಾವಣೆ, ಭದ್ರತೆ ಹಾಗೂ ನಕಲು ಮುಕ್ತ ಪರೀಕ್ಷೆಯ ಕ್ರಮಗಳ ಕುರಿತು ಚರ್ಚೆ ನಡೆಸಲಾಯಿತು.

ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಒಟ್ಟು 5716 ಕಾಲೇಜುಗಳು ಭಾಗಿಯಾಗಲಿವೆ. ಒಟ್ಟು 7,27,387 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ. 1109 ಒಟ್ಟು ಪರೀಕ್ಷಾ ಕೇಂದ್ರಗಳು ಇರಲಿದೆ ಎಂದು ಹೇಳಿದರು. ಪರೀಕ್ಷಾ ಕೇಂದ್ರಗಳಿಗೆ ತೆರಳುವ ವಿದ್ಯಾರ್ಥಿಗಳು ಯಾವುದೇ ಎಲೆಕ್ಟ್ರಾನಿಕ್ ಗ್ಯಾಜೆಟ್‌ಗಳಿಗೆ ಅವಕಾಶ ಇರುವುದಿಲ್ಲ. ಪರೀಕ್ಷೆ ಪ್ರಾರಂಭವಾಗುವ 15 ನಿಮಿಷ ಮೊದಲು ವಿದ್ಯಾರ್ಥಿಗಳು ಪರೀಕ್ಷಾ ಕೊಠಡಿಯಲ್ಲಿ ಹಾಜರಿರಬೇಕು ಇದೆ ಮೊದಲ ಬಾರಿಗೆ ಪಿಯುಸಿ ಪರೀಕ್ಷೆಯಲ್ಲಿ ಮಲ್ಟಿಪಲ್ ಚಾಯ್ಸ್ ಇರಲಿದೆ. ಮಕ್ಕಳು ಪಾಸಾಗಲು 3 ಹಂತದ ಪ್ರಶ್ನೆಗಳು ಇರಲಿವೆ ಎಂದು ವಿವರಿಸಿದರು.

ಇದೇ ವೇಳೆ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬಗ್ಗೆ ಮಾಹಿತಿ ನೀಡಿ, ಪಿಯುಸಿ ಪರೀಕ್ಷೆ ನಂತರ ಎಸ್‌ಎಸ್‌ಎಲ್‌ಸಿ ಪರೀಕ್ಷೆಗಳು ನಡೆಯಲಿದೆ. ಈ ಬಾರಿ ಒಟ್ಟು 8,69,490 ವಿದ್ಯಾರ್ಥಿಗಳು ಪರೀಕ್ಷೆಯನ್ನು ಬರೆಯಲಿದ್ದಾರೆ. ಇದಕ್ಕಾಗಿ ಒಟ್ಟು 3,307 ಪರೀಕ್ಷಾ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಶಿಕ್ಷಣ ಇಲಾಖೆ ಸಿಸಿಟಿವಿ ಅಳವಡಿಕೆ ಸೇರಿ ಬಹುತೇಕ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಲಾಗಿದೆ ಎಂದರು. ಪರೀಕ್ಷಾ ಅವಧಿಯಲ್ಲಿ ಕೇಂದ್ರದ ಸುತ್ತಲಿನ ಎಲ್ಲಾ ಫೋಟೋಕಾಪಿ (ಜೆರಾಕ್ಸ್) ಕೇಂದ್ರಗಳನ್ನು ಮುಚ್ಚಲಾಗುತ್ತದೆ. ಸೈಬರ್ ಸೆಂಟರ್‌ಗಳು, ಟ್ಯೂಷನ್ ಸೆಂಟರ್‌ಗಳು ಮತ್ತು ಗೇಮಿಂಗ್ ಸೆಂಟರ್‌ಗಳ ಮೇಲೆ ನಿಗಾ ಇರಿಸಲಾಗುವುದು. ಈ ಹಿಂದೆ ಅವ್ಯವಹಾರ ನಡೆದಿರುವ ಪರೀಕ್ಷಾ ಕೇಂದ್ರಗಳಲ್ಲಿ ಹೆಚ್ಚಿನ ನಿಗಾ ವಹಿಸಲಾಗುವುದು ಎಂದು ತಿಳಿಸಿದರು.

ಇದೇ ಮೊದಲ ಬಾರಿಗೆ ಏಪ್ರಿಲ್ 1ರಿಂದ ಜಮ್ಮು–ಕಾಶ್ಮೀರದಲ್ಲಿ ಆಸ್ತಿ ತೆರಿಗೆ ಜಾರಿ

ನವದೆಹಲಿ: ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಜಮ್ಮು–ಕಾಶ್ಮೀರದ ಆರ್ಟಿಕಲ್ 370 ರದ್ದುಗೊಳಿಸಿದ 3 ವರ್ಷಗಳ ಬಳಿಕ ಏ.1 ರಿಂದ ಆಸ್ತಿ ತೆರಿಗೆ ವಿಧಿಸುವುದು ಕೇಂದ್ರಾಡಳಿತ ಪ್ರದೇಶದಲ್ಲಿ ಜಾರಿಗೆ ಬರುತ್ತಿದೆ.

ಆಸ್ತಿ ತೆರಿಗೆ ವಿಧಿಸುವ ನಿರ್ಧಾರವನ್ನು ಜಮ್ಮು–ಕಾಶ್ಮೀರ ಆಡಳಿತ ತೆಗೆದುಕೊಂಡಿದೆ. ವಸತಿ ಹಾಗೂ ನಗರಾಭಿವೃದ್ಧಿ ಇಲಾಖೆ ಇಂದು ಆಸ್ತಿ ತೆರಿಗೆ ವಿಧಿಸುವ ಬಗ್ಗೆ ಘೋಷಿಸಿದ್ದು, ಕೇಂದ್ರಾಡಳಿತ ಪ್ರದೇಶದ ಪುರಸಭೆಗಳು ಮತ್ತು ಮುನ್ಸಿಪಲ್ ಕೌನ್ಸಿಲ್‌ಗಳಲ್ಲಿ ಜಾರಿಗೆ ಬರಲಿದೆ. ವಸತಿ ಹಾಗೂ ವಸತಿಯೇತರ ಆಸ್ತಿಗಳು ಆಸ್ತಿ ತೆರಿಗೆ ವ್ಯಾಪ್ತಿಗೆ ಬರುತ್ತಿದೆ. ಈ ಹಿಂದೆ ವಸತಿ ಆಸ್ತಿಗಳಿಗೆ ಸರ್ಕಾರ ವಿನಾಯ್ತಿ ನೀಡಬಹುದು ಎಂದು ನಿರೀಕ್ಷಿಸಲಾಗಿತ್ತು. ವಸತಿ ಆಸ್ತಿಯೊಂದಕ್ಕೆ ಆಸ್ತಿ ತೆರಿಗೆಯನ್ನು, ತೆರಿಗೆ ವಿಧಿಸಬಹುದಾದ ವಾರ್ಷಿಕ ಮೌಲ್ಯ (ಟಿಎವಿ) ಯ ಶೇ.5 ರಷ್ಟು ವಿಧಿಸಲಿದ್ದು, ವಸತಿಯಲ್ಲದ್ದಕ್ಕೆ ಶೇ.6 ರಷ್ಟು ತೆರಿಗೆ ವಿಧಿಸಲಾಗುತ್ತದೆ.

ಸಂಶಯಾಸ್ಪದ ವ್ಯಕ್ತಿಗಳು, ವಾಹನಗಳ ನಂಬರ್ ಪತ್ತೆಗಾಗಿ

ಮೈಸೂರಿನ ಪ್ರವೇಶ, ನಿರ್ಗಮನ ಸ್ಥಳಗಳಲ್ಲಿ ಹೈಟೆಕ್ ಕ್ಯಾಮರಾ

ಮೈಸೂರು, ಫೆ.22(ಆರ್‌ಕೆ)–ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ಅಹಿತಕರ ಘಟನೆಗಳು ಸಂಭವಿಸದಂತೆ ಎಚ್ಚರ ವಹಿಸುತ್ತಿರುವ ಪೊಲೀಸರು, ಪ್ರವೇಶ ಹಾಗೂ ನಿರ್ಗಮನ ಸ್ಥಳ ಸೇರಿದಂತೆ 25 ಕಡೆಗಳಲ್ಲಿ ಅತ್ಯಂತ ಸುಧಾರಿತ ಸಿಸಿ ಕ್ಯಾಮರಾಗಳನ್ನು ಅಳವಡಿಸುತ್ತಿದ್ದಾರೆ.



ಮೈಸೂರಿಗೆ ಸಂಪರ್ಕ ಕಲ್ಪಿಸುವ ಮೈಸೂರು–ಬೆಂಗಳೂರು ಹೆದ್ದಾರಿಯ ಮಣಿಪಾಲ್ ಆಸ್ಪತ್ರೆ ಬಳಿಯ ರಿಂಗ್ ರಸ್ತೆ ಜಂಕ್ಷನ್, ಸಿದ್ದಲಿಂಗಪುರ ಬಳಿಯ ಚೆಕ್‌ಪೋಸ್ಟ್, ಹುಣಸೂರು ರಸ್ತೆಯ ಲಿಂಗದೇವರ ಕೊಪ್ಪಲು ಬಳಿಯ ಚೆಕ್‌ಪೋಸ್ಟ್, ಹೂಟಗಳ್ಳಿ ಜಂಕ್ಷನ್, ಬೋಗಾದಿ ಸರ್ಕಲ್, ಹೆಚ್.ಡಿ.ಕೋಟೆ ರಸ್ತೆ–ರಿಂಗ್ ರೋಡ್ ಜಂಕ್ಷನ್, ನಂಜನಗೂಡು ರಸ್ತೆ–ರಿಂಗ್ ರೋಡ್ ಜಂಕ್ಷನ್, ತಿ.ನರಸೀಪುರ ರಸ್ತೆ ಜಂಕ್ಷನ್, ಬನ್ನೂರು ರಸ್ತೆಯ ದೇವೇಗೌಡ ಸರ್ಕಲ್, ಮಹದೇವಪುರ ರಸ್ತೆ ರಿಂಗ್ ರೋಡ್ ಜಂಕ್ಷನ್‌ಗಳಲ್ಲಿ ಅತ್ಯಂತ ಸುಧಾರಿತ ಸ್ವಯಂಚಾಲಿತ, ನಂಬರ್ ಪ್ಲೇಟ್ ಗುರುತಿಸುವ ಹೈಟೆಕ್ ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗುತ್ತಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ರಮೇಶ್ 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

> ವಾಹನಗಳ ನಂಬರ್ ಪ್ಲೇಟ್ ಕ್ಲಿಕ್ಕಿಸುವ ಅತ್ಯಂತ ಸುಧಾರಿತ ಕ್ಯಾಮರಾಗಳನ್ನು ಮೈಸೂರು ನಗರಕ್ಕೆ ಸಂಪರ್ಕ ಕಲ್ಪಿಸುವ ಸ್ಥಳದಲ್ಲಿ ಅಳವಡಿಸುವ ಜೊತೆಗೆ ಇಡೀ ಮೈಸೂರು ನಗರದಾದ್ಯಂತ ಇನ್ನೂ 800 ಸಿಸಿ ಕ್ಯಾಮರಾ ಹಾಕಲು ಯೋಚಿಸುತ್ತಿದ್ದೇವೆ. ಈಗ ಕೇವಲ ಪ್ರಮುಖ ರಸ್ತೆ, ಜಂಕ್ಷನ್, ವಾಣಿಜ್ಯ ಕೇಂದ್ರ, ಪ್ರವಾಸಿ ತಾಣಗಳ ಬಳಿ ಮಾತ್ರ ಕ್ಯಾಮರಾಗಳಿವೆ. ಆದರೆ ಮೈಸೂರಿನಂತಹ ನಗರದಲ್ಲಿ ಅಪರಾಧ ತಡೆ, ಪತ್ತೆ, ಕಾನೂನು–ಸುವ್ಯವಸ್ಥೆ ಹಾಗೂ ಸಂಚಾರ ನಿಯಮವನ್ನು ನಿಯಂತ್ರಣಕ್ಕೆ ತರಲು ಎಲ್ಲೆಡೆ ಸಿಸಿ ಕ್ಯಾಮರಾ ಸರ್ವಲೆನ್ಸ್ ಅಗತ್ಯವಿದ್ದು, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು.
>
> - ಬಿ.ರಮೇಶ್, ನಗರ ಪೊಲೀಸ್ ಆಯುಕ್ತರು

ಯಾವುದೇ ವಾಹನ ಯಾವ ರಸ್ತೆಯಲ್ಲಾದರೂ ಮೈಸೂರಿಗೆ ಪ್ರವೇಶಿಸಿದಲ್ಲಿ ಅಥವಾ ಹೊರಗೆ ಹೋದಲ್ಲಿ ಸಮಯ ಸಮೇತ ಸ್ಪಷ್ಟವಾಗಿ ಕಾಣುವಂತೆ ಕ್ಯಾಮರಾಗಳು ವಾಹನದ ನಂಬರ್ ಪ್ಲೇಟ್ ಫೋಟೋ ಕ್ಲಿಕ್ಕಿಸಲಿದೆ. ಸಂಶಯಾಸ್ಪದ ವ್ಯಕ್ತಿಗಳು ಅಥವಾ ವಾಹನಗಳನ್ನು ಸುಲಭವಾಗಿ ಪತ್ತೆ ಮಾಡಲು ಇದರಿಂದ ಸಾಧ್ಯವಾಗುತ್ತದೆ ಎಂದು ನುಡಿದರು.

ಗಲಾಟೆ, ಗುಂಪು ಘರ್ಷಣೆ, ದರೋಡೆ, ಅಪಘಾತ, ಸಂಚಾರ ನಿಯಮ ಉಲ್ಲಂಘನೆಯಂತಹ ಘಟನೆಗಳ ಬಗ್ಗೆಯೂ ಈ ಕ್ಯಾಮರಾಗಳಿಂದ ತನಿಖೆಗೆ ಸಾಕಷ್ಟು ಸಾಕ್ಷ್ಯಾಧಾರಗಳು ಸಿಗುತ್ತವೆ. ಸಿಗ್ನಲ್ ಜಂಪ್, ಜೀಬ್ರಾ ಕ್ರಾಸಿಂಗ್‌ನಂತಹ ಸಂಚಾರ ವಿಭಾಗಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ಉಲ್ಲಂಘನೆ ಮಾಡಿದ ವಾಹನಗಳ ನೋಂದಣಿ ಸಂಖ್ಯೆ ಮೂಲಕ ಪತ್ತೆ ಮಾಡಲು ಅನುಕೂಲವಾಗುತ್ತದೆ ಎಂದು ಸಂಚಾರ ವಿಭಾಗದ ಎಸಿಪಿ ಪರಶುರಾಮಪ್ಪ ತಿಳಿಸಿದ್ದಾರೆ.

ಕಾನೂನು–ಸುವ್ಯವಸ್ಥೆ ಕಾಪಾಡುವುದು, ಅಪರಾಧ ತಡೆ ಮತ್ತು ಪತ್ತೆ ಹಾಗೂ ಸಂಚಾರ ನಿಯಮ ಪಾಲಿಸುವ ನಿಟ್ಟಿನಲ್ಲಿ ಸಿಸಿ ಕ್ಯಾಮರಾಗಳು ಸಹಕಾರಿಯಾಗಲಿವೆ. ಉನ್ನತ ತಂತ್ರಜ್ಞಾನದ ಕ್ಯಾಮರಾಗಳು ತೆಗೆದ ಫೋಟೋಗಳು ಸ್ಪಷ್ಟವಾಗಿ ಕಾಣುವುದರಿಂದ ತನಿಖೆಗೆ ಸಹಾಯವಾಗಲಿದೆ ಎಂದು ಅವರು ತಿಳಿಸಿದ್ದಾರೆ.

ಮೈಸೂರು ನಗರದಾದ್ಯಂತ ಪ್ರಮುಖ ರಸ್ತೆ ಜಂಕ್ಷನ್, ಸಿಗ್ನಲ್ ಲೈಟ್ ಜಂಕ್ಷನ್, ಸಾರ್ವಜನಿಕರು ಹೆಚ್ಚಾಗಿ ಸೇರುವ ಸ್ಥಳಗಳು, ವಾಣಿಜ್ಯ ಕೇಂದ್ರ ಬಸ್, ರೈಲು ನಿಲ್ದಾಣ ಸೇರಿದಂತೆ ವಿವಿಧೆಡೆ ಕಾರ್ಯ ನಿರ್ವಹಿಸುತ್ತಿರುವ ಸಿಸಿ ಕ್ಯಾಮರಾಗಳಿಂದಲೂ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ದೃಶ್ಯಾವಳಿಗಳನ್ನು ವೀಕ್ಷಿಸಿ ಮಾನಿಟರ್ ಮಾಡಲಾಗುತ್ತಿದ್ದು, ಇದೀಗ ಹೊಸದಾಗಿ ಅಳವಡಿಸುತ್ತಿರುವ ಹೈಟೆಕ್ ಕ್ಯಾಮರಾಗಳು ಸಂಶಯಾಸ್ಪದ ವ್ಯಕ್ತಿಗಳು, ವಾಹನಗಳ ಚಲನ–ವಲನಗಳ ಮೇಲೆ ನಿಗಾ ಇರಿಸಲು ಸಹಕಾರಿಯಾಗಲಿವೆ ಎಂದು ಅವರು ತಿಳಿಸಿದ್ದಾರೆ.

ಮಹಿಳಾ ಪ್ರೀಮಿಯರ್ ಲೀಗ್ ಪ್ರಾಯೋಜಕತ್ವ ಟಾಟಾ ತೆಕ್ಕೆಗೆ

ಮುಂಬೈ: ಮಾರ್ಚ್ 4 ರಂದು ಮುಂಬೈನಲ್ಲಿ ಪ್ರಾರಂಭವಾಗುವ ಮಹಿಳಾ ಪ್ರೀಮಿಯರ್ ಲೀಗ್‌ನ ಟೈಟಲ್ ಪ್ರಾಯೋಜಕತ್ವದ ಹಕ್ಕುಗಳನ್ನು ಟಾಟಾ ಗ್ರೂಪ್ ತನ್ನ ತೆಕ್ಕೆಗೆ ತೆಗೆದುಕೊಂಡಿದೆ. ಈ ಬಗ್ಗೆ ಟ್ವೀಟರ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ, ಡಬ್ಲ್ಯೂಪಿಎಲ್ ಟೈಟಲ್ ಪ್ರಾಯೋಜಕರಾಗಿ ಟಾಟಾ ಗ್ರೂಪ್‌ನ್ನು ಘೋಷಿಸಲು ನನಗೆ ಸಂತೋಷವಾಗಿದೆ. ಅವರ ಬೆಂಬಲದೊಂದಿಗೆ ಮಹಿಳಾ ಕ್ರಿಕೆಟ್‌ನ್ನು ಮುಂದಿನ ಹಂತಕ್ಕೆ ಕೊಂಡೊಯ್ಯಬಹುದು ಎಂಬ ವಿಶ್ವಾಸ ನಮಗಿದೆ ಎಂದು ಟ್ವೀಟ್ ಮಾಡಿದ್ದಾರೆ.

ಒಪ್ಪಂದದ ಹಣಕಾಸು ವಿವರ ಬಹಿರಂಗಗೊಂಡಿಲ್ಲ. ಐದು ವರ್ಷಗಳ ಹಕ್ಕುಗಳನ್ನು ಟಾಟಾ ಪಡೆದುಕೊಂಡಿದ್ದಾರೆ ಎಂದು ಬಿಸಿಸಿಐ ಮೂಲವೊಂದು ಪಿಟಿಐಗೆ ತಿಳಿಸಿದೆ.

ಮಹಿಳಾ ಪ್ರೀಮಿಯರ್ ಲೀಗ್ ನ ಮೊದಲ ಆವೃತ್ತಿಯು ಮುಂಬೈನಲ್ಲಿ ಬ್ರಬೋರ್ನ್ ಸ್ಟೇಡಿಯಂ ಮತ್ತು ಡಿವೈ ಪಾಟೀಲ್ ಸ್ಟೇಡಿಯಂನಲ್ಲಿ ನಡೆಯಲಿದೆ. ಮಾಧ್ಯಮ ಹಕ್ಕುಗಳ ಮಾರಾಟದಿಂದ ಬಿಸಿಸಿಐಗೆ 951 ಕೋಟಿ ರೂ. ಬಂದಿದೆ. ಐದು ತಂಡಗಳು 4700 ಕೋಟಿ ರೂ.ಗೆ ಮಾರಾಟವಾಗಿವೆ. ಈ ತಿಂಗಳ ಆರಂಭದಲ್ಲಿ ನಡೆದ ಹರಾಜಿನಲ್ಲಿ ಭಾರತದ ಆರಂಭಿಕ ಆಟಗಾರ್ತಿ ಸ್ಮೃತಿ ಮಂಧಾನ 3.40 ಕೋಟಿ ರೂ.ಗೆ ಖರೀದಿಸಲಾಗಿತ್ತು.

ನಾಳೆಯಿಂದ ತ್ಯಾಗರಾಜ, ಪುರಂದರದಾಸರ ಆರಾಧನೆ

ಮೈಸೂರು, ಫೆ.22– ಮೈಸೂರಿನ ಎನ್.ಆರ್.ಮೊಹಲ್ಲಾ ಸಂಗೀತ ಸಭಾ ಚಾರಿಟಬಲ್ ಟ್ರಸ್ಟ್ ವಾರ್ಷಿಕ ಸಂಗೀತೋತ್ಸವ ಹಿನ್ನೆಲೆಯಲ್ಲಿ ಫೆ24ರಿಂದ ಫೆ26ರವರೆಗೆ ಇಲ್ಲಿನ ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನದ ಆವರಣದಲ್ಲಿ ಶ್ರೀ ತ್ಯಾಗರಾಜ ಮತ್ತು ಶ್ರೀ ಪುರಂದರದಾಸರ ಆರಾಧನಾ ಸಮಾರಂಭ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎನ್‌ಎಸ್‌ಜಿ ಫೋರ್ಸ್ ಕಮಾಂಡರ್ ಬ್ರಿಗೇಡಿಯರ್ ಬಿ.ಎಂ.ಕಾರ್ಯಪ್ಪರಿಗೆ 'ರೋಟರಿ ಸೈನಿಕ್ ದೇಶ್‌ರತ್ನ' ಪ್ರಶಸ್ತಿ ಪ್ರದಾನ



ರೋಟರಿ ಮೈಸೂರು ಮಿಡ್‌ಟೌನ್ ಹಾಗೂ ಶ್ರೀಸೈನಿಕ್ ಫೌಂಡೇಶನ್ ವತಿಯಿಂದ ಎನ್‌ಎಸ್‌ಜಿ(ರಾಷ್ಟ್ರೀಯ ಭದ್ರತಾ ಪಡೆ) ಫೋರ್ಸ್ ಕಮಾಂಡರ್, ಬ್ರಿಗೇಡಿಯರ್ ಬಿ.ಎಂ.ಕಾರ್ಯಪ್ಪ (ಬಲಯಾಡ ಮುತ್ತಣ್ಣ ಕಾರ್ಯಪ್ಪ) ಅವರಿಗೆ 'ರೋಟರಿ ಸೈನಿಕ್ ದೇಶ್‌ರತ್ನ ಆವಾರ್ಡ್' ನೀಡಿ ಗೌರವಿಸಲಾಯಿತು. ನಿವೃತ್ತ ಕರ್ನಲ್ ರವಿ ಶಿರಹಟ್ಟಿ, ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್.ನವೀನ್ ಚಂದ್ರ ಹಾಗೂ ಶ್ರೀಸೈನಿಕ್ ಫೌಂಡೇಶನ್ ಸಂಸ್ಥಾಪಕ ಕೆ.ವಿ.ಭಾಸ್ಕರ್ ಮತ್ತಿತರರಿದ್ದರು.

> **ಬ್ರಿಗೇಡಿಯರ್ ಕಾರ್ಯಪ್ಪರ ಕಾರ್ಗಿಲ್ ಯುದ್ಧದ ಸ್ಮರಣೆ...**
>
> 'ರೋಟರಿ ಸೈನಿಕ್ ದೇಶ್‌ರತ್ನ ಆವಾರ್ಡ್' ಪಡೆದ ಬಳಿಕ ಮಾತನಾಡಿದ ಬ್ರಿಗೇಡಿಯರ್ ಬಿ.ಎಂ.ಕಾರ್ಯಪ್ಪ, ಕಾರ್ಗಿಲ್ ಯುದ್ಧದಲ್ಲಿ ತಾವು ಕ್ಯಾಪ್ಟನ್ ಆಗಿ ತಂಡವನ್ನು ಮುನ್ನಡೆಸಿ ವಿಜಯ ಸಾಧಿಸಿದ ಸಂದರ್ಭವನ್ನು ಸ್ಮರಿಸಿದರು. 'ಖಲುಬಾರ್ ಬೆಟ್ಟದ ಕಣಿವೆ ವಶಪಡಿಸಿಕೊಳ್ಳುವುದರಲ್ಲಿ ಭಾರತೀಯ ಸೇನೆಯು ಮೊದಲ ಎರಡು ಪ್ರಯತ್ನಗಳು ವಿಫಲವಾಗಿತ್ತು ಮೂರನೇ ಪ್ರಯತ್ನ ನನ್ನ ನೇತೃತ್ವದ ತಂಡಕ್ಕೆ ನೀಡಲಾಗಿತ್ತು. ಪುಸ್ತಕದಲ್ಲಿರುವ ಮಾದರಿಗೆ ಭಿನ್ನವಾದ ಹೋರಾಟದ ತಂತ್ರ ರೂಪಿಸಿ ಗೆಲುವನ್ನು ಪಡೆಯಲಾಗಿತ್ತು ಎಂದರು.
>
> 1999ರಲ್ಲಿನ ಕಾರ್ಗಿಲ್‌ನ ಖಲುಬಾರ್ ಬೆಟ್ಟ, ಬಟಾಲಿಕ್ ಯುದ್ಧ ಸ್ಥಳಗಳಲ್ಲಿ ಯಾವ ರೀತಿ ಆಕ್ರಮಣಗಳು ನಡೆದಿದ್ದವು. ಸಾಮಾನ್ಯ ಟ್ರ್ಯಾಕ್ ಪ್ಯಾಂಟ್ ತೊಟ್ಟು ಶಸ್ತ್ರಾಸ್ತ್ರಗಳನ್ನು ಹಿಡಿದಿದ್ದ ಪಾಕಿಸ್ತಾನ ಸೇನೆಯು ಹೇಗೆ ಕ್ರೂರತೆಯನ್ನು ಮೆರೆದಿತ್ತು ಎಂಬುದನ್ನು ವಿವರಿಸಿದರು. ಆ ಸಂದರ್ಭದಲ್ಲಿ ತೆಗೆದುಕೊಂಡ ಯುದ್ಧ ನಿರ್ಣಯಗಳು ಹೇಗೆ ಸಹಕಾರಿಯಾಯಿತು. ಸಂಕೀರ್ಣ ಪ್ರದೇಶಗಳನ್ನು ಗೆಲ್ಲುವಲ್ಲಿ ಎಂತಹ ಸಂಕಷ್ಟಗಳನ್ನು ಭಾರತೀಯ ಸೇನೆ ಎದುರಿಸಿತ್ತು ಎಂಬುದನ್ನು ವಿವರಿಸಿದರಲ್ಲದೆ ಯುದ್ಧದ ವೇಳೆ ಸಿಡಿದ ಬಾಂಬ್‌ಗಳ ಚೂರು ಇನ್ನೂ ತಮ್ಮ ತಲೆ ಹಿಂಭಾಗದಲ್ಲಿವೆ ಎಂದು ತಿಳಿಸುವ ಮೂಲಕ ಕಾರ್ಗಿಲ್ ಯುದ್ಧದ ಕ್ರೂರತೆ ವಿವರಿಸಿದರು.

ಮೈಸೂರು, ಫೆ.22(ಎಂಕೆ)– ರೋಟರಿ ಮೈಸೂರು ಮಿಡ್‌ಟೌನ್ ಹಾಗೂ ಶ್ರೀಸೈನಿಕ್ ಫೌಂಡೇಶನ್ ವತಿಯಿಂದ ಎನ್‌ಎಸ್‌ಜಿ (ರಾಷ್ಟ್ರೀಯ ಭದ್ರತಾ ಪಡೆ) ಫೋರ್ಸ್ ಕಮಾಂಡರ್, ಬ್ರಿಗೇಡಿಯರ್ ಬಿ.ಎಂ. ಕಾರ್ಯಪ್ಪ (ಬಲಯಾಡ ಮುತ್ತಣ್ಣ ಕಾರ್ಯಪ್ಪ) ಅವರಿಗೆ 'ರೋಟರಿ ಸೈನಿಕ್ ದೇಶ್‌ರತ್ನ ಆವಾರ್ಡ್' ನೀಡಿ ಗೌರವಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಆಯೋಜಿಸಿದ್ದ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ನಿವೃತ್ತ ಕರ್ನಲ್ ರವಿ ಶಿರಹಟ್ಟಿ ರೋಟರಿ ಮೈಸೂರು ಮಿಡ್‌ಟೌನ್ ಅಧ್ಯಕ್ಷ ಎಂ.ಎಸ್.ನವೀನ್ ಚಂದ್ರ ಹಾಗೂ ಶ್ರೀಸೈನಿಕ್ ಫೌಂಡೇಶನ್ ಸಂಸ್ಥಾಪಕ ಕೆ.ವಿ.ಭಾಸ್ಕರ್ ಪ್ರಶಸ್ತಿ ಪ್ರದಾನ ಮಾಡಿದರು.

ಬಳಿಕ ನಿವೃತ್ತ ಕರ್ನಲ್ ರವಿ ಶಿರಹಟ್ಟಿ ಮಾತನಾಡಿ, ಮಾಜಿ ಸೈನಿಕರು ಇತಿಹಾಸ. ಕಾರ್ಗಿಲ್ ಯುದ್ಧದ ವಿಜಯದಲ್ಲಿ ಕಾರ್ಯಪ್ಪ ಅವರ ಸಾಧನೆ ಸ್ಮರಣಾರ್ಹ. ವಿಶೇಷ ಶ್ರಮ ಮತ್ತು ಸಾಧನೆ ಮಾಡುವ ರಾಷ್ಟ್ರೀಯ ಭದ್ರತಾ ಪಡೆಯಲ್ಲಿ ಉನ್ನತ ಸ್ಥಾನದಲ್ಲಿರುವ ಅವರ ಕಾರ್ಯಕ್ಷಮತೆ ಯುವ ಸೈನಿಕರಿಗೆ ಮಾದರಿ ಎಂದರು.

ಸೇನಾ ಸಮವಸ್ತ್ರಧರಿಸಲು ಯಾವಾಗಲೂ ಉತ್ಸುಕರಾಗಿರುತ್ತೇವೆ. ಅದರಲ್ಲಿ ಎರಡು ಮಾತಿಲ್ಲ ಆದರೆ ಎಲ್ಲರಿಗೂ ಸಾಧ್ಯವಿಲ್ಲ ಎಂದ ಅವರು ಇತಿಹಾಸ ತಿಳಿದಷ್ಟೇ ಮುಂದಿನದನ್ನು ಅರಿಯುವುದಕ್ಕೆ ಸಾಧ್ಯ. ಸೈನ್ಯದಲ್ಲಿ ಸೇವೆ ಸಲ್ಲಿಸುವವರು ಎಂತಹ ಪರಿಸ್ಥಿತಿಯಲ್ಲಿದ್ದರೂ ಕರುಣೆಯಿಂದಲೇ ತ್ಯಾಗಕ್ಕೆ ಸಿದ್ಧರಾಗಬೇಕು. ವೈರುಧ್ಯಗಳ ನಡುವೆ ಜೀವಿಸುವುದರಿಂದ ಇದನ್ನು ಯಾರು ವೃತ್ತಿ ಎನ್ನುವುದಿಲ್ಲ. ದೇಶ ಸೇವೆ ಎನ್ನುತ್ತಾರೆ. ಆದ್ದರಿಂದಲೇ ನಿವೃತ್ತಿಯ ನಂತರವೂ ಹುದ್ದೆಯ ಗೌರವ ಹಾಗೆಯೇ ಉಳಿದುಕೊಳ್ಳುತ್ತದೆ ನನ್ನನ್ನು ಸಹ ಹಲವರು ನೀವೆಷ್ಟು ವರ್ಷ ಸೇನೆಯಲ್ಲಿ ಕೆಲಸ ಮಾಡಿದ್ದೀರಿ ಎಂದು ಕೇಳುತ್ತಾರೆ. ಅದಕ್ಕೆ ನಾನು ಭಾರತೀಯ ಸೇನೆಯಲ್ಲಿ ಸೇವೆ ಮಾಡಿದ್ದೇನೆ ಎನ್ನುತ್ತೇನೆ ಎಂದರು.

ಮರದ ಬೇರುಗಳು ಗಟ್ಟಿಯಾಗಿದ್ದರೆ ಮರವೂ ದೊಡ್ಡದಾಗಿ ಬೆಳೆಯಲು ಸಾಧ್ಯ. ಮರದ ಬೇರುಗಳೇ ಸಡಿಲವಾದರೆ ಮರವೇ ಹಾಳಾಗುತ್ತದೆ ಎಂದರು. ವೃತ್ತಿಯಲ್ಲಿ ಉತ್ಸಾಹ, ಸಂರಕ್ಷಣೆ ಮತ್ತು ಒಳ್ಳೆ ಉದ್ದೇಶವಿರಬೇಕು. ಮಾಡುವ ಸೇವೆಯಲ್ಲಿ ಆತ್ಮತೃಪ್ತಿ ಇಲ್ಲದಿದ್ದರೆ ಉದ್ದೇಶ ಈಡೇರುವುದಿಲ್ಲ ಎಂದು ತಿಳಿಸಿದರು. ರೋಟರಿ ಮಿಡ್‌ಟೌನ್ ಗೌರವ ಕಾರ್ಯದರ್ಶಿ ಎಸ್.ಕುಮಾರಸ್ವಾಮಿ, ಉಪಾಧ್ಯಕ್ಷ ಕೆ.ಎಲ್.ರಾಕೇಶ್ ಬಾಬು, ಸದಸ್ಯ ಎಸ್.ಅಭಿಲಾಷ್ ಮತ್ತಿತರರಿದ್ದರು.

ವಿದ್ಯಾರ್ಥಿಗಳಿಂದ ಭವ್ಯ ಸ್ವಾಗತ: ಪ್ರಶಸ್ತಿ ಪ್ರದಾನ ಕಾರ್ಯಕ್ರಮಕ್ಕೂ ಮುನ್ನ ಸಭಾಂಗಣದ ಹೊರಗಡೆ ಸಂಗೀತ ಪರಿಕರಗಳೊಂದಿಗೆ ಸಜ್ಜಾಗಿದ್ದ ಹೂಟಗಳ್ಳಿ ಕೆಹೆಚ್‌ಬಿ ಕಾಲೋನಿಯ ರೋಟರಿ ಮಿಡ್‌ಟೌನ್ ಅಕಾಡೆಮಿ ವಿದ್ಯಾರ್ಥಿಗಳು ಬ್ರಿಗೇಡಿಯರ್ ಬಿ.ಎಂ.ಕಾರ್ಯಪ್ಪ ಅವರಿಗೆ ಭವ್ಯ ಸ್ವಾಗತ ಕೋರಿದರು. ಎಲ್ಲರೂ ಒಮ್ಮೆಗೆ ಸೆಲ್ಯೂಟ್ ಮಾಡಿ ಗೌರವ ಸೂಚಿಸಿದರು.

ತ್ರಿನೇತ್ರ ಸರ್ಕಲ್ ಮುಖ್ಯರಸ್ತೆ ಕಾಮಗಾರಿ ಪರಿಶೀಲಿಸಿದ ಶಾಸಕ ನಾಗೇಂದ್ರ

● ಗುಣಮಟ್ಟದ ಕಾಮಗಾರಿ ಖಾತರಿ ● ವಾರದಲ್ಲಿ ರಸ್ತೆ ಸಂಚಾರಕ್ಕೆ ಮುಕ್ತ

ಮೈಸೂರು, ಫೆ.22(ಜಿಎ)–ಮೈಸೂರಿನ ಗೋಕುಲಂ 3ನೇ ಹಂತದ ತ್ರಿನೇತ್ರ ಸರ್ಕಲ್‌ನಿಂದ ವಿಜಯನಗರ 2ನೇ ಹಂತದ ವಾಟರ್ ಟ್ಯಾಂಕ್‌ವರೆಗೆ 700 ಮೀಟರ್ ಉದ್ದದ ರಸ್ತೆ ಕಾಮಗಾರಿ ಅತ್ಯಂತ ಗುಣಮಟ್ಟದಿಂದ ಕೂಡಿದೆ ಎಂದು ಶಾಸಕ ಎಲ್.ನಾಗೇಂದ್ರ ತಿಳಿಸಿದರು.



ಕಾಮಗಾರಿ ಕಳಪೆ ಗುಣಮಟ್ಟದಿಂದ ಕೂಡಿದೆ ಎಂದು ಪಾಲಿಕೆ ಸದಸ್ಯ ಕೆ.ವಿ. ಶ್ರೀಧರ್ ನಿನ್ನೆ(ಫೆ21) ಆರೋಪಿಸಿದ ಹಿನ್ನೆಲೆಯಲ್ಲಿ ಶಾಸಕ ನಾಗೇಂದ್ರ ಇಂದು ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ನಂತರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಅಕ್ಕ ಬುಕ್ಕ ಮತ್ತು ಈ ರಸ್ತೆ ಕಾಮಗಾರಿ ಸುಮಾರು 8.5 ಕೋಟಿ ರೂ. ವೆಚ್ಚದಲ್ಲಿ ಗುಣಮಟ್ಟದಿಂದ ನಡೆಯುತ್ತಿದೆ. ಕಾಮಗಾರಿ ಪೂರ್ಣಗೊಂಡ ನಂತರ ಪಾಲಿಕೆ ಸದಸ್ಯ ಕೆ.ವಿ.ಶ್ರೀಧರ್ ಅಥವಾ ಅವರಿಗೆ ತಿಳಿದಿರುವ ಯಾರಾದರೂ ಇಂಜಿನಿಯರ್ ಅನ್ನು ಕರೆದುಕೊಂಡು ಬಂದು ಪರಿಶೀಲಿಸಬಹುದಾಗಿದೆ ಎಂದು ಪಾಲಿಕೆ ಸದಸ್ಯರ ಆಹ್ವಾನಿಸಿದರು.

ಈ ರೀತಿ ಆರೋಪ ಇದೇ ಮೊದಲಲ್ಲ, ಮೊದಲು ಕೆಲಸ ಆರಂಭವಾಗಿಲ್ಲ ಎಂದು ಪ್ರತಿಭಟನೆ ಮಾಡಿಸಿದ್ದರು. ನಂತರ ಮುಡಾ ಅಧಿಕಾರಿಗಳ ವಿರುದ್ಧ ಜೀಪ್ ಮೇಲೆ ಕುಳಿತು ಅವರೇ ಪ್ರತಿಭಟನೆ ಮಾಡಿದ್ದರು. ಈಗ ಡಾಂಬರೀಕರಣ ಆರಂಭದಲ್ಲಿಯೇ ಬಂದು ಪರಿಶೀಲಿಸಿ, ಕಳಪೆ ಗುಣಮಟ್ಟ ಎಂದು ಆರೋಪಿಸಿದ್ದಾರೆ. ರಸ್ತೆ ಕಾಮಗಾರಿ ಪೂರ್ಣಗೊಂಡ ನಂತರ ಯಾರು ಬೇಕಿದ್ದರೂ ಪರಿಶೀಲಿಸಿ. ಈ ಕೆಲಸವನ್ನು ಪಾಲಿಕೆ ಸದಸ್ಯರು ಮಾಡಬೇಕು. ನಾನು ಸಹ ಮೂರು ಬಾರಿ ಪಾಲಿಕೆ ಸದಸ್ಯನಾಗಿದ್ದೆ ಆ ಸಂದರ್ಭದಲ್ಲಿ ಯಾವ ಶಾಸಕರು 100 ರೂ. ಅನುದಾನ ನೀಡಲಿಲ್ಲ. ಪಾಲಿಕೆ ವತಿಯಿಂದ ಈ ಕಾಮಗಾರಿ ಮಾಡಲು ಸಾಧ್ಯವಿಲ್ಲ ಎಂದು ನಾನೇ ಜವಾಬ್ದಾರಿ ತೆಗೆದುಕೊಂಡು ಮುಡಾ ವತಿಯಿಂದ ಕ್ಷೇತ್ರದ ಅಭಿವೃದ್ಧಿಗೆ ಮುಂದಾಗಿದ್ದೇನೆ ಎಂದರು.

ಪಾಲಿಕೆ ಸದಸ್ಯರಾದ ಶ್ರೀಧರ್ ಸಾರ್ವಜನಿಕ ಹಿತದೃಷ್ಟಿಯಿಂದ ನಿನ್ನೆ ಕಾಮಗಾರಿ ಆರಂಭದಲ್ಲಿಯೇ ಬಂದು ಪರಿಶೀಲಿಸಿದ್ದಾರೆ. ಆದರೆ, ನನಗೆ ಅವರಿಗಿಂತ ಎರಡು ಪಟ್ಟು ಸಾರ್ವಜನಿಕರ ಮೇಲೆ ಕಾಳಜಿ ಇದೆ. ಅವರು ಆರೋಪ ಮಾಡಿರುವ ವರದಿಯನ್ನು ಪತ್ರಿಕೆಯಲ್ಲಿ ಗಮನಿಸಿ, ತಕ್ಷಣ ಸ್ಥಳಕ್ಕೆ ಭೇಟಿ ನೀಡಿದ್ದೇನೆ. ಆದರೆ, ಇಲ್ಲಿ ಯಾವುದೇ ಕಳಪೆ ಗುಣಮಟ್ಟ ಕಾಮಗಾರಿ ನಡೆಯುತ್ತಿಲ್ಲ. ಅಧಿಕಾರಿಗಳು ಸ್ಥಳದಲ್ಲಿಯೇ ಇದ್ದು, ಕಾಮಗಾರಿ ಪ್ರಗತಿಯನ್ನು ನೋಡಿಕೊಳ್ಳುತ್ತಿದ್ದಾರೆ ಎಂದರು.

75ಎಂಎಂ ರಸ್ತೆ ಕಾಮಗಾರಿ ನಡೆಯುತ್ತಿದೆ ಸದ್ಯ ಕಾಮಗಾರಿ ಪ್ರಗತಿಯಲ್ಲಿದೆ. ಕೆಳಭಾಗದಲ್ಲಿ 50ಎಂಎಂ ಭೀಮ್ ಹಾಕಿದ್ದು, ನಂತರ ಅದರ ಮೇಲೆ 25 ಎಂಎಂ ಎಸ್ಟಿಬಿಸಿ ಹಾಕಲಾಗುತ್ತಿದೆ. ಭೀಮ್ 50 ಎಂಎಂ ಇರಬೇಕು ಇಂದು ನಾನು ಖುದ್ದು ಪರಿಶೀಲಿಸಿ ನೋಡಿದರೆ, 55ಎಂಎಂ ಇದೆ. ಈಗಾಗಲೇ ಸಾರ್ವಜನಿಕರಿಂದ ಪ್ರಶಂಸೆ ಕೇಳಿಬರುತ್ತಿವೆ. ಒಂದು ವಾರದಲ್ಲಿ ಸಾರ್ವಜನಿಕರ ಉಪಯೋಗಕ್ಕೆ ರಸ್ತೆಮುಕ್ತವಾಗಲಿದೆ ಎಂದು ಭರವಸೆ ನೀಡಿದರು.

ರಾಜ್ಯ ಸರ್ಕಾರದ ಹೆಚ್ಚುವರಿ ವಕೀಲ ವಿ. ಶ್ರೀನಿಧಿ ಹೃದಯಾಘಾತದಿಂದ ನಿಧನ

ಬೆಂಗಳೂರು: ಕರ್ನಾಟಕ ಹೈಕೋರ್ಟ್‌ನಲ್ಲಿ ರಾಜ್ಯ ಸರ್ಕಾರದ ಹೆಚ್ಚುವರಿ ವಕೀಲರಾಗಿದ್ದ ವಿ ಶ್ರೀನಿಧಿ ಅವರು ಮಂಗಳವಾರ ನಿಧನರಾಗಿದ್ದಾರೆ. ಬೆಂಗಳೂರಿನ ಮಲ್ಲೇಶ್ವರದ ಅಪೋಲೋ ಆಸ್ಪತ್ರೆಯಲ್ಲಿ ಮಧ್ಯಾಹ್ನ 2.25ಕ್ಕೆ ಹೃದಯಾಘಾತದಿಂದ ನಿಧನ ಹೊಂದಿದ್ದಾರೆಂದು ತಿಳಿದುಬಂದಿದೆ. ವಿ.ಶ್ರೀನಿಧಿ ಅವರಿಗೆ 46 ವರ್ಷ ವಯಸ್ಸಾಗಿತ್ತು. ಶ್ರೀನಿಧಿ ಅವರು ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ.



ಹಿರಿಯೂರು ತಾಲೂಕಿನ ಐಮಂಗಲ ಹೋಬಳಿಯ ತಾಳವಟ್ಟಿ ಗ್ರಾಮದ ಶ್ರೀನಿಧಿ ಕಳೆದ ಎಂಟು ವರ್ಷಗಳಿಂದ ರಾಜ್ಯ ಸರ್ಕಾರದ ಪರ ಮತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಪರ ವಕೀಲರಾಗಿ ಮಹತ್ವದ ಪ್ರಕರಣಗಳನ್ನು ಸಮರ್ಥವಾಗಿ ನಿಭಾಯಿಸಿದ್ದರು.

24 ಮನೆ ತೆಲುಗುಶೆಟ್ಟರ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ

ಮೈಸೂರು, ಫೆ. 22– ಮೈಸೂರಿನ ಸರಸ್ವತಿಪುರಂನಲ್ಲಿರುವ 24 ಮನೆ ತೆಲುಗುಶೆಟ್ಟರ ಜನಾಂಗದ ವಿದ್ಯಾರ್ಥಿ ನಿಲಯದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಪಡೆದ ಜನಾಂಗದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿದ್ದ ಬಿಜೆಪಿ ರಾಷ್ಟ್ರೀಯ ಪರಿಷತ್ ಸದಸ್ಯ ಬೂದಬಾಳು ವೆಂಕಟಸ್ವಾಮಿ ಮಾತನಾಡಿದರು.



ಈ ವೇಳೆ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ ರಾಜ್ಯಸಭಾ ಸದಸ್ಯ ಜಿ.ಸಿ. ಚಂದ್ರಶೇಖರ್, ಶಾಸಕ ಎಲ್. ನಾಗೇಂದ್ರ, ಜಿಪಂ ಸದಸ್ಯ ಚಿಕ್ಕರಂಗನಾಯಕ, ಶಿವಮೊಗ್ಗ ಮಾಜಿ ಮುಡಾ ಅಧ್ಯಕ್ಷ ವಿ. ರಾಜು, ಮೈಸ್ಕಾಂ ಮಾಜಿ ನಿರ್ದೇಶಕ ಆರ್. ಮೋಹನ್, ತುಮಕೂರು ತಾಲೂಕು ತಹಸೀಲ್ದಾರ್ ಅಶ್ವಿನಿ, ಜಿಪಂ ಮಾಜಿ ಸದಸ್ಯ ಎನ್. ಮಹದೇವು, ಜನಾಂಗದ ಮುಖಂಡರಾದ ಇಂದ್ರಶೆಟ್ಟಿ, ಮಂಜುಶೆಟ್ಟಿ, ಬಿಳಿಕೆರೆ ಕೃಷ್ಣಶೆಟ್ಟಿ, ಸಾಗರೆ ಎಸ್.ವಿ. ವಸಂತಕುಮಾರ್, ರಾಮಶೆಟ್ಟಿ, ಪ್ರಕಾಸ್, ಗೋವಿಂದರಾಜುಬಾಬು, ಸಿದ್ದಪ್ಪಾಜಿಶೆಟ್ಟಿ, ನಾಗಶೆಟ್ಟಿ, ಜೆ. ರಾಜು, ಹೆಬ್ಬಲಗುಪ್ಪೆ ಶಿವಪ್ಪಶೆಟ್ಟಿ, ಸುಬ್ರಹ್ಮಣ್ಯ, ಮಂಜುನಾಥ್, ಸಂಪತ್ ಕುಮಾರ್, ಮಹದೇವಶೆಟ್ಟಿ ಸೇರಿದಂತೆ ಇತರ ಮುಖಂಡರು ಹಾಜರಿದ್ದರು.

ಒಂದನೇ ತರಗತಿ ಪ್ರವೇಶಕ್ಕೆ ಕನಿಷ್ಠ 6 ವರ್ಷ ನಿಗದಿಗೆ ಕೇಂದ್ರ ಸೂಚನೆ

ನವದೆಹಲಿ: ಒಂದನೇ ತರಗತಿ ಪ್ರವೇಶಾತಿಗೆ ಮಕ್ಕಳ ಕನಿಷ್ಠ ವಯೋಮಿತಿಯನ್ನು 6 ವರ್ಷಕ್ಕೆ ನಿಗದಿ ಮಾಡುವಂತೆ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೇಂದ್ರದ ಶಿಕ್ಷಣ ಸಚಿವಾಲಯ ನಿರ್ದೇಶನ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ಪ್ರಕಾರ, ಎಲ್ಲ ಮಕ್ಕಳ ಆರಂಭಿಕ ಶಿಕ್ಷಣದ 5 ವರ್ಷದ(3ರಿಂದ 8 ವರ್ಷದವರೆಗೆ) ಕಲಿಕೆಯಲ್ಲಿ 3 ವರ್ಷ ಪ್ರೀಸ್ಕೂಲ್ ಶಿಕ್ಷಣ ಮತ್ತು 1 ಹಾಗೂ 2ನೇ ತರಗತಿಯ ವ್ಯಾಸಂಗ ಇರುತ್ತದೆ.

ಪ್ರೀಸ್ಕೂಲ್‌ನಿಂದ 2ನೇ ತರಗತಿಯವರೆಗಿನ ಮಕ್ಕಳ ತಡೆರಹಿತ ಕಲಿಕೆ ಮತ್ತು ಬೆಳವಣಿಗೆಯನ್ನು ನೀತಿಯು ಉತ್ತೇಜಿಸುತ್ತದೆ. ಅಂಗನವಾಡಿಗಳು ಅಥವಾ ಸರ್ಕಾರಿ, ಸರ್ಕಾರಿ–ಅನುದಾನಿತ, ಖಾಸಗಿ ಮತ್ತು ಎನ್‌ಜಿಒ ಶಾಲೆಗಳಲ್ಲಿ ಓದುತ್ತಿರುವ ಎಲ್ಲ ಮಕ್ಕಳಿಗೆ ಮೂರು ವರ್ಷಗಳ ಗುಣಮಟ್ಟದ ಪ್ರಿಸ್ಕೂಲ್ ಶಿಕ್ಷಣವನ್ನು ಖಾತ್ರಿಪಡಿಸುವ ಮೂಲಕ ಇದನ್ನು ಅಳವಡಿಸಿಕೊಳ್ಳಬೇಕು ಎಂದು ಶಿಕ್ಷಣ ಸಚಿವಾಲಯದ ಅಧಿಕಾರಿ ಹೇಳಿದ್ದಾರೆ.

ಹೊಸ ಶಿಕ್ಷಣ ನೀತಿಯ ಜೊತೆ ವಯಸ್ಸನ್ನು ಹೊಂದಿಸಲು ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ವಯಸ್ಸು ಆರು ವರ್ಷ ಅಥವಾ ಅದಕ್ಕಿಂತ ಮೇಲ್ಪಟ್ಟಿರಬೇಕು ಎಂಬ ನಿಯಮವನ್ನು ಜಾರಿ ಮಾಡಲು ಸಚಿವಾಲಯವು ರಾಜ್ಯ ಸರ್ಕಾರಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶಿಸಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟ: ದ.ಕನ್ನಡ ಚಾಂಪಿಯನ್



ಮೈಸೂರು, ಫೆ.22(ಜಿಎ)–ಮೈಸೂರಿನಲ್ಲಿ ನಡೆದ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದ ಸಮಗ್ರ ಪ್ರಶಸ್ತಿಯನ್ನು ದಕ್ಷಿಣ ಕನ್ನಡ ಜಿಲ್ಲೆ ಮುಡಿಗೇರಿಸಿಕೊಂಡಿದೆ.

ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬುಧವಾರ ಸಮಾರೋಪಗೊಂಡ ನಾಲ್ಕು ದಿನಗಳ ಕ್ರೀಡಾಕೂಟದಲ್ಲಿ 14 ವರ್ಷ ಒಳಪಟ್ಟ ಬಾಲಕ, ಬಾಲಕಿಯರ ವಿಭಾಗ ಸೇರಿದಂತೆ ನಾನಾ ಸ್ಪರ್ಧೆಗಳಲ್ಲಿ 7 ಚಿನ್ನ, 5 ಬೆಳ್ಳಿ, 2 ಕಂಚು ಪಡೆದು ಒಟ್ಟು 62 ಅಂಕ ಪಡೆಯುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯು ಸಮಗ್ರ ಪ್ರಶಸ್ತಿಗೆ ಭಾಜನವಾಯಿತು.

17 ವರ್ಷ ಒಳಪಟ್ಟವರ ಬಾಲಕ, ಬಾಲಕಿಯರ ವಿಭಾಗದಲ್ಲಿಯೂ ಇದೇ ಪಾರಮ್ಯ ಮೆರೆದ ದಕ್ಷಿಣ ಕನ್ನಡ ಜಿಲ್ಲೆಯ ಕ್ರೀಡಾಪಟುಗಳು ಒಟ್ಟು 8 ಚಿನ್ನ, 5 ಬೆಳ್ಳಿ, 3 ಕಂಚು ಪಡೆದು 63 ಅಂಕ ಗಳಿಸಿ ಸಮಗ್ರ ಪ್ರಶಸ್ತಿ ಪಡೆದು ಕ್ರೀಡಕೂಟದಲ್ಲಿ ಪಾರಮ್ಯ ಮೆರೆದರು. 14 ವರ್ಷ ಒಳಪಟ್ಟವರ ಬಾಲಕರ ವಿಭಾಗದಲ್ಲಿ ಕೋಲಾರ ಜಿಲ್ಲೆಯ ಅಣ್ಣಪ್ಪ ಎತ್ತರ ಜಿಗಿತ, ಗುಂಡು ಎಸೆತದಲ್ಲಿ ಬೆಳ್ಳಿ, ಡಿಸ್ಕಸ್ ಥ್ರೋನಲ್ಲಿ ಚಿನ್ನ ಪಡೆದು 11 ಅಂಕ ಗಳಿಸಿ ವೈಯಕ್ತಿಕ ಚಾಂಪಿಯನ್ ಪಟ್ಟ ಪಡೆದುಕೊಂಡರೆ, ಬಾಲಕಿಯರ ವಿಭಾಗದಲ್ಲಿ ಚೇತನಾ ಭಾಸ್ಕರ್(ಬೆಂಗಳೂರು ಉತ್ತರ) 100 ಮೀ., 200 ಮೀ. ಓಟ, ಎತ್ತರ ಜಿಗಿತದಲ್ಲಿ ಚಿನ್ನ ಪಡೆಯುವ ಮೂಲಕ 15 ಅಂಕ ಗಳಿಸಿ ಚಾಂಪಿಯನ್ ಆಗಿ ಮಿಂಚಿದರು. 17 ವರ್ಷ ಒಳಪಟ್ಟವರ ಬಾಲಕರ ವಿಭಾಗದಲ್ಲಿ ಅಸ್ಮಿತ್ ಎ ಸಾಲಿಯಾನ 100 ಮೀ., 200 ಮೀ. ಓಟದಲ್ಲಿ ಚಿನ್ನ ಪಡೆದು 10 ಅಂಕ ಪಡೆದ ವೈಯಕ್ತಿಕ ಚಾಂಪಿಯನ್ ಆದರೆ,

ಬಾಲಕಿಯರ ವಿಭಾಗದಲ್ಲಿ ಪ್ರಣತಿ(ವಿದ್ಯಾನಗರ ಬೆಂಗಳೂರು, 1500 ಮೀ., 3000 ಮೀ ಓಟದಲ್ಲಿ ಚಿನ್ನ) 10 ಅಂಕ, ಶಿಲ್ಪ ಹೊಸಮನಿ (ಧಾರವಾಡ ಜಿಲ್ಲೆ, 400 ಮೀ., 800 ಮೀ. ಓಟದಲ್ಲಿ ಚಿನ್ನ)10 ಅಂಕ ಪಡೆದುಕೊಳ್ಳುವ ಮೂಲಕ ಇಬ್ಬರು ಸಮ ಅಂಕಗಳನ್ನು ಮುಖಾಂತರ ವೈಯಕ್ತಿಕ ಪ್ರಶಸ್ತಿಯನ್ನು ಹಂಚಿಕೊಂಡರು.

ಕಾರ್ಯಕ್ರಮದಲ್ಲಿ ಡಿಡಿಪಿಐ ರಾಮಚಂದ್ರರಾಜೇ ಅರಸ್, ಬಿಇಓ ಉದಯ್ ಕುಮಾರ್, ಉತ್ತರ ವಲಯ ಬಿಇಓ ಕೃಷ್ಣ, ಜಿಲ್ಲಾ ದೈಹಿಕ ಶಿಕ್ಷಣ ಅಧಿಕಾರಿ ಎಸ್. ಸಿದ್ದರಾಜು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ನಡೆದ ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ವಿಭಾಗ) ಪಾಲ್ಗೊಂಡ ಕ್ರೀಡಾಪಟುಗಳು, ತೀರ್ಪುಗಾರರು, ಸಂಘಟಕರು ಸೇರಿದಂತೆ ಪ್ರತಿದಿನ ಸುಮಾರು 5000 ಮಂದಿಗೆ ಮೂರು ದಿನಗಳ ಕಾಲ ಮಧ್ಯಾಹ್ನದ ಭೋಜನದ ವ್ಯವಸ್ಥೆಯನ್ನು ಕಲ್ಪಿಸಿದ ಇಸ್ಕಾನ್ ಸಂಸ್ಥೆಯ ಪ್ರತಿನಿಧಿ ವಿಷ್ಣು ಪ್ರಭು ಹಾಗೂ ಸಮಾಜ ಸೇವಕಿ ಶಾಂತರಾಮಕೃಷ್ಣ ಅವರನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಜಿಲ್ಲಾಡಳಿತದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಬಿಇಓಗಳಾದ ಮಲ್ಲೇಶ್ವರಿ, ಉದಯಕುಮಾರ್, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಸಿದ್ದರಾಜು, ಜಿಲ್ಲಾ ದೈಹಿಕ ಶಿಕ್ಷಕರ ಸಂಘದ ಅಧ್ಯಕ್ಷ ನಾಗೇಶ್, ಪದಾಧಿಕಾರಿಗಳಾದ ಸುರೇಶ್, ಶೋಭ ಕುಮಾರಿ,ಅಕ್ಕಮ್ಮ, ರಾಜೇಂದ್ರ, ಸಂಘಟಕರಾದ ಮಂಜುನಾಥ್ ಹಾಗೂ ಇಲಾಖೆಯ ಇತರೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

ಚಾಮರಾಜ ಒಡೆಯರ್ ಜನ್ಮ ದಿನ ಆಚರಣೆ



ಮೈಸೂರು, ಫೆ.22(ಎಂಟಿವೈ)– ಮೈಸೂರು ಸಂಸ್ಥಾನದ ಮಹಾರಾಜ ಚಾಮರಾಜ ಒಡೆಯರ್ ಅವರ 160ನೇ ಜನ್ಮ ದಿನವನ್ನು ಕರ್ನಾಟಕ ರಾಜ್ಯ ಒಕ್ಕಲಿಗರ ವಿಕಾಸ ವೇದಿಕೆ ವತಿಯಿಂದ ಆಚರಿಸಿ, ಗೌರವ ಸಮರ್ಪಿಸಲಾಯಿತು.

ಮೈಸೂರು ಅರಮನೆ ಮುಂಭಾಗದಲ್ಲಿರುವ ಚಾಮರಾಜ ವೃತ್ತದಲ್ಲಿರುವ ಚಾಮರಾಜ ಒಡೆಯರ್ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿ, ಮೈಸೂರಿನ ಏಳಿಗೆಗೆ ಹಲವು ಯೋಜನೆಗಳನ್ನು ಅನುಷ್ಠಾನಕ್ಕೆ ತಂದಿರುವ ಚಾಮರಾಜ ಒಡೆಯರ್ ಅವರಿಗೆ ನಾಡಿನ ಜನತೆ ಪರವಾಗಿ ನಮನ ಸಲ್ಲಿಸಲಾಯಿತು.

ಕಾರ್ಯಕ್ರಮದಲ್ಲಿ ಒಕ್ಕಲಿಗರ ವಿಕಾಸ ವೇದಿಕೆ ಅಧ್ಯಕ್ಷೆ ಹೆಚ್.ಎಲ್. ಯಮುನಾ ಮಾತನಾಡಿ, ಮೈಸೂರು ಸಂಸ್ಥಾನದಲ್ಲಿ ಆಡಳಿತ ನಡೆಸಿದ 10ನೇ ಚಾಮರಾಜ ಒಡೆಯರ್ ಅವರ ಜನ್ಮದಿನವನ್ನು ಪ್ರತಿ ವರ್ಷವೂ ಆಚರಿಸಿಕೊಂಡು ಬರಲಾಗುತ್ತಿದೆ. ಇಂದು 160 ವರ್ಷದ ಜನ್ಮ ದಿನವನ್ನು ಆಚರಿಸಿ, ಗೌರವಿಸಲಾಗಿದೆ. ಮೈಸೂರು ಸಂಸ್ಥಾನದ ಅಭಿವೃದ್ಧಿಗೆ ಚಾಮರಾಜ ಒಡೆಯರ್ ಅವರು ಅಪಾರ ಕೊಡುಗೆ ನೀಡಿದ್ದಾರೆ ಇವರ ಕಾಲದಲ್ಲಿಯೇ ಮೈಸೂರಿಗೆ ರೈಲ್ವೆ, ಮೃಗಾಲಯ ಸೇರಿದಂತೆ ಇನ್ನಿತರ ಯೋಜನೆಗಳನ್ನು ಅನುಷ್ಠಾನಗೊಂಡವು. 31ನೇ ವಯಸ್ಸಿಗೆ ಕಾಲವಾದರೂ, ಸಾಕಷ್ಟು ಕೆಲಸವನ್ನು ಆರಂಭಿಸಿದ್ದರು. ಅವರು ಕಾಲವಾದ ಬಳಿಕ ಅವರ ಪತ್ನಿ ಕೆಂಪನಂಜಮ್ಮಣ್ಣಿ ಅವರು, ಅವರ ಮಹತ್ಕಾರ್ಯ ಮುಂದುವರೆಸಿದರು. ಬಳಿಕ ಚಾಮರಾಜ ಒಡೆಯರ್ ಅವರ ಪುತ್ರ ನಾಲ್ವಡಿ ಕೃಷ್ಣರಾಜ ಒಡೆಯರ್ ಸಾಕಷ್ಟು ಜನಪರ ಕೆಲಸ ಮಾಡಿದರು ಎಂದು ವಿವರಿಸಿದರು. ಇದೇ ವೇಳೆ ಎಲ್‌ಐಸಿ ವೃತ್ತದಲ್ಲಿ ಚಾಮರಾಜ ಒಡೆಯರ್ ಅವರ ಪತ್ನಿ ಕೆಂಪನಂಜಮ್ಮಣ್ಣಿ ಅವರ ಪ್ರತಿಮೆ ಸ್ಥಾಪನೆಗೆ ಹೋರಾಟ ಮಾಡುತ್ತಿರುವ ಪಾರಂಪರಿಕ ತಜ್ಞ ಪ್ರೊ. ರಂಗರಾಜು ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ರಾಜ್ಯಾಧ್ಯಕ್ಷ ಕೆ.ಎಸ್.ಶಿವರಾಮು, ಕಸಾಪ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ಮುಖಂಡರಾದ ಹೆಚ್.ಕೆ.ರಾಮು, ಪಾಲಿಕೆ ಮಾಜಿ ಸದಸ್ಯ ಸುನೀಲ್, ಒಕ್ಕಲಿಗರ ವಿಕಾಸ ವೇದಿಕೆಯ ಪ್ರಧಾನ ಕಾರ್ಯದರ್ಶಿ ಕೆ.ಆರ್.ವಿಲ್ ಶಿವಣ್ಣ, ಸದಸ್ಯ ಎಂ.ಮಧುಸೂದನ್, ವಿವಿಧ ಸಂಘಟನೆಗಳ ಮುಖಂಡರಾದ ರವಿ, ದ್ಯಾವಪ್ಪನಾಯಕ, ಎಂ.ಚಂದ್ರಶೇಖರ್, ಲೋಕೇಶ್‌ಕುಮಾರ್ ಮಾದಾಪುರ, ಸೋಸಲೆ ಸಿದ್ದರಾಜು ಇನ್ನಿತರರಿದ್ದರು.

ಪೊನ್ನಂಪೇಟೆ ಬಳಿ ಹುಲಿ ಪ್ರತ್ಯಕ್ಷ

ಮಡಿಕೇರಿ, ಫೆ.22– ಪೊನ್ನಂಪೇಟೆ ವ್ಯಾಪ್ತಿಯ ಕಾಫಿ ತೋಟವೊಂದರಲ್ಲಿ ಹುಲಿ ಪ್ರತ್ಯಕ್ಷವಾಗಿದ್ದು, ಮತ್ತೆ ಗ್ರಾಮಸ್ಥರ ನಿದ್ದೆಗೆಡಿಸಿದೆ. ಪೊನ್ನಂಪೇಟೆ ತಾಲೂಕಿನ ಕಿರುಗೂರು ಮುಖ್ಯ ರಸ್ತೆಯ ಶಾಲೆ ಸಮೀಪವಿರುವ ಕೊರಕುಟ್ಟಿರ ರಾಜಪ್ಪ



ಎಂಬುವರ ತೋಟದಲ್ಲಿ ಸಂಜೆ 5 ಗಂಟೆ ವೇಳೆ ಹುಲಿ ಕಂಡು ಬಂದಿದೆ. ತೋಟದಿಂದ ಕಾರ್ಮಿಕರು ತೆರಳಿದ ಬಳಿಕ ರಾಜಪ್ಪ ಅವರ ಪುತ್ರ ಸವಿ ಎಂಬುವರು ತೋಟದಿಂದ ತೆರಳುತ್ತಿದ್ದಾಗ ಬೃಹತ್ ಗಾತ್ರದ ಹುಲಿ ಕಂಡು ಬಂದಿದೆ. ಈ ಕುರಿತು ಅವರು ಪೊನ್ನಂಪೇಟೆ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರು ಮತ್ತು ಅರಣ್ಯಾಧಿಕಾರಿಗಳು ಹಾಗೂ ಸಿಬ್ಬಂದಿ ಹುಲಿ ಕಂಡು ಬಂದ ಸ್ಥಳದಲ್ಲಿ ಪರಿಶೀಲನೆ ನಡೆಸಿದರು. ಶಸ್ತ್ರಸಜ್ಜಿತ ಅರಣ್ಯ ಸಿಬ್ಬಂದಿಗಳ ಒಂದು ತಂಡ ಸ್ಥಳದಲ್ಲೇ ಬೀಡು ಬಿಟ್ಟಿದ್ದು, ಸಾರ್ವಜನಿಕರು ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದೆ.

ಕೆಲ ದಿನಗಳ ಹಿಂದೆ ಕುಟ್ಟ, ಕೆ.ಬಾಡಗ, ಚೂರಿಕಾಡು ವ್ಯಾಪ್ತಿಯಲ್ಲಿ ಹುಲಿ ದಾಳಿಗೆ ಸಿಲುಕಿ ಇಬ್ಬರು ಸ್ಥಳದಲ್ಲೇ ಮೃತಪಟ್ಟಿದ್ದರು. ಈ ಹಿನ್ನೆಲೆಯಲ್ಲಿ ಕೂಂಬಿಂಗ್ ನಡೆಸಿದ ಅರಣ್ಯ ಇಲಾಖೆ ಒಂದು ಹೆಣ್ಣು ಹುಲಿಯನ್ನು ಸೆರೆ ಹಿಡಿದಿದ್ದರು. ಮಾತ್ರವಲ್ಲದೇ ಈ ಭಾಗದಲ್ಲಿ ಸಂಚರಿಸುತ್ತಿರುವ 2 ಬೇರೆ ಹುಲಿಗಳ ಸೆರೆಗೂ 4 ದಿನಗಳ ಕಾಲ ಕೂಂಬಿಂಗ್ ನಡೆಸಲಾಗಿತ್ತು. ಆದರೆ ಯಾವುದೇ ಹುಲಿಗಳು ಪತ್ತೆಯಾಗದ ಕಾರಣ ಎಲ್ಲಾ ಹುಲಿಗಳು ಕಾಡಿಗೆ ಮರಳಿವೆ ಎಂದು ಹೇಳಿ ಕೂಂಬಿಂಗ್ ಕಾರ್ಯಾಚರಣೆಯನ್ನು ಸ್ಥಗಿತ ಮಾಡಲಾಗಿತ್ತು. ಇದೀಗ ಮತ್ತೆ ಹುಲಿ ಪ್ರತ್ಯಕ್ಷವಾಗಿರುವುದು ಗ್ರಾಮಸ್ಥರ ಸಹಿತ ಅರಣ್ಯ ಇಲಾಖೆಗೂ ನುಂಗಲಾರದ ತುತ್ತಾಗಿ ಪರಿಣಮಿಸಿದೆ.

ಪ್ರತ್ಯೇಕ ಪ್ರಕರಣ: ವಿದ್ಯುತ್ ಸ್ಪರ್ಶದಿಂದ ಇಬ್ಬರು ಕಾರ್ಮಿಕರ ಸಾವು

ಗೋಣಿಕೊಪ್ಪ/ಮಡಿಕೇರಿ, ಫೆ.22– ಪ್ರತ್ಯೇಕ ಪ್ರಕರಣಗಳಲ್ಲಿ ವಿದ್ಯುತ್ ತಂತಿಗೆ ಅಲ್ಯುಮಿನಿಯಂ ಏಣಿ ಸ್ಪರ್ಶಗೊಂಡು ಒಂದೇ ದಿನ ಅಸ್ಸಾಂ ಮೂಲದ ಇಬ್ಬರು ಕಾರ್ಮಿಕರು ಮೃತಪಟ್ಟಿರುವ ಘಟನೆ ಶ್ರೀಮಂಗಲ ಹಾಗೂ ಹುದಿಕೇರಿ ಗ್ರಾಮಗಳಲ್ಲಿ ನಡೆದಿದೆ.

ಶ್ರೀಮಂಗಲ ಹೋಬಳಿಯ ನಾಲ್ಕೇರಿ ಗ್ರಾಮದಲ್ಲಿ ಅಸ್ಸಾಂ ಮೂಲದ ಕಾರ್ಮಿಕ ಅಬ್ರುದ್ದೀನ್(31) ಹಾಗೂ ಹುದಿಕೇರಿ ಹೋಬಳಿಯ ಹೈಸೊಡ್ಲೂರು ಗ್ರಾಮದಲ್ಲಿ ಅಸ್ಸಾಂ ಮೂಲದ ಕಾರ್ಮಿಕ ಇಸ್ಮಾಯಿಲ್ ಹುಸೇನ್ ಮೃತ ದುರ್ದೈವಿಗಳಾಗಿದ್ದಾರೆ.

ನಾಲ್ಕೇರಿ ಗ್ರಾಮದ ಸ್ಥಳೀಯ ಬೆಳೆಗಾರರ ತೋಟವೊಂದರಲ್ಲಿ ಬೆಳಗ್ಗೆ 8.30ರ ವೇಳೆಗೆ ಕರಿಮೆಣಸು ಕೊಯ್ಯುತ್ತಿದ್ದ ಸಂದರ್ಭ ಈ ದುರ್ಘಟನೆ ನಡೆದಿದೆ. ಆಕಸ್ಮಿಕವಾಗಿ 11 ಕೆ.ವಿ ವಿದ್ಯುತ್ ತಂತಿಗೆ ಅಲ್ಯುಮಿನಿಯಂ ಏಣಿ ತಗುಲಿದಾಗ ಆಘಾತಕ್ಕೊಳಗಾದ ಅಬ್ರುದ್ದೀನ್ ಅವರನ್ನು ಆಸ್ಪತ್ರೆಗೆ ಸಾಗಿಸುವ ಸಂದರ್ಭ ಮೃತ ಪಟ್ಟಿದ್ದಾರೆ. ಸ್ಥಳಕ್ಕೆ ಕುಟ್ಟ ಪೊಲೀಸ್ ಠಾಣೆ ವೃತ್ತ ನಿರೀಕ್ಷಕ ರವಿಶಂಕರ್ ಹಾಗೂ ಸಿಬ್ಬಂದಿ ಭೇಟಿ ನೀಡಿ ಮಹಜರು ನಡೆಸಿದರು. ಈ ಘಟನೆ ಕುರಿತು ಕುಟ್ಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಹುದಿಕೇರಿ ಹೋಬಳಿಯ ಹೈಸೊಡ್ಲೂರು ಗ್ರಾಮದ ಕಾಫಿ ತೋಟದಲ್ಲಿ ಅಸ್ಸಾಂ ಮೂಲದ ಕಾರ್ಮಿಕ ಇಸ್ಮಾಯಿಲ್ ಹುಸೇನ್(37) ಕರಿ ಮೆಣಸು ಕುಯ್ಯುತ್ತಿದ್ದ ಸಂದರ್ಭ ವಿದ್ಯುತ್ ತಂತಿಗೆ ಏಣಿ ಸ್ಪರ್ಶಗೊಂಡು ಕುಸಿದು ಬಿದ್ದಿದ್ದಾರೆ. ತಕ್ಷಣವೇ ಅವರನ್ನು ಗೋಣಿಕೊಪ್ಪಲಿನ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಸಂದರ್ಭ ಮಾರ್ಗಮಧ್ಯೆ ಕಾರ್ಮಿಕ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಶ್ರೀಮಂಗಲ ಪೊಲೀಸ್ ಠಾಣಾಧಿಕಾರಿ ವಿರೂಪಾಕ್ಷ ಮತ್ತು ಸಿಬ್ಬಂದಿ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕಾನೂನು ಕ್ರಮಕೈಗೊಂಡಿದ್ದಾರೆ.

ಪರಿಹಾರ ನೀಡಿ: ಕುಟ್ಟ ಸಮುದಾಯ ಆರೋಗ್ಯ ಕೇಂದ್ರದ ಬಳಿಕ ಕೊಡಗು ರೈತ ಸಂಘದ ಪ್ರಮುಖರು ಜಮಾಯಿಸಿ ಚೆಸ್ಕಾಂ ಇಲಾಖೆ ಮೃತ ಕಾರ್ಮಿಕನ ಅಂತ್ಯಸಂಸ್ಕಾರಕ್ಕೆ ಮಾನವೀಯ ಪರಿಹಾರ ನೀಡಬೇಕೆಂದು ಇದೇ ಸಂದರ್ಭ ಚೆಸ್ಕಾಂ ಅಧಿಕಾರಿಗಳನ್ನು ಆಗ್ರಹಿಸಿದರು. ಎಲ್ಲಾ ಹಳೆಯ ವಿದ್ಯುತ್ ಕಂಬಗಳನ್ನು ಬದಲಾಯಿಸಬೇಕು. ತೋಟಗಳ ಒಳಗೆ ಕೆಳ ಮಟ್ಟದಲ್ಲಿ ಹಾದು ಹೋಗಿರುವ ವಿದ್ಯುತ್ ಲೈನ್‌ಗಳನ್ನು ದುರಸ್ಥಿ ಮಾಡಬೇಕು ಎಂದು ಕೊಡಗು ರೈತ ಸಂಘದ ಗೌರವಾಧ್ಯಕ್ಷ ಚಿಮ್ಮಂಗಡ ಗಣೇಶ್ ಒತ್ತಾಯಿಸಿದರು.

ವಿ.ಪೇಟೆಯಲ್ಲಿ ಕಾಂಗ್ರೆಸ್ ಜನಸ್ಪಂದನಾ ಸಮಾವೇಶ



ವಿರಾಜಪೇಟೆ, ಫೆ.22– ಕೊಡಗು ಜಿಲ್ಲೆಯಲ್ಲಿ ಕಳೆದ 20 ವರ್ಷಗಳಿಂದ ಅಭಿವೃದ್ಧಿ ಕೆಲಸಗಳು ನಡೆಯುತ್ತಿಲ್ಲ ಬಿಜೆಪಿ ಸರಕಾರ ಭ್ರಷ್ಟಾಚಾರದಲ್ಲಿ ರಾಷ್ಟ್ರದಲ್ಲಿಯೇ ಪ್ರಥಮ ಸ್ಥಾನ ಪಡೆದಿದೆ. ಶೇ. 40 ರಷ್ಟು ಕಮಿಷನ್ ಪಡೆದ ಸಾಕ್ಷಿ ಇದೆ. ಜನ ಪ್ರತಿನಿಧಿಗಳಾದವರು ಅಭಿವೃದ್ಧಿ ಕೆಲಸಗಳನ್ನು ಮಾಡದೆ ಇರುವುದರಿಂದ ಜನರು ಇಂದು ಬದಲಾವಣೆ ಬಯಸಿದ್ದು, ಕೊಡಗಿನಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಒಲವು ವ್ಯಕ್ತವಾಗುತ್ತಿದೆ ಎಂದು ಎಐಸಿಸಿ ಕಾರ್ಯದರ್ಶಿ ಕೊಡಗು ಚುನಾವಣೆ ಉಸ್ತುವಾರಿ ರೋಜಿ ಜಾನ್ ಹೇಳಿದರು

ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ವತಿಯಿಂದ ನಗರದ ಸೆರಿನಿಟಿ ಸಭಾಂಗಣದಲ್ಲಿ ಆಯೋಜಿಸಿದ್ದ ಜನ ಸ್ಪಂದನಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತನಾಡಿ, ಕಾಂಗ್ರೆಸ್ ಪಕ್ಷ ಗೆಲ್ಲಿಸಬೇಕೆಂಬ ಅಭಿಲಾಷೆ ಮತದಾರರಿಗಿದ್ದು, ಇದನ್ನು ಕಾಂಗ್ರೆಸ್ ಪಕ್ಷ ಬಳಸಿಕೊಳ್ಳಬೇಕಾಗಿದೆ. ಕಾಫಿ ಬೆಳೆಗಾರರ, ಶ್ರಮಿಕ ವರ್ಗದವರ ಸಮಸ್ಯೆಗಳನ್ನು ಆಲಿಸಿ ಪರಿಹರಿಸುವಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರ ವಿಫಲವಾಗಿದೆ. ರಾಜ್ಯದ ಬಿಜೆಪಿ ದುರಾಡಳಿತ ಭ್ರಷ್ಟಾಚಾರವನ್ನು ಬದಲಾಯಿಸಲು ಮತ್ತು ದೇಶವನ್ನು ಉಳಿಸಿ ಬೆಳೆಸಲು ಕಾಂಗ್ರೆಸ್ ಪಕ್ಷದಿಂದ ಮಾತ್ರ ಸಾಧ್ಯ. ಆದ್ದರಿಂದ ಕೊಡಗಿನಲ್ಲಿ ಅನೇಕರು ಕಾಂಗ್ರೆಸ್ ಪಕ್ಷ ಸೇರುತ್ತಿದ್ದಾರೆ. ಜಾತಿ, ಭಾಷೆ ಅಂತರವಿಲ್ಲದೆ ಭಾರತವನ್ನು ಜೋಡಿಸುವ ಕೆಲಸ ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಇದಕ್ಕೆ ರಾಹುಲ್ ಗಾಂಧಿಯ ಜೋಡೋ ಯಾತ್ರೆ ಸಾಕ್ಷಿಯಾಗಿದ್ದು ದೇಶದಲ್ಲಿ ಉತ್ತಮ ಪ್ರತಿಕ್ರಿಯೆ ಸಿಕ್ಕಿದೆ ಎಂದ ಅವರು ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಗಂಟೆಯಲ್ಲಿ ಪ್ರತಿ ಮನೆಗೆ 200 ಯೂನಿಟ್ ಉಚಿತ ವಿದ್ಯುತ್ ಹಾಗೂ ಮಹಿಳೆಯರಿಗೆ ಎರಡು ಸಾವಿರ ರೂ. ನೀಡಲಿದ್ದು, ಇದಕ್ಕೆ ಗ್ಯಾರೆಂಟಿ ಪತ್ರವನ್ನು ನಾವು ಮನೆ ಮನೆಗೆ ತಲುಪಿಸಲಿದ್ದು ಕಾರ್ಯಕರ್ತರು ಮತದಾರರಿಗೆ ಮನದಟ್ಟು ಮಾಡುವಂತಾಗಬೇಕು ಎಂದರು.

ಕೆಪಿಸಿಸಿ ಉಪಾಧ್ಯಕ್ಷ, ಮಾಜಿ ಸಂಸದ ವಿನಯ ಕುಮಾರ್ ಸೊರಕೆ ಮಾತನಾಡಿ, ಬಿಜೆಪಿಯವರು ಟಿಪ್ಪು ಮತ್ತು ಸಾರ್ವಕರ್ ಎಂಬ ಬೀದಿ ನಾಟಕ ಮಾಡುತ್ತಿದ್ದು, ಜನರನ್ನು ಹಾದಿ ತಪ್ಪಿಸುತ್ತಿದ್ದಾರೆ. ನಾವು ಗಾಂಧೀಯವರ ರಾಷ್ಟ್ರವಾದವನ್ನು ಅನುಸರಿಸುತ್ತಿದ್ದೇವೆ. ಪ್ರಕೃತಿ ವಿಕೋಪ– ಪ್ರವಾಹ ಮತ್ತು ಜನರ ಸಮಸ್ಯೆ ಆಲಿಸಲು ಬಂದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮೊಟ್ಟೆ ಎಸೆದು ದ್ವೇಷ ರಾಜಕಾರಣ ಪ್ರದರ್ಶಿಸಲಾಯಿತು. ಕೇಂದ್ರ ಬಜೆಟ್‌ನಲ್ಲಿ ರೈತರಿಗೆ, ಕಾರ್ಮಿಕರಿಗೆ ಬಡ ಜನರಿಗೆ ಯಾವ ಸವಲತ್ತು ನೀಡಲಿಲ್ಲ. ರಾಜ್ಯದ ಬಜೆಟ್ ಶೂನ್ಯವಾಗಿದೆ ಎಂದು ದೂರಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಧ್ರುವನಾರಾಯಣ ಮಾತನಾಡಿ, ರಾಜ್ಯದಲ್ಲಿ ಬದಲಾವಣೆ ಒಲವು ಇದ್ದು ಇದಕ್ಕಾಗಿ ರಾಜ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅನೇಕ ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದು, ವಿರಾಜಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಸಾವಿರಾರು ಮಂದಿ ಬದಲಾವಣೆಯತ್ತ ಒಲವು ತೋರಿದ್ದು, ಆಡಳಿತ ಪಕ್ಷದ ಬಿಜೆಪಿಯವರು ದೇಶ ಭಕ್ತರು ಎಂದು ಮಾತನಾಡುತ್ತ ಭ್ರಷ್ಟಾಚಾರದ ಮುಂಚೂಣಿಯಲ್ಲಿದ್ದಾರೆ. ಬಿಜೆಪಿ ಆಡಳಿತದ ರಾಜ್ಯದ ಸಾಲ 5 ಲಕ್ಷ ಕೋಟಿ ರೂ., ಕಾಂಗ್ರೆಸ್ ವರಿಷ್ಠರು ಅಭ್ಯರ್ಥಿಗಳ ಸಾಮರ್ಥ್ಯವನ್ನು ಅವಲೋಕಿಸಿ ಸ್ಪರ್ಧೆಗೆ ಅವಕಾಶ ನೀಡುತ್ತಾರೆ. ನಮ್ಮಲ್ಲಿ ಯಾವ ಭಿನ್ನಾಭಿಪ್ರಾಯಗಳಿಲ್ಲದೆ ಮುಂದಿನ ಚುನಾವಣೆಯನ್ನು ಎದುರಿಸಬೇಕೆಂದು ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಅವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಕೆಪಿಸಿಸಿ ಕಾನೂನು ಘಟಕದ ಅಧ್ಯಕ್ಷ ಎ.ಎಸ್. ಪೊನ್ನಣ್ಣ, ಮಾಜಿ ಶಾಸಕ ಜೀವಿಜಯ, ವಿಧಾನ ಪರಿಷತ್ ಮಾಜಿ ಸದಸ್ಯರಾದ ವೀಣಾ ಅಚ್ಚಯ್ಯ, ಅರುಣ್ ಮಾಚಯ್ಯ, ಮಾಜಿ ಶಾಸಕ ಕೆ.ಎಂ. ಇಬ್ರಾಹಿಂ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ, ಪಕ್ಷದ ಪ್ರಚಾರ ಸಮಿತಿ ಸದಸ್ಯ ಟಿ.ಪಿ. ರಮೇಶ್ ಸಭೆಯಲ್ಲಿ ಮಾತನಾಡಿದರು.

ವೇದಿಕೆಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಚಂದ್ರಕಲಾ, ಪಕ್ಷದ ಪ್ರಮುಖರಾದ ಚಂದ್ರಮೌಳಿ, ಮಂಥರ್ ಗೌಡ, ಹಸೈನರ್ ಹಾಜಿ, ವಿರಾಜಪೇಟೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಜಿಪೂಣಚ್ಚ, ಪೊನ್ನಂಪೇಟೆ ಬ್ಲಾಕ್ ಅಧ್ಯಕ್ಷ ನವೀನ್, ನಾಪೋಕ್ಲು ಬ್ಲಾಕ್ ಅಧ್ಯಕ್ಷ ಇಸ್ಮಾಯಿಲ್, ವಿರಾಜಪೇಟೆ ನಗರ ಕಾಂಗ್ರೆಸ್ ಅಧ್ಯಕ್ಷ ಎಂ.ತಿಮ್ಮಯ್ಯ ಉಪಸ್ಥಿತರಿದ್ದರು. ಚಿತ್ರನಟ ನೆರವಂಡ ಉಮೇಶ್ ಸ್ವಾಗತಿಸಿದರೆ, ನಗರ ಕಾರ್ಯದರ್ಶಿ ಎಂ.ಎಂ. ಶಶಿಧರನ್ ನಿರೂಪಿಸಿದರು.

'ಕೈ' ಹಿಡಿದ ಸಂಕೇತ್

ಜನಸ್ಪಂದನಾ ಸಭೆಯಲ್ಲಿ ಪಕ್ಷದ ಮುಖಂಡರ ಸಮ್ಮುಖದಲ್ಲಿ ಜೆಡಿಎಸ್ ರಾಜ್ಯ ವಕ್ತಾರರಾಗಿದ್ದ ಮೇರಿಯಂಡ ಸಂಕೇತ್ ಪೂವಯ್ಯ ಅವರು ಕಾಂಗ್ರೆಸ್ ಸೇರ್ಪಡೆಯಾದರು. ಕಾಂಗ್ರೆಸ್ ಪ್ರಮುಖರು ಸಂಕೇತ್ ಪೂವಯ್ಯ ಅವರನ್ನು ಪಕ್ಷದ ಶಾಲು ನೀಡಿ ಪಕ್ಷಕ್ಕೆ ಬರಮಾಡಿಕೊಂಡರು. ಯುವ ಕಾಂಗ್ರೆಸ್ ವತಿಯಿಂದ ಬೃಹತ್ ಹಾರ ಹಾಕುವ ಮೂಲಕ ಸಂಕೇತ್ ಪೂವಯ್ಯ ಅವರನ್ನು ಸ್ವಾಗತಿಸಲಾಯಿತು. ಕಾಂಗ್ರೆಸ್ ಪಕ್ಷ ಸೇರ್ಪಡೆಯಾದ ಸಂಕೇತ್ ಪೂವಯ್ಯ, ಮಾಜಿ ಸಚಿವರಾದ ಬಿ.ಎ.ಜೀವಿಜಯ, ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ. ರಮೇಶ್ ಮಾತನಾಡಿದರು. ಸಭೆಗೂ ಮುನ್ನ ಗೋಣಿಕೊಪ್ಪದ ಆರ್‌ಎಂಸಿ ಆವರಣದಿಂದ ವಿರಾಜಪೇಟೆ ಸೆರೆನಿಟಿ ಸಭಾಂಗಣದವರೆಗೆ ಬೈಕ್ ಜಾಥಾ ನಡೆಸಲಾಯಿತು. ನೂರಾರು ಕಾರ್ಯಕರ್ತರು ಜಾಥಾದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲಾಧಿಕಾರಿ ಕಚೇರಿ ಮುಂದೆ ಸಿಎನ್‌ಸಿ ಸತ್ಯಾಗ್ರಹ

ಮಡಿಕೇರಿ, ಫೆ.22– ಅಂತರರಾಷ್ಟ್ರೀಯ ಮಾತೃಭಾಷಾ ದಿನದಂದು ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ಜಿಲ್ಲಾಧಿಕಾರಿಗಳ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿತು. ಸಂವಿಧಾನದ 8ನೇ ಶೆಡ್ಯೂಲ್‌ಗೆ ಕೊಡವ ಭಾಷೆಯನ್ನು ಸೇರಿಸಬೇಕು, ವಿಶ್ವ ಸಂಸ್ಥೆಯ ಅಧಿಕೃತ ಭಾಷೆಗಳಲ್ಲೊಂದಾಗಿ ಪರಿಗಣಿಸಬೇಕು, ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ ಕೊಡವ ಭಾಷೆಯ ಪದಗಳನ್ನು ಸೇರಿಸಬೇಕು ಎಂಬುದು ಸೇರಿದಂತೆ ಒಟ್ಟು 26 ಹಕ್ಕೊತ್ತಾಯಗಳನ್ನು ಮಂಡಿಸಿತು.



ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ನಡೆದ ಧರಣಿಯಲ್ಲಿ ವಿವಿಧ ಬೇಡಿಕೆಗಳ ಪರವಾದ ಘೋಷಣೆಗಳನ್ನು ಕೂಗಿದ ಪ್ರಮುಖರು ಒಂದು ಜನಾಂಗದ ಉಳಿವಿಗೆ ಭಾಷೆಯ ಬೆಳವಣಿಗೆಯೂ ಮುಖ್ಯ ಎಂದು ಅಭಿಪ್ರಾಯಪಟ್ಟರು.

ಅತ್ಯಂತ ಸೂಕ್ಷ್ಮ ಜನಾಂಗವಾಗಿರುವ ಕೊಡವರ ಮಾತೃಭಾಷೆ ಕೊಡವ ತಕ್‌ಗೆ ಸಂವಿಧಾನದ ಭದ್ರತೆ ನೀಡಬೇಕು, ಕೊಡವ ಭಾಷೆಯನ್ನು ಅಧಿಕೃತವೆಂದು ಘೋಷಿಸಿ ಕೊಂಕಣಿ ಭಾಷೆಯ ಮಾದರಿಯಲ್ಲಿ ರಾಜ್ಯದ 3ನೇ ಆಡಳಿತ ಭಾಷೆಯನ್ನಾಗಿ ಮಾಡಬೇಕು. ಸಂವಿಧಾನದ 345, 350, 350 ಎ, 350 ಬಿ ವಿಧಿಯಡಿ 1ನೇ ತರಗತಿಯಿಂದಲೇ ಪಠ್ಯಕ್ರಮದಲ್ಲಿ ಕೊಡವ ತಕ್ ಅನ್ನು ಕಡ್ಡಾಯಗೊಳಿಸಬೇಕು. ವಿಶ್ವಸಂಸ್ಥೆಯ ಅಧಿಕೃತ ಭಾಷೆ ಎಂದು ಘೋಷಿಸಬೇಕು, ಪ್ರತಿ ವರ್ಷ ಆಕ್ಸ್‌ಫರ್ಡ್ ಡಿಕ್ಷನರಿ ಜಗತ್ತಿನ ವಿವಿಧ ಭಾಷೆಗಳ 15 ಸಾವಿರ ಹೊಸ ಪದಗಳನ್ನು ಆಯ್ಕೆ ಮಾಡಿ ಅಳವಡಿಸಿಕೊಳ್ಳುವ ಪ್ರಕ್ರಿಯೆ ನಡೆಯುತ್ತಿದೆ. ಈ ಡಿಕ್ಷನರಿಯಲ್ಲಿ ಕೊಡವ ಭಾಷೆಯ ಪದಗಳನ್ನು ಸೇರಿಸುವುದರ ಮೂಲಕ ಕೊಡವ ಭಾಷೆ ಮತ್ತು ಆಕ್ಸ್‌ಫರ್ಡ್ ಡಿಕ್ಷನರಿ ಎರಡೂ ಶ್ರೀಮಂತವಾಗುವಂತೆ ಮಾಡಲು ಸರ್ಕಾರ ಕಾಳಜಿ ತೋರಬೇಕು ಎಂದು ಸಿಎನ್‌ಸಿ ಪ್ರಮುಖರು ಆಗ್ರಹಿಸಿದರು.

ಲೆಫ್ಟಿನೆಂಟ್ ಕರ್ನಲ್ ಬಿ.ಎಮ್. ಪಾರ್ವತಿ, ಕೂಪದಿರ ಪುಷ್ಪಾ ಮುತ್ತಣ್ಣ, ಚೋಳಪಂಡ ಜ್ಯೋತಿ ನಾಣಯ್ಯ, ಅರೆಯಡ ಸವಿತ, ಬೊಟ್ಟಂಗಡ ಸವಿತಾ ಗಿರೀಶ್, ಕಲಿಯಂಡ ಪ್ರಕಾಶ್, ಜಮ್ಮಡ ಮೋಹನ್, ಬಾಚರಣಿಯಂಡ ಚಿಪ್ಪಣ್ಣ, ಚಂಬಂಡ ಜನತ್, ಅರೆಯಡ ಗಿರೀಶ್, ಕಿರಿಯಮಾಡ ಶರಿನ್, ಬೇಪಡಿಯಂಡ ದಿನು, ಅಜಿನಿಕಂಡ ಸನ್ನಿ ಮಾಚಯ್ಯ, ಕೂಪದಿರ ಸಾಬು ತಮ್ಮಯ್ಯ, ಮಣವಟ್ಟಿರ ಚಿಣ್ಣಪ್ಪ, ಪುಟ್ಟಿಚೆಂಡ ದೇವಯ್ಯ, ಕೋಡಿರ ರತನ್, ಅಪ್ಪಾರಂಡ ಪ್ರಸಾದ್, ಪಟಮಾಡ ಕುಶ, ಪಟ್ಟಮಾಡ ಅಶೋಕ್, ಪುದಿಯೋಕಡ ಕಾಶಿ, ಬೇಪಡಿಯಂಡ ಬಿದಪ, ಕಾಂಡೇರ ಸುರೇಶ್ ಮತ್ತಿತರರು ಪಾಲ್ಗೊಂಡು ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು. ಕೊಡವ, ಕೊಡವತಿಯರು ಸಂವಿಧಾನಿಕ ಹಕ್ಕೊತ್ತಾಯಗಳ ಸಾಧನೆಗಾಗಿ ಗುರು–ಕಾರೋಣ, ಧಾರ್ಮಿಕ ಸಂಸ್ಕಾರ ಕೋವಿ, ಸೂರ್ಯ–ಚಂದ್ರ ಭೂದೇವಿ, ದೈವಿಕ ಜಲದೇವಿ ಕಾವೇರಿ ಮತ್ತು ವನದೇವತೆ ಹೆಸರಿನಲ್ಲಿ ಪ್ರತಿಜ್ಞಾವಿಧಿ ಸ್ವೀಕರಿಸಿದರು.

ಇಂದು ವಿದ್ಯುತ್ ವ್ಯತ್ಯಯ

ಮಡಿಕೇರಿ, ಫೆ.22– 66/11ಕೆವಿ ಮಡಿಕೇರಿ, ವಿದ್ಯುತ್ ಉಪ–ಕೇಂದ್ರದಿಂದ ಹೊರಹೋಗುವ ಮೇಕೇರಿ ಫೀಡರ್‌ನಲ್ಲಿ ತುರ್ತು ನಿರ್ವಹಣೆ ಕಾರ್ಯವನ್ನು ನಿರ್ವಹಿಸಬೇಕಿರುವುದರಿಂದ ಫೆಬ್ರವರಿ, 23 ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5 ಗಂಟೆವರೆಗೆ ವಿದ್ಯುತ್ ಉಪಕೇಂದ್ರಗಳಲ್ಲಿ ವಿದ್ಯುತ್ ಸರಬರಾಜು ಸ್ಥಗಿತಗೊಳಿಸಲಾಗುವುದು.

ಆದ್ದರಿಂದ ಮೇಕೇರಿ, ಕಡಗದಾಳು, ಅರ್ವತೋಕ್ಲು, ಬಿಳಿಗೇರಿ, ಹಾಕತ್ತೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ. ಸಾರ್ವಜನಿಕರು ಸಹಕರಿಸುವಂತೆ ಸೆಸ್ಕ್ ಕಾರ್ಯ ನಿರ್ವಾಹಕ ಎಂಜಿನಿಯರ್ ಅವರು ಕೋರಿದ್ದಾರೆ.

ಗುಂಡ್ಲುಪೇಟೆಯಲ್ಲಿ ಕಾಂಗ್ರೆಸ್ ಪ್ರಜಾಧ್ವನಿ

ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ 141 ಸ್ಥಾನ

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ



ಗುಂಡ್ಲುಪೇಟೆ, ಫೆ.22– ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ 141 ಸ್ಥಾನಗಳನ್ನು ಗಳಿಸಲಿದೆ ಎಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.

ಪಟ್ಟಣದ ನೆಹರು ಪಾರ್ಕ್ ಬಳಿ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಪ್ರಜಾಧ್ವನಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ರಾಜ್ಯದಲ್ಲಿ ಕಾಂಗ್ರೆಸ್ ನಡೆಸಿದ ಸರ್ವೇಯಲ್ಲಿ ನಾವು 141 ಸ್ಥಾನಗಳನ್ನು ಗಳಿಸಲಿದ್ದೇವೆ. ಅದರ ರಿಪೋರ್ಟ್ ನನ್ನ ಬಳಿ ಇದೆ. ಈ ಬಾರಿ ಗಣೇಶ್‌ಪ್ರಸಾದ್ ಅವರನ್ನು 25 ಸಾವಿರಕ್ಕೂ ಹೆಚ್ಚಿನ ಮತಗಳಿಂದ ಗೆಲ್ಲಿಸಲು ಕಾರ್ಯಕರ್ತರು ಪಣತೊಡಿ ಎಂದರು. ಬಿಜೆಪಿ ಉದ್ಯಮಿಗಳ ಪಕ್ಷವಾಗಿದ್ದು ಬೆಲೆ ಏರಿಕೆ ಮಾಡುವ ಮೂಲಕ ಶ್ರೀಸಾಮಾನ್ಯರ ಬದುಕನ್ನು ದುಸ್ತರವಾಗಿಸಿದೆ. ರಾಜ್ಯ ಸರ್ಕಾರದ ಭ್ರಷ್ಟಾಚಾರ ಮಿತಿಮೀರಿ ಹೋಗಿದ್ದು, ಪ್ರತಿಯೊಂದಕ್ಕೂ ಲಂಚ ಕೊಡಬೇಕಾಗಿದೆ ಇದರಿಂದ ಸಾಮಾನ್ಯ ಜನತೆ ರೋಸಿಹೋಗಿದ್ದು ಮುಂಬರುವ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದರೆ ಗೃಹಲಕ್ಷ್ಮಿ ಯೋಜನೆಯಲ್ಲಿ 200 ಯೂನಿಟ್ ವಿದ್ಯುತ್, ಅನ್ನಭಾಗ್ಯದಡಿ 10 ಕೆ.ಜಿ ಅಕ್ಕಿ, ಪ್ರತಿಯೊಂದು ಮನೆಯ ಯಜಮಾನಿಗೆ ಪ್ರತಿ ತಿಂಗಳು ಮನೆ ನಿರ್ವಹಣೆಗೆ 2000 ಸಾವಿರ ರೂಪಾಯಿಗಳನ್ನು ಉಚಿತವಾಗಿ ಕೊಡಲಾಗುವುದು ಎಂದು ಹೇಳಿದರು.

ಕಾಂಗ್ರೆಸ್ ಮುಖಂಡ ಹೆಚ್.ಎಂ. ಗಣೇಶಪ್ರಸಾದ್ ಮಾತನಾಡಿ, ಕ್ಷೇತ್ರದಲ್ಲಿ ನನ್ನ ತಂದೆ ಮಾಜಿ ಸಚಿವ ಮಹದೇವಪ್ರಸಾದ್ ಮಾಡಿದ ಅಭಿವೃದ್ಧಿ ಕಾರ್ಯಗಳು ಇಂದಿಗೂ ಜೀವಂತವಾಗಿದೆ. ಶಾಶ್ವತ ಕುಡಿಯುವ ನೀರಿನ ಯೋಜನೆಗಳನ್ನು ತರುವ ಮುಖಾಂತರ ಅವರು ಕ್ಷೇತ್ರದ ಜನರ ಮನಸ್ಸಿನಲ್ಲಿ ಅಜರಾಮರವಾಗಿದ್ದಾರೆ. ಇದೇ ರೀತಿಯಾಗಿ ನನ್ನ ತಾಯಿ ಗೀತಾ ಮಹದೇವಪ್ರಸಾದ್ ಉಪ ಚುನಾವಣೆಯಲ್ಲಿ ಜಯಶಾಲಿಯಾಗಿ ಮತ್ತಷ್ಟು ಅಭಿವೃದ್ಧಿ ಕಾರ್ಯಗಳನ್ನು ಕ್ಷೇತ್ರದಲ್ಲಿ ಮಾಡಿದರು. ಕ್ಷೇತ್ರದ ಜನರ ವಿಶ್ವಾಸದಿಂದ ಚುನಾವಣೆಗೆ ನಾನು ಸ್ಪರ್ಧಿಸುತ್ತಿದ್ದೇನೆ ನಿಮ್ಮ ಆಶೀರ್ವಾದ ನನ್ನ ಮೇಲಿರಲಿ ಎಂದರು. ಹಾಸ್ಯನಟ ಸಾಧುಕೋಕಿಲ ಮಾತನಾಡಿದರು.

ಅದ್ದೂರಿ ಸ್ವಾಗತ: ಪಟ್ಟಣಕ್ಕೆ ಆಗಮಿಸಿದ ಡಿಕೆಶಿ ಮತ್ತು ತಂಡದವರನ್ನು ತಾಲೂಕಿನ ಲಕ್ಕೂರು ಗೇಟ್‌ನಿಂದ ನೂರಾರು ಬೈಕ್ ಮೂಲಕ ಕರೆತಂದರು. ಪಟ್ಟಣದ ಬಸವೇಶ್ವರ ವೃತ್ತದ ಬಳಿ ಕ್ರೇನ್ ಮೂಲಕ ಬೃಹತ್ ಸೇಬಿನ ಹಾರ ಹಾಕಿ ಸ್ವಾಗತ ಕೋರಲಾಯಿತು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್ ಧ್ರುವನಾರಾಯಣ್, ರಾಜ್ಯಸಭಾ ಸದಸ್ಯ ಚಂದ್ರಶೇಖರ್, ಯುವ ಕಾಂಗ್ರೆಸ್ ರಾಜ್ಯಾಧ್ಯಕ್ಷ ನಲಪಾಡ್, ಜಿಲ್ಲಾಧ್ಯಕ್ಷ ಮರಿಸ್ವಾಮಿ, ಮಾಜಿ ಸಂಸದ ಎ.ಸಿದ್ದರಾಜು, ಕಾಡಾ ಮಾಜಿ ಅಧ್ಯಕ್ಷ ಹೆಚ್.ಎಸ್. ನಂಜಪ್ಪ, ಚಾಮುಲ್ ನಿರ್ದೇಶಕ ಹೆಚ್.ಎಸ್.ನಂಜುಂಡಪ್ರಸಾದ್ ಸೇರಿದಂತೆ ಹಲವರು ಇದ್ದರು.

ವಿಧಾನಸಭಾ ಚುನಾವಣೆ: ಜಿಲ್ಲಾಧಿಕಾರಿಯಿಂದ ಸಿದ್ಧತೆ ಪರಿಶೀಲನೆ



ಚಾಮರಾಜನಗರ, ಫೆ.22– ಮುಂಬರುವ ವಿಧಾನಸಭಾ ಸಾರ್ವತ್ರಿಕ ಚುನಾವಣೆ ಹಿನ್ನೆಲೆಯಲ್ಲಿ ಜಿಲ್ಲೆಯ ಮತಗಟ್ಟೆಗಳಲ್ಲಿ ಮೂಲ ಸೌಕರ್ಯಗಳನ್ನು ಸಮರ್ಪಕವಾಗಿ ಕಲ್ಪಿಸಿರುವ ಬಗ್ಗೆ ಅಧಿಕಾರಿಗಳು ವ್ಯಾಪಕವಾಗಿ ಪರಿಶೀಲಿಸಿ ಖಾತರಿಪಡಿಸಿಕೊಳ್ಳಬೇಕೆಂದು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಚುನಾವಣಾ ಪೂರ್ವ ಸಿದ್ಧತಾ ಕಾರ್ಯಗಳ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಮತಗಟ್ಟೆಗಳಲ್ಲಿ ಕುಡಿಯುವ ನೀರು, ವಿದ್ಯುತ್ ಸಂಪರ್ಕ, ಶೌಚಾಲಯ, ಪೀಠೋಪ ಕರಣ, ವಿಶೇಷ ಚೇತನರಿಗೆ ರ‍್ಯಾಂಪ್ ಸೇರಿದಂತೆ ಎಲ್ಲಾ ಮೂಲ ಸೌಲಭ್ಯಗಳನ್ನು ಕೊರತೆಯಾಗದಂತೆ ಒದಗಿಸಬೇಕಿದೆ. ಮೂಲ ಸೌಲಭ್ಯ ಕುರಿತ ಯಾವುದೇ ಕೆಲಸಗಳಿದ್ದರೂ ತುರ್ತಾಗಿ ಪೂರ್ಣಗೊಳಿಸಬೇಕು. ಸಂಬಂಧಪಟ್ಟ ಅಧಿಕಾರಿಗಳು ಮತಗಟ್ಟೆಗಳಿಗೆ ಭೇಟಿ ನೀಡಿ ಸೌಲಭ್ಯ ಕಲ್ಪಿಸಿರುವ ಬಗ್ಗೆ ಪರಿಶೀಲಿಸಬೇಕು ಎಂದರು.

ವಿಧಾನಸಭಾ ಕ್ಷೇತ್ರವಾರು ಚುನಾವಣಾಧಿಕಾರಿಗಳು ನಾಮಪತ್ರ ಸ್ವೀಕರಿಸುವ ಕಚೇರಿ, ಇನ್ನಿತರ ಸಿಬ್ಬಂದಿ ನಿಯೋಜನೆ ವಿವರಗಳ ಬಗ್ಗೆ ಮಾಹಿತಿ ಪರಿಶೀಲಿಸಿದ ಜಿಲ್ಲಾಧಿಕಾರಿಗಳು ಜಿಲ್ಲಾ ಕೇಂದ್ರ ಹಾಗೂ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ 24x7 ಕಂಟ್ರೋಲ್ ರೂಂ ಸ್ಥಾಪನೆ ಹಾಗೂ ನಿರ್ವಹಣೆ ಮಾಡುವ ಸಂಬಂಧ ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಿದರು.

ಹೆಚ್ಚುವರಿ ಮಾಸ್ಟರ್ ಟ್ರೈನರ್‌ಗಳನ್ನು ನೇಮಕ ಮಾಡಬೇಕು. ಸಿ–ವಿಜಿಲ್, ಸುವಿಧಾ, ಕಂಟ್ರೋಲ್ ರೂಂ ನಿರ್ವಹಣೆಗೆ ತಂಡಗಳನ್ನು ರಚನೆ ಮಾಡಬೇಕು. ಚುನಾವಣಾ ಕೆಲಸ ಕಾರ್ಯಗಳಿಗೆ ಅಗತ್ಯವಾದ ವಾಹನಗಳ ವಿವರವನ್ನು ಒದಗಿಸಬೇಕು. ಮತಗಟ್ಟೆ ಮಟ್ಟದ ಅಧಿಕಾರಿಗಳನ್ನು ನೇಮಕ ಸಂಬಂಧ ಪ್ರಸ್ತುತ ಹಂತದ ವರದಿ ಸಲ್ಲಿಸುವಂತೆ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು.

ಮತದಾನ ಜಾಗೃತಿ ಕಾರ್ಯಕ್ರಮಗಳ ಆಯೋಜನೆಗೆ ಕೈಗೊಂಡಿರುವ ಕ್ರಮಗಳು, ಚುನಾವಣೆಗೆ ಸಂಬಂಧಿಸಿದಂತೆ ಕೈಗೊಳ್ಳಲಾಗಿರುವ ಇನ್ನಿತರ ಸಿದ್ಧತೆಗಳನ್ನು ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಅವರು ವಿವರವಾಗಿ ಪರಿಶೀಲಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹೂ, ಉಪವಿಭಾಗಾಧಿಕಾರಿ ಗೀತಾ ಹುಡೇದ, ತಹಸೀಲ್ದಾರ್ ಈ. ಬಸವರಾಜು, ರವಿಶಂಕರ್, ಮಂಜುಳಾ, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕ ಮಲ್ಲಿಕಾರ್ಜುನ್, ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆಯ ಉಪನಿರ್ದೇಶಕ ಯೋಗಾನಂದ, ಜಂಟಿ ಕೃಷಿ ನಿರ್ದೇಶಕ ಮಧುಸೂಧನ್, ಪ್ರಾದೇಶಿಕ ಸಾರಿಗೆ ಅಧಿಕಾರಿ ಸುಧಾಮಣಿ, ಭೂ ದಾಖಲೆಗಳ ಉಪನಿರ್ದೇಶಕ ವಿದ್ಯಾಯಿನಿ, ತೋಟಗಾರಿಕೆ ಇಲಾಖೆ ಉಪನಿರ್ದೇಶಕ ಶಿವಪ್ರಸಾದ್, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಮಂಜುಳಾ, ಶಿಕ್ಷಣ ಅಧಿಕಾರಿ ಮಂಜುನಾಥ್, ಪಶುಪಾಲನೆ ಇಲಾಖೆಯ ಉಪನಿರ್ದೇಶಕ ಡಾ. ಶಿವಣ್ಣ, ಇನ್ನಿತರ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಗಣಿಗಾರಿಕೆ ಪ್ರದೇಶ ಡ್ರೋಣ್ ಸರ್ವೇಗೆ ಆಗ್ರಹ

ಚಾಮರಾಜನಗರ, ಫೆ.22– ಜಿಲ್ಲಾದ್ಯಂತ ಗಣಿಗಾರಿಕೆ ನಡೆಯುವ ಪ್ರದೇಶವನ್ನು ಕಡ್ಡಾಯವಾಗಿ ಡ್ರೋಣ್ ಮೂಲಕ ಸರ್ವೇ ಮಾಡಿಸಬೇಕು ಎಂದು ರೈತ ಕೂಲಿ ಸಂಗ್ರಾಮ ಜಿಲ್ಲಾ ಸಮಿತಿ ಅಧ್ಯಕ್ಷ ಎಂ.ಶಿವಣ್ಣ ಕಂದೇಗಾಲ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ನಡೆಯುತ್ತಿರುವ ಕಪ್ಪು ಮತ್ತು ಬಿಳಿಕಲ್ಲು ಗಣಿಗಾರಿಕೆಯಲ್ಲಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಸುರಕ್ಷತಾ ದೃಷ್ಟಿಯಿಂದ ರೂಪಿಸಿರುವ ಮಾರ್ಗಸೂಚಿಗಳನ್ನು ಉಲ್ಲಂಘಿಸಲಾಗುತ್ತಿದೆ. ಆದ್ದರಿಂದ ಸರ್ವೇ ಮಾಡಿಸುವುದು ಸೂಕ್ತ ಎಂದು ಒತ್ತಾಯಿಸಿದರು. ಗಣಿ ಮಾಲೀಕರು ಸರ್ಕಾರಕ್ಕೆ ಪಾವತಿಸಬೇಕಾದ ರಾಜಧನವನ್ನು ಮನ್ನಾ ಮಾಡುವಂತೆ ಮುಖ್ಯಮಂತ್ರಿ ಅವರಿಗೆ ಮನವಿ ಮಾಡಿದ್ದಾರೆ. ಡ್ರೋಣ್ ಸರ್ವೇ ನಡೆಸಿದರೆ 6 ಸಾವಿರ ಕೋಟಿ ರೂ. ಅಲ್ಲ 60 ಸಾವಿರ ಕೋಟಿ ರೂ. ರಾಜಧನ ಪಾವತಿಸಬೇಕಾಗುತ್ತದೆ ಎಂದು ತಿಳಿಸಿದರು. ಗಣಿ ಮಾಲೀಕರು ಬಡವರಲ್ಲ. ಡ್ರೋಣ್ ಸರ್ವೇ ಮಾಡಿಸಿದರೆ ಅವರ ನಿಜ ಬಣ್ಣ ಬಯಲಾಗುತ್ತದೆ. ಅಲ್ಲದೇ ಗಣಿಗಾರಿಕೆ ನಡೆಯುವ ಸ್ಥಳದಲ್ಲಿ ಸಿಸಿ ಕ್ಯಾಮರಾ ಅಳವಡಿಕೆ, ಚೆಕ್‌ಪೋಸ್ಟ್ ನಿರ್ಮಾಣ, ವೇಬ್ರಿಡ್ಜ್ ಹಾಕಬೇಕು ಎಂದು ಒತ್ತಾಯಿಸಿದರು.

ವರ್ಷಕ್ಕೆ 12–13 ಸಾವಿರ ಟನ್ ಕಲ್ಲು ತೆಗೆಯಲು ಮಾತ್ರ ಗಣಿ ಇಲಾಖೆ ಅನುಮತಿ ನೀಡಿದೆ. ಆದರೆ, ಗಣಿಗಾರಿಕೆ ಸ್ಥಳದಲ್ಲಿ ಸ್ಫೋಟ ಮಾಡುತ್ತಿರುವುದರಿಂದ ತಿಂಗಳಿಗೆ 15–20 ಸಾವಿರ ಟನ್ ಕಲ್ಲು ತೆಗೆಯಲಾಗುತ್ತದೆ. ದೇವಸ್ಥಾನ, ಸ್ಮಶಾನ ಜಾಗದಿಂದ 200 ಮೀಟರ್ ಅಂತರದಲ್ಲಿ ಗಣಿಗಾರಿಕೆ ನಡೆಸಬಾರದು ಎಂಬ ನಿಯಮವಿದೆ. ಆದರೆ, ಆ ನಿಯಮ ಪಾಲನೆಯಾಗುತ್ತಿಲ್ಲ ಎಂದರು. ರೈತ ಸಂಘದ ಮುಖಂಡ ಎಚ್.ಸಿ. ಮಹೇಶ್‌ಕುಮಾರ್ ಮಾತನಾಡಿ, ರಾತ್ರಿ ವೇಳೆ ಕಾರ್ಯ ನಿರ್ವಹಿಸುತ್ತಿರುವ ಕ್ರಷರ್‌ಗಳಿಂದ ಹತ್ತಿರ ಗ್ರಾಮಗಳ ಜನ–ಜಾನುವಾರುಗಳು, ಪಕ್ಷಿ ಪ್ರಾಣಿಗಳ ನಿದ್ರೆಗೆ ಭಂಗವಾಗುತ್ತಿದೆ. ಆದ್ದರಿಂದ ರಾತ್ರಿ ವೇಳೆ ಕ್ರಷರ್‌ಗಳನ್ನು ಬಂದ್ ಮಾಡಿಸಬೇಕೆಂದು ಒತ್ತಾಯಿಸಿದರು.

ಪರಿಸರವಾದಿ ಪುಣಜನೂರು ದೊರೆಸ್ವಾಮಿ ಮಾತನಾಡಿ, ಚಾಮರಾಜನಗರ ತಾಲೂಕಿನ ಬಿಸಲವಾಡಿ ಗಣಿಯಲ್ಲಿ ಕಲ್ಲು ಗುಡ್ಡೆ ಕುಸಿದು ಕಾರ್ಮಿಕರು ಮೃತಪಟ್ಟರು. ಅವರ ಕುಟುಂಬಕ್ಕೆ ಸರ್ಕಾರದಿಂದ ನ್ಯಾಯಯುತ ಪರಿಹಾರ ದೊರೆತಿಲ್ಲ. ಗಣಿಗಳಿಂದ ಅರಣ್ಯ ಪ್ರದೇಶ ನಾಶವಾಗುತ್ತಿದೆ. ಅಕ್ರಮ ಗಣಿಗಾರಿಕೆ ತಡೆಯಬೇಕೆಂದು ನಾವು ಅನೇಕ ವರ್ಷಗಳಿಂದ ಹೋರಾಟ ಮಾಡಿಕೊಂಡೆ ಬಂದಿದ್ದೇವೆ. ಸರ್ಕಾರ ಇದಕ್ಕೆ ಕಿವಿಗೊಟ್ಟಿಲ್ಲ ಎಂದು ಆಪಾದಿಸಿದರು. ಮುಖಂಡರಾದ ರಂಗಸ್ವಾಮಿನಾಯಕ, ಶ್ರೀಧರ್ ಹಾಜರಿದ್ದರು.

ಫೆ.26, ಮೈಸೂರಿನಲ್ಲಿ ರಾಜ್ಯಮಟ್ಟದ ಬೌದ್ಧ ಮಹಾ ಸಮ್ಮೇಳನ



ಚಾಮರಾಜನಗರ, ಫೆ. 22– ಭಾರತೀಯ ಬೌದ್ಧ ಮಹಾಸಭಾ ರಾಜ್ಯ ಶಾಖೆ, ಮೈಸೂರು ಜಿಲ್ಲಾ ಶಾಖೆ ವತಿಯಿಂದ ಫೆ. 26 ರಂದು ಭಾನುವಾರ ಮೈಸೂರಿನಲ್ಲಿ ರಾಜ್ಯ ಮಟ್ಟದ ಬೌದ್ಧ ಮಹಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ಭಾರತೀಯ ಬೌದ್ಧ ಮಹಾಸಭಾ ರಾಜ್ಯ ಉಪಾಧ್ಯಕ್ಷ ಮಹೇಂದ್ರ ಮಾಂಕಾಳೆ ತಿಳಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಅಂದು ಬೆಳಗ್ಗೆ 9.30ಕ್ಕೆ ಮೈಸೂರು ಪುರಭವನದ ಬಾಬಾ ಸಾಹೇಬ್ ಅಂಬೇಡ್ಕರ್ ಪ್ರತಿಮೆಗೆ ಡಾ. ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಮಾಲಾರ್ಪಣೆ ಮಾಡಲಿದ್ದಾರೆ. ರಾಷ್ಟ್ರೀಯ ಹಾಗೂ ರಾಜ್ಯದ ಸಮತಾ ಸೈನಿಕ ದಳದವರಿಂದ ಪಥ ಸಂಚಲನ ನಡೆಯಲಿದೆ. ಬೆಳಗ್ಗೆ 11.30ಕ್ಕೆ ಭಿಕ್ಕು ಸಂಘದ ಸಾನಿಧ್ಯದಲ್ಲಿ ತಿಸರಣ–ಪಂಚಶೀಲ ಸ್ವೀಕಾರ–ಮೈತ್ರಿಧ್ಯಾನ ನಡೆಯಲಿದೆ. ಡಾ.ಬಿ.ಆರ್. ಅಂಬೇಡ್ಕರ್ ರವರ ಮೊಮ್ಮಗ, ಭಾರತೀಯ ಬೌದ್ಧ ಮಹಾಸಭಾ ರಾಷ್ಟ್ರೀಯ ಕಾರ್ಯಾಧ್ಯಕ್ಷರಾದ ಡಾ.ಭೀಮರಾವ್ ಯಶವಂತರಾವ್ ಅಂಬೇಡ್ಕರ್ ಅವರ ಅಧ್ಯಕ್ಷತೆಯಲ್ಲಿ ಸಮಾವೇಶ ಉದ್ಘಾಟನೆಗೊಳ್ಳಲಿದೆ ಎಂದರು.

ಮೈಸೂರಿನಲ್ಲಿ ಪ್ರಥಮ ಬಾರಿಗೆ ಈ ಬೃಹತ್ ಸಮಾವೇಶ ಆಯೋಜಿಸಲಾಗಿದೆ. ಈ ಸಮಾವೇಶದಲ್ಲಿ 25 ಸಾವಿರ ಜನರು ಸೇರುವ ನಿರೀಕ್ಷೆ ಇದೆ. ಭಾರತ ಬುದ್ಧನನಾಡು ಈ ನಾಡಿನಲ್ಲಿ ಬುದ್ಧ ಸಂದೇಶವನ್ನು ಪುನಶ್ಚೇತನಗೊಳಿಸುವುದು ಈ ಸಮ್ಮೇಳನ ಉದ್ದೇಶವಾಗಿದೆ. ಈ ಸಮ್ಮೇಳನಕ್ಕೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು. ಭಾರತೀಯ ಬೌದ್ಧ ಮಹಾಸಭಾ ಜಿಲ್ಲಾಧ್ಯಕ್ಷ ಆರ್.ಬಸವರಾಜು ಮಾತನಾಡಿ, ಮೈಸೂರಿನಲ್ಲಿ ನಡೆಯುವ ರಾಜ್ಯ ಮಟ್ಟದ ಬೌದ್ಧ ಮಹಾಸಮ್ಮೇಳನಕ್ಕೆ ಜಿಲ್ಲೆಯಿಂದ 5 ಸಾವಿರ ಜನರು ಭಾಗವಹಿಸಲಿದ್ದಾರೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಭಾರತೀಯ ಬೌದ್ಧ ಮಹಾಸಭಾ ತಾಲೂಕು ಅಧ್ಯಕ್ಷ ಸಿದ್ದರಾಜು, ಪ್ರಗತಿಪರ ಸಂಘಟನೆಗಳ ಒಕ್ಕೂಟ ಅಧ್ಯಕ್ಷ ಸಿ.ಎಂ.ಕೃಷ್ಣಮೂರ್ತಿ, ಮುಖಂಡ ಜಿ.ಎಂ.ಗಾಡ್ಕರ್, ದೊಡ್ಡರಾಯಪೇಟೆ ಮಹೇಶ್ ಹಾಜರಿದ್ದರು.

50 ಸಾವಿರ ದೇಣಿಗೆ ನೀಡಿದ ವೆಂಕಟರಮಣಸ್ವಾಮಿ (ಪಾಪು): ರಾಜ್ಯಮಟ್ಟದ ಬೌದ್ಧ ಮಹಾ ಸಮ್ಮೇಳನಕ್ಕೆ ದಲಿತ ಮಹಾಸಭಾ ರಾಜ್ಯ ಉಪಾಧ್ಯಕ್ಷ ವೆಂಕಟರಮಣಸ್ವಾಮಿ (ಪಾಪು) ಅವರು ವೈಯಕ್ತಿಕವಾಗಿ 50 ಸಾವಿರ ರೂಪಾಯಿ ಧನ ಸಹಾಯ ಮಾಡಿದರು.

ಧನ ಸಹಾಯ ಸ್ವೀಕರಿಸಿದ ಭಾರತೀಯ ಬೌದ್ಧ ಮಹಾಸಭಾ ರಾಜ್ಯ ಉಪಾಧ್ಯಕ್ಷ ಮಹೇಂದ್ರ ಮಾಂಕಾಳೆ ಮಾತನಾಡಿ, ರಾಜ್ಯಮಟ್ಟದ ಬೌದ್ಧ ಮಹಾ ಸಮ್ಮೇಳನಕ್ಕೆ ಹೆಚ್ಚಿನ ಹಣಕಾಸು ನೆರವು ಬೇಕಾಗಿದೆ. ಸಹಾಯ ಮಾಡುವವರು ಕೆನರಾಬ್ಯಾಂಕ್ ಮೈಸೂರು ಶಾಖೆ ಖಾತೆ ಸಂಖ್ಯೆ : 110101637094, ಐಎಫ್‌ಎಸ್‌ಸಿ ಕೋಡ್ ಸಿಎನ್‌ಆರ್‌ಬಿ0002849 ಜಮಾ ಮಾಡಬಹುದಾಗಿದೆ ಎಂದರು.

ಶ್ರೀ ಚೌಡೇಶ್ವರಿ ಅಮ್ಮನವರ 64ನೇ ವರ್ಧಂತಿ

ಚಾಮರಾಜನಗರ, ಫೆ.22– ನಗರದ ದೇವಾಂಗ 2ನೇ ಬೀದಿಯಲ್ಲಿರುವ ಶ್ರೀ ರಾಮಲಿಂಗ ಚೌಡೇಶ್ವರಿ ದೇವಸ್ಥಾನದಲ್ಲಿ ಬುಧವಾರ ಶ್ರೀ ರಾಮಲಿಂಗ ಚೌಡೇಶ್ವರಿ ಅಮ್ಮನವರ 64ನೇ ವರ್ಧಂತಿ ಮಹೋತ್ಸವವು ಭಕ್ತಿ ಪೂರಕವಾಗಿ ನಡೆಯಿತು.



ವರ್ಧಂತಿ ಮಹೋತ್ಸವದ ಅಂಗವಾಗಿ ದೇವಸ್ಥಾನದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜಾ ಕಾರ್ಯಗಳು ಪುರೋಹಿತರಾದ ಮುರುಳಿ ಕೃಷ್ಣ ನೇತೃತ್ವದಲ್ಲಿ ನೆರವೇರಿತು.

ಬೆಳಗ್ಗೆ ಗಣಪತಿಹೋಮ, ಮೃತ್ಯುಂಜಯ ಹೋಮ, ಚೌಡೇಶ್ವರಿ ಹೋಮ, ನವಗ್ರಹ ಪೂಜಾ ಹೋಮ, ಪೂರ್ಣಾಹುತಿ ನಂತರ ಮಧ್ಯಾಹ್ನ 1.30ಕ್ಕೆ ಮಹಾಮಂಗಳಾರತಿ ನಡೆಯಿತು. ನಂತರ ಭಕ್ತಾದಿಗಳಿಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಈ ಪೂಜಾ ಕಾರ್ಯದಲ್ಲಿ ದೇವಾಂಗ ಸಮಾಜದ ಯಜಮಾನರಾದ ಸಿ.ಬಿ. ಬಂಗಾರು, ಗುಣಶೇಖರ, ಪರಸ್ಥಳದ ದೇವಾಂಗ ಕುಲಸ್ಥರು ಹಾಗೂ ಭಕ್ತಾದಿಗಳು ಆಗಮಿಸಿ ದೇವರ ಕೃಪೆಗೆ ಪಾತ್ರರಾದರು. ಸಂಜೆ 7ಗಂಟೆಯಲ್ಲಿ ಶ್ರೀ ಅಮ್ಮನವರಿಗೆ ದೀಪ ಆರತಿ ಕಾರ್ಯಕ್ರಮ ನೆರವೇರಿತು.

ಇಂದು ಸಾರಿಗೆ ಪ್ರಾಧಿಕಾರದ ಸಭೆ

ಮೈಸೂರು,ಫೆ.22– ಮಜಲು ವಾಹನ ರಹದಾರಿ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿನ ಸಭಾಂಗಣದಲ್ಲಿ ಪ್ರಾದೇಶಿಕ ಸಾರಿಗೆ ಪ್ರಾಧಿಕಾರದ ಸಭೆಯನ್ನು ಫೆ.23 ರಂದು ಮಧ್ಯಾಹ್ನ 3 ಗಂಟೆಗೆ ಹಮ್ಮಿಕೊಳ್ಳಲಾಗಿದೆ. ಪ್ರಾಧಿಕಾರಕ್ಕೆ ಅರ್ಜಿಗಳನ್ನು ಸಲ್ಲಿಸಿರುವ ಮಜಲು ವಾಹನ ರಹದಾರಿಗಳಿಗೆ ಸಂಬಂಧಪಟ್ಟವರು ಸದರಿ ಸಭೆಗೆ ಅಗತ್ಯ ಮಾಹಿತಿ ಮತ್ತು ದಾಖಲಾತಿಗಳೊಂದಿಗೆ ಹಾಜರಾಗುವಂತೆ ಮೈಸೂರು ಪಶ್ಚಿಮ ವಿಭಾಗದ ಕಾರ್ಯದರ್ಶಿ ಹಾಗೂ ಉಪ ಸಾರಿಗೆ ಆಯುಕ್ತರು ಮತ್ತು ಹಿರಿಯ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಪ್ರಧಾನಿ ಮೋದಿ ಉದ್ಘಾಟನೆ

ಉದ್ಘಾಟನೆ ವೇಳೆಗೆ ರಸ್ತೆ ಎಲ್ಲಾ ಕಾಮಗಾರಿ ಸಂಪೂರ್ಣಗೊಳ್ಳಲಿದೆ ಎಂದರು. ಸುಮಾರು ಎಂಟು ಸಾವಿರ ಕೋಟಿ ರೂ. ವೆಚ್ಚದಲ್ಲಿ ಎರಡು ಹಂತಗಳಲ್ಲಿ ಹತ್ತು ಪಥಗಳ ರಸ್ತೆ ನಿರ್ಮಿಸಲಾಗಿದೆ. ಈ ರಸ್ತೆ ಬೆಂಗಳೂರು–ಚೆನ್ನೈ ರಾಷ್ಟ್ರೀಯ ಹೆದ್ದಾರಿಗೂ ಸಂಪರ್ಕ ಕಲ್ಪಿಸಲಿದೆ. ಇದೇ ಕಾಲಕ್ಕೆ ಮುಂಬೈ–ಚೆನ್ನೈ ಎಕ್ಸ್‌ಪ್ರೆಸ್ ಕಾರಿಡಾರ್‌ಗೂ ಸಂಪರ್ಕ ದೊರೆಯಲಿದೆ. ಈಗಾಗಲೇ ಈ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ ಪೂರ್ಣಗೊಂಡಿದ್ದು, ಸರ್ವೀಸ್ ರಸ್ತೆಗಳ ಕಾಮಗಾರಿ ನಡೆಯುತ್ತಿದೆ. ವ್ಯಾಪಾರ ಮತ್ತು ಪ್ರವಾಸೋದ್ಯಮ ಬೆಳವಣಿಗೆಗೂ ಈ ರಸ್ತೆ ಸಹಕಾರಿಯಾಗಲಿದೆ. ಅಲ್ಲದೆ, ಮೈಸೂರು ಮತ್ತು ಅದರ ಸುತ್ತಮುತ್ತಲಿನ ಜಿಲ್ಲೆಗಳು ಆರ್ಥಿಕವಾಗಿ ಬೆಳವಣಿಗೆಗೆ ನಾಂದಿ ಹಾಡಲಿದೆ. ಹೆದ್ದಾರಿ ಪೂರ್ಣಗೊಳ್ಳುತ್ತಿದ್ದಂತೆ ಮೈಸೂರಿನಲ್ಲಿ ಬೃಹತ್ ಕೈಗಾರಿಕಾ ವಸಹತು ಪ್ರಾರಂಭಿಸಲು ಸರ್ಕಾರ ಈಗಾಗಲೇ ತೀರ್ಮಾನಿಸಿದೆ. ಜೊತೆಗೆ ನೊಯಿಡಾ ಮಾದರಿಯಲ್ಲಿ ಟೌನ್‌ಶಿಪ್ ನಿರ್ಮಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಪ್ರಸಕ್ತ ಸಾಲಿನ ಮುಂಗಡ ಪತ್ರದಲ್ಲಿ ಘೋಷಣೆ ಮಾಡಿದ್ದಾರೆ.

ಸಂಚಾರ ದಟ್ಟಣೆ ಶುರುವಾಯ್ತು

ಆಗಲಿದ್ದು, ಕಾರು, ಲಾರಿ, ಬಸ್, ಆಟೋ ಮತ್ತು ದ್ವಿಚಕ್ರ ವಾಹನಗಳು ಇಲ್ಲಿ ಸಿಗ್ನಲ್ ಲೈಟ್ ದಾಟಿ ಮುಂದೆ ಸಾಗಲು 30 ರಿಂದ 45 ನಿಮಿಷ ಕಾಯಬೇಕಾಗುತ್ತಿದೆ. ಪರಿಣಾಮ ಆಂಬುಲೆನ್ಸ್ ಹಾಗೂ ಅಗ್ನಿಶಾಮಕ ವಾಹನಗಳ ತುರ್ತು ಸೇವೆಗೂ ವಾಹನ ದಟ್ಟಣೆಯಿಂದ ತೀವ್ರ ಅಡಚಣೆಯಾಗುತ್ತಿದೆ. ಈ ಸಮಸ್ಯೆ ನೀಗಿಸಲೆಂದು ಭಾರತ ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರ (ಎನ್‌ಹೆಚ್‌ಎಐ)ವು ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಅನ್ನು ಬಹು ಮಾರ್ಗೀಯ ವಾಹನ ಸಂಚಾರ ಅಂತರ ಬದಲಾವಣೆ (ಕ್ಲವರ್ ಲೀಫ್ ಇಂಟರ್‌ಚೇಂಜ್) ವ್ಯವಸ್ಥೆಯಾಗಿ ಅಭಿವೃದ್ಧಿಪಡಿಸುವ ಪ್ರಸ್ತಾವನೆಗೆ 2019ರಲ್ಲೇ ಅನುಮೋದನೆ ನೀಡಿತ್ತಾದರೂ, ಯೋಜನೆ ಇನ್ನೂ ಅನುಷ್ಠಾನವಾಗಿಲ್ಲ. ಇದೀಗ ಎಕ್ಸ್‌ಪ್ರೆಸ್‌ವೇ ಸಿದ್ಧವಾಗಿದ್ದು, ಮಾರ್ಚ್ 2 ಅಥವಾ 3ನೇ ವಾರ ಉದ್ಘಾಟನೆಯಾಗುವುದರಿಂದ ವಾಹನ ದಟ್ಟಣೆ ನಿವಾರಣೆಗೆ ಬಹುಮಾರ್ಗೀಯ ಸಂಚಾರ ಅಂತರ ಬದಲಾವಣೆ ವ್ಯವಸ್ಥೆ ಕಲ್ಪಿಸುವ ಕಾಮಗಾರಿ ಕೈಗೆತ್ತಿಕೊಳ್ಳುವಂತೆ ಸಾರ್ವಜನಿಕರು ಒತ್ತಾಯಿಸಿದ್ದಾರೆ. ಈ ಕುರಿತಂತೆ ಮೈಸೂರು ಗ್ರಾಹಕರ ಪರಿಷತ್ (ಎಂಜಿಪಿ), ಸಂಸದ ಪ್ರತಾಪ್ ಸಿಂಹ ಅವರಿಗೆ ಪತ್ರ ಬರೆದಿದ್ದು, ಎಕ್ಸ್‌ಪ್ರೆಸ್ ವೇಯಿಂದ ಮೈಸೂರು–ಬೆಂಗಳೂರು ನಗರಗಳ ನಡುವೆ ಪ್ರಯಾಣದ ಅವಧಿ ಉಳಿತಾಯವಾಗುತ್ತದೆಯಾದರೂ, ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲಿ ವಾಹನ ದಟ್ಟಣೆಯಿಂದಾಗಿ ಸಿಗ್ನಲ್ ಲೈಟ್ ಸರ್ಕಲ್ ದಾಟಲು ಹೆಚ್ಚು ಸಮಯ ಬೇಕಾಗುತ್ತದೆ ಎಂದು ತಿಳಿಸಿದೆ. ಇದು ಮೈಸೂರಿನ ಸಮಸ್ಯೆ ಮಾತ್ರವಲ್ಲ ಬೆಂಗಳೂರು ಪ್ರವೇಶ ಸ್ಥಳದಲ್ಲೂ ಇದೇ ರೀತಿಯ ಪರಿಸ್ಥಿತಿ ಇರಬಹುದು.

ಚಾಮರಾಜನಗರ, ಕೊಡಗು ಜಿಲ್ಲೆಯಲ್ಲದೆ, ನೆರೆ ರಾಜ್ಯಗಳಿಗೂ ಸಂಪರ್ಕ ಕಲ್ಪಿಸುವ ಮೈಸೂರಿನ ಮಣಿಪಾಲ್ ಆಸ್ಪತ್ರೆ ಬಳಿ ರಿಂಗ್ ರೋಡ್ ಜಂಕ್ಷನ್ ಅತೀ ಮುಖ್ಯ ಸರ್ಕಲ್ ಆಗಿರುವುದರಿಂದ ಅತೀ ಹೆಚ್ಚಿನ ಸಂಖ್ಯೆಯ ವಾಹನಗಳು ಈ ಮಾರ್ಗವೇ ತೆರಳಬೇಕಾಗಿದೆ. ಆದ್ದರಿಂದ ಎಕ್ಸ್‌ಪ್ರೆಸ್ ವೇ ಯೋಜನೆಯ ಬಹು ಮಾರ್ಗೀಯ ಸಂಚಾರ ಅಂತರ ಬದಲಾವಣೆ ಯೋಜನೆಯನ್ನೂ ಸೇರಿಸಿಕೊಂಡು ಕಾರ್ಯಗತ ಮಾಡಬೇಕೆಂದು ಗ್ರಾಹಕರ ಪರಿಷತ್ ಒತ್ತಾಯಿಸಿದೆ.

ಬೆಂಗಳೂರಿನ ನೈಸ್ ರೋಡ್ ಜಂಕ್ಷನ್, ಬನ್ನೇರುಘಟ್ಟ ಮಾರ್ಗ ನೈಸ್ ರೋಡ್ ಮತ್ತು ಕನಕಪುರ ರಸ್ತೆಯಿಂದ ನೈಸ್ ರೋಡ್‌ವರೆಗೆ ಇಂತಹ ಬಹು ಮಾರ್ಗೀಯ ಸಂಚಾರ ಅಂತರ ಯೋಜನೆಯನ್ನು ಅನುಷ್ಠಾನಗೊಳಿಸಿರುವುದರಿಂದ ಅಲ್ಲಿ ವಾಹನಗಳು ಸರಾಗವಾಗಿ ಸಂಚರಿಸುತ್ತಿವೆ. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು, ಇಂಜಿನಿಯರ್‌ಗಳು ಮೈಸೂರಿನ ಮಣಿಪಾಲ್ ಆಸ್ಪತ್ರೆ ಜಂಕ್ಷನ್‌ನಲ್ಲೂ ಈ ವ್ಯವಸ್ಥೆ ಕಲ್ಪಿಸಬೇಕೆಂದೂ ಸಲಹೆ ನೀಡಲಾಗಿದೆ.

ಬೆಂಗಳೂರಿನಿಂದ ಬರುವ ವಾಹನಗಳು ಯಾವುದೇ ಅಡೆತಡೆಗಳಿಲ್ಲದೇ ಮಣಿಪಾಲ್ ಆಸ್ಪತ್ರೆ ಜಂಕ್ಷನ್ ಬಳಿ ಎರಡೂ ಕಡೆಯ ರಿಂಗ್ ರಸ್ತೆಗೆ ಹೋಗುವಂತೆ ಮಾಡಬೇಕೆಂದು ಕೆಲವರು ಸಲಹೆ ನೀಡಿದ್ದು, ಇದರಿಂದ ಕೊಡಗು, ತಿ. ನರಸೀಪುರ, ನಂಜನಗೂಡು, ಹೆಚ್.ಡಿ. ಕೋಟೆ ಕಡೆಗೆ ಹೋಗುವ ವಾಹನಗಳು ಆ ಮಾರ್ಗ ಸಾಗಿದಲ್ಲಿ ಉಳಿದ ವಾಹನಗಳ ಸಂಚಾರ ದಟ್ಟಣೆ ಕಡಿಮೆಯಾಗಲಿದೆ ಎಂದಿದ್ದಾರೆ.

ವಿದಾಯದ ಭಾಷಣ

ನಾನು ಇಷ್ಟು ಎತ್ತರಕ್ಕೆ ಬೆಳೆಯಲು ಸಾಧ್ಯವಾಯಿತು. ಇಂತಹ ಅವಕಾಶ ಬೇರೆ ಯಾವುದೇ ನಾಯಕರಿಗೂ ದೊರೆತಿಲ್ಲ. ಇದೇ ನನ್ನ ಕೊನೆಯ ಭಾಷಣವಾಗಬಹುದು ಎಂದು ತೀವ್ರ ಭಾವುಕರಾಗಿ ಮುಂದೆ ಏನು ಮಾತನಾಡಬೇಕೆಂಬುದು ತಿಳಿಯದೇ ಸ್ವಲ್ಪ ಸಮಯ ಸುಮ್ಮನೆ ನಿಂತರು. ಈ ಸಂದರ್ಭದಲ್ಲಿ ಪ್ರತಿಪಕ್ಷದ ಕೆಲವು ಸದಸ್ಯರು ನಿಮ್ಮ ಸೇವೆ ಮತ್ತು ಹಿರಿಯತನ ಸದನಕ್ಕೆ ಬೇಕಿದೆ. ನಿಮ್ಮ ಮಾರ್ಗದರ್ಶನ ಪಕ್ಷಾತೀತ ವಾಗಿ ಎಲ್ಲಾ ಸದಸ್ಯರಿಗೂ ಅವಶ್ಯ. ನೀವು ಚುನಾವಣಾ ಕಣದಿಂದ ನಿವೃತ್ತರಾಗಬೇಡಿ ಎಂದು ಮನವಿ ಮಾಡಿದರು. ಮಧ್ಯಪ್ರವೇಶಿಸಿದ ಕಾನೂನು ಮತ್ತು ಸಂಸದೀಯ ಸಚಿವ ಜೆ.ಸಿ.ಮಾಧುಸ್ವಾಮಿ, ಯಡಿಯೂರಪ್ಪನವರದು ಇಂದು ಕೊನೆಯ ಭಾಷಣವಲ್ಲ. ನಾಳೆ ಮತ್ತೆ ಮಾತನಾಡುತ್ತಾರೆ ಎಂದು ಹೇಳಿ ಕುಳಿತರು.

ನಂತರ ತಮ್ಮ ಮಾತು ಮುಂದುವರೆಸಿದ ಯಡಿಯೂರಪ್ಪನವರು ನರೇಂದ್ರ ಮೋದಿ ಅವರು ನನಗೆ ಕೊಟ್ಟ ಗೌರವ, ಸ್ಥಾನಮಾನಕ್ಕೆ ನನ್ನ ಕೊನೆಯ ಉಸಿರು ಇರುವವರೆಗೂ ಬಿಜೆಪಿ ಕಟ್ಟಲು ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ.

ದೇವರು ಶಕ್ತಿ ಕೊಟ್ಟರೆ ಈ ಚುನಾವಣೆಯಲ್ಲದೇ ಮುಂದಿನ ಚುನಾವಣೆಯಲ್ಲೂ ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸ ಮಾಡುತ್ತೇನೆ. ಪ್ರಸಕ್ತ ಅಧಿವೇಶನ ಮುಗಿಯುತ್ತಿದ್ದಂತೆ ರಾಜ್ಯದ 224 ಕ್ಷೇತ್ರ ಸೇರಿದಂತೆ ಎಲ್ಲೆಡೆ ಪ್ರಚಾರ ಮಾಡಿ, ಬಿಜೆಪಿಯನ್ನು ಅಧಿಕಾರಕ್ಕೆ ತರುವುದಾಗಿ ಘೋಷಣೆ ಮಾಡಿದರು.

ನೀವು ಪದೇ ಪದೇ ಕ್ಷೇತ್ರ ಬದಲಾಯಿಸುತ್ತಿರುವುದೇಕೆ...!

ಸಿದ್ದರಾಮಯ್ಯರಿಗೆ ಬಿಎಸ್‌ವೈ ಅಚ್ಚರಿ ಪ್ರಶ್ನೆ

ಬೆಂಗಳೂರು, ಫೆ. 22 (ಕೆಎಂಶಿ)–ವಿಧಾನಸಭೆಯ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಪ್ರತಿ ಚುನಾವಣೆಯಲ್ಲೂ ಕ್ಷೇತ್ರ ಬದಲಾವಣೆ ಮಾಡುತ್ತಿರುವುದು ಏತಕ್ಕೆ ಎಂಬ ಪ್ರಶ್ನೆ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರಿಗೆ ಕಾಡಿದಂತಿತ್ತು. ಬಜೆಟ್ ಮೇಲಿನ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು ಸಿದ್ದರಾಮಯ್ಯ ಅವರಿಗೆ ನೇರವಾಗಿ ಪ್ರಶ್ನೆ ಮಾಡಿ, ನೀವು ಗೆದ್ದು ಬಂದ ಕ್ಷೇತ್ರಕ್ಕೆ ಮತ್ತೆ ನಿಂತುಕೊಳ್ಳುವುದಿಲ್ಲ ಎನ್ನುತ್ತೀರಲ್ಲ. ಯಾತಕ್ಕೆ ಎಂದು ಪ್ರಶ್ನಿಸಿದರು.

ನೀವು ಆ ಕ್ಷೇತ್ರ ಅಭಿವೃದ್ಧಿ ಮಾಡಲಿಲ್ಲವೇ, ಅಥವಾ ನಿಮಗೆ ಸೋಲಿನ ಭಯವೇ. ನೀವು ಅಭಿವೃದ್ಧಿ ಕೆಲಸ ಮಾಡಿದ್ದರೆ, ಆ ಕ್ಷೇತ್ರದಿಂದಲೇ ಗೆದ್ದು ಬರಬೇಕು. ಅದು ಬಿಟ್ಟು ಎಲ್ಲೋ ಓಡಿ ಹೋಗಿ ನಿಂತುಕೊಳ್ಳಬೇಡಿ ಎಂದು ಸಿದ್ದರಾಮಯ್ಯ ಅವರಿಗೆ ಕಿವಿಮಾತು ಹೇಳಿದರು. ಯಾವ ಬಾದಾಮಿ ಕ್ಷೇತ್ರದಿಂದ ನಿಂತು ಗೆದ್ದಿದ್ದಿರೋ ಅಲ್ಲಿಂದಲೇ ಸ್ಪರ್ಧೆ ಮಾಡಿ, ನಿಮಗೆ ಆತ್ಮ ವಿಶ್ವಾಸ ಇಲ್ಲದ ಕಾರಣ ಕ್ಷೇತ್ರ ಹುಡುಕಾಟ ನಡೆಸುತ್ತೀದ್ದೀರಿ. ವರುಣಾ ಬಿಟ್ಟಿರಿ, ನಂತರ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಕಣಕ್ಕಿಳಿದು ಸೋತಿದ್ದೇಕೆ ಎಂದು ಪ್ರಶ್ನಿಸಿದರು.

ಇಂದು ಮತ್ತೆ ರಾಜ್ಯ ಪ್ರವಾಸ

ಬೆಂಗಳೂರು ನಗರ ಜಿಲ್ಲೆಯಲ್ಲಿ ಪಕ್ಷ ಗಣನೀಯ ಪ್ರಮಾಣದ ಸೀಟುಗಳನ್ನು ಗಳಿಸಿದರೂ ಮತ್ತು ರಾಜರಾಜೇಶ್ವರಿನಗರ, ಯಶವಂತಪುರ, ಕೆ.ಆರ್.ಪುರಂನಲ್ಲಿ ಗೆದ್ದ ಕಾಂಗ್ರೆಸ್ ಶಾಸಕರು ಬಿಜೆಪಿ ಕಡೆ ಬಂದರೂ ಪಕ್ಷದ ಸ್ವಯಂ ಸಾಧನೆ ಈ ಬಾರಿ ಇಪ್ಪತ್ತು ಸೀಟುಗಳ ಗಡಿ ದಾಟಬೇಕು. ಬ್ಯಾಟರಾಯನಪುರ, ಜಯನಗರ, ಹೆಬ್ಬಾಳ ಸೇರಿದಂತೆ ಕಾಂಗ್ರೆಸ್ ಹಿಡಿತದಲ್ಲಿರುವ ಹಲವು ಕ್ಷೇತ್ರಗಳನ್ನು ಈ ಬಾರಿ ಗೆಲ್ಲುವ ಅವಕಾಶ ಬಿಜೆಪಿಗಿದೆ ಎಂಬುದು ಅಮಿತ್ ಷಾ ಅವರಿಗಿರುವ ಮಾಹಿತಿ ಎಂಬುದು ಮೂಲಗಳ ಹೇಳಿಕೆ. ಇದೇ ರೀತಿ ಹಳೆ ಮೈಸೂರು ಭಾಗದ ಜಿಲ್ಲೆಗಳಲ್ಲಿ ಪಕ್ಷದ ಗಳಿಕೆ ಮೂವತ್ತೈದು ಸೀಟುಗಳ ಗಡಿ ತಲುಪಿದರೆ ನಾವು ಸ್ವಯಂಬಲದ ಮೇಲೆ ಅಧಿಕಾರಕ್ಕೆ ಬರುತ್ತೇವೆ. ಇದಕ್ಕಾಗಿ ರಾಜಧಾನಿಯ ನಾಯಕರು ಕೂಡ ಕೈ ಜೋಡಿಸಬೇಕು ಎಂದು ಅಮಿತ್ ಶಾ ಗುರುವಾರದ ಸಭೆಯಲ್ಲಿ ಸಂದೇಶ ನೀಡಲಿದ್ದಾರೆ.

ಪರಿಸ್ಥಿತಿ ಹೇಗೇ ಇರಲಿ,ಆದರೆ ನೀವು ಪಕ್ಷವನ್ನು ಬೂತ್ ಮಟ್ಟದಲ್ಲಿ ಸಂಘಟಿಸಲು ಆದ್ಯತೆ ನೀಡಿ. ನೀವು ಈ ಕೆಲಸ ಮಾಡಿದರೆ ಪಕ್ಷ ಸೋತಿರುವ ಕ್ಷೇತ್ರಗಳನ್ನೂ ವಶಪಡಿಸಿಕೊಳ್ಳಬಹುದು ಎಂಬುದು ಅಮಿತ್‌ಶಾ ವಾದ. ಬೂತ್ ಮಟ್ಟದಲ್ಲಿ ಸಂಘಟನೆ ಬಲಿಷ್ಟವಾದ ಕಾರಣಕ್ಕಾಗಿಯೇ ನಾವು ಗುಜರಾತ್ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಗಳಿಸಿದೆವು. ಕರ್ನಾಟಕದಲ್ಲೂ ಪರಿಸ್ಥಿತಿಯನ್ನು ಎದುರಿಸಿ ಗೆಲ್ಲಲು,ಸ್ವಯಂಬಲದ ಮೇಲೆ ಅಧಿಕಾರ ಹಿಡಿಯಲು ಇದೇ ಮಾರ್ಗ ಅನುಸರಿಸಬೇಕು ಎಂದು ಗುರುವಾರದ ಸಭೆಯಲ್ಲಿ ಶಾಸಕರು,ಸಂಸದರು ಮತ್ತಿತರ ನಾಯಕರಿಗೆ ಅಮಿತ್ ಶಾ ಸೂಚನೆ ನೀಡಲಿದ್ದಾರೆ.

ಮೈಸೂರು ರಾಜಮನೆತನದಿಂದ ಶ್ರೀ ಚಾಮರಾಜೇಂದ್ರ ಸ್ಕೂಲ್ ಆಫ್ ಎಕ್ಸಲೆನ್ಸ್ ಮಾದರಿ ಶಾಲೆ ಆರಂಭ

● ಪ್ರಮೋದಾದೇವಿ ಒಡೆಯರ್ ಅವರಿಂದ ಚಾಲನೆ ● ಹಿಂದಿನ ಅರಸು ಬೋರ್ಡಿಂಗ್ ಶಾಲೆಗೆ ನವರೂಪ

ಮೈಸೂರು,ಫೆ.22(ಎಂಟಿವೈ)– ರಾಜರ ಆಳ್ವಿಕೆಯಲ್ಲಿ ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸೇರಿದಂತೆ ಹಲವು ಶೈಕ್ಷಣಿಕ ಸಂಸ್ಥೆಗಳನ್ನು ಸ್ಥಾಪಿಸಿದ್ದ ಮೈಸೂರು ರಾಜಮನೆತನ ಇದೀಗ 'ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್'ನಡಿ ಮೈಸೂರಲ್ಲಿ ಮೊಟ್ಟ ಮೊದಲ ಮಾದರಿ ಶಾಲೆಯನ್ನು ಆರಂಭಿಸಿದೆ.

ಮೈಸೂರಿನ ಚಾಮರಾಜ ಮೊಹಲ್ಲಾದ ಕೃಷ್ಣರಾಜ ಬುಲೆವಾರ್ಡ್ ರಸ್ತೆಯಲ್ಲಿ ಚಾಮರಾಜ ಒಡೆಯರ್ ಅವರು ನಿರ್ಮಿಸಿದ್ದ ಶತಮಾನ ಕಂಡಿರುವ ಚಾಮರಾಜ ಅರಸು ಶಾಲೆಯನ್ನು ನವೀಕರಿಸಿ 'ಶ್ರೀ ಚಾಮರಾಜೇಂದ್ರ ಸ್ಕೂಲ್ ಆಫ್ ಎಕ್ಸಲೆನ್ಸ್' ಹೆಸರಲ್ಲಿ ಮಾದರಿ ಶಾಲೆ ಆರಂಭಿಸಿದೆ. ಶಾಲಾ ಆವರಣದಲ್ಲಿ ನಡೆದ ಉದ್ಘಾಟನಾ ಕಾರ್ಯಕ್ರಮದಲ್ಲಿ ನೂತನ ಶಾಲೆಯನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು, ಅಲ್ಲದೆ 'ಜ್ಞಾನ ಮಯೋ ಭವ' ಬರಹವುಳ್ಳ ಚಾಮರಾಜ ಒಡೆಯರ್ ಭಾವಚಿತ್ರವಿರುವ ಲೋಗೋ ಬಿಡುಗಡೆ ಮಾಡಿ, ನೂತನ ಶಾಲೆಯ ಶೈಕ್ಷಣಿಕ ಚಟುವಟಿಕೆಗೆ ಚಾಲನೆ ನೀಡಿದರು.



ಇದೇ ವೇಳೆ 'ಶ್ರೀ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್' ಸಂಸ್ಥಾಪಕರೂ ಆಗಿರುವ ಪ್ರಮೋದಾದೇವಿ ಮಾತನಾಡಿ, ಮೈಸೂರು ಸಂಸ್ಥಾನದ ಮಹಾರಾಜರಾಗಿದ್ದ ಚಾಮರಾಜ ಒಡೆಯರ್ ಅವರು ತಮ್ಮ ಆಳ್ವಿಕೆಯಲ್ಲಿ ಶಿಕ್ಷಣ, ಕೃಷಿ, ಕೈಗಾರಿಕೆ ಸೇರಿದಂತೆ ಎಲ್ಲಾ ಕ್ಷೇತ್ರಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿದ್ದರು. 100 ವರ್ಷಗಳ ಹಿಂದೆಯೇ ಚಾಮರಾಜ ಒಡೆಯರ್ ಮೈಸೂರಲ್ಲಿ ವಾಣಿವಿಲಾಸ ಹಾಗೂ ಚಾಮರಾಜೇಂದ್ರ ಶಿಕ್ಷಣ ಸಂಸ್ಥೆಯನ್ನು ಹುಟ್ಟು ಹಾಕಿದ್ದರು. ಹೆಣ್ಣು ಮಕ್ಕಳಿಗೆ ಸೀಮಿತಗೊಂಡಿದ್ದ ಈ ಸಂಸ್ಥೆಗಳು ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿವೆ. ಚಾಮರಾಜ ಮೊಹಲ್ಲಾದಲ್ಲಿರುವ ಈ ಶಾಲೆಯನ್ನು ಕಾರಣಾಂತರಗಳಿಂದ ಕೆಲ ಕಾಲ ಸ್ಥಗಿತಗೊಳಿಸಲಾಗಿತ್ತು. ಪುನರ್ ನವೀಕರಿಸಿ ಶಾಲೆ ಪುನರಾರಂಭಕ್ಕೆ ನಿರ್ಧರಿಸಲಾಗಿತ್ತು. ಆದರೆ, ಕೋವಿಡ್ ಕಾರಣದಿಂದ ಎರಡು ವರ್ಷದಿಂದ ಶಾಲೆ ಪುನರಾರಂಭ ಸಾಧ್ಯವಾಗಿರಲಿಲ್ಲ ಎಂದರು.

ಹೆಣ್ಣು ಕಲಿತರೆ ಮನೆಯೇ ಕಲಿತಂತೆ: ನಾವು ಮಾಡುವ ವಿವಿಧ ಸ್ವರೂಪದ ದಾನಗಳನ್ನು ಯಾವಾಗ ಬೇಕಾದರೂ ಹಿಂಪಡೆಯಬಹುದಾಗಿದೆ. ಆದರೆ ವಿದ್ಯಾ ದಾನ ಮಾಡಿದರೆ, ಅದನ್ನು ಹಿಂಪಡೆಯಲು ಸಾಧ್ಯವಿಲ್ಲ. ನಮ್ಮ ಶಿಕ್ಷಣ ಸಂಸ್ಥೆಗಳು ಹೆಣ್ಣು ಮಕ್ಕಳ ಸಂಸ್ಥೆಯಾಗಿವೆ. ಒಂದು ಹೆಣ್ಣಿಗೆ ಶಿಕ್ಷಣ ನೀಡಿದರೆ, ಇಡೀ ಮನೆಗೆ ಶಿಕ್ಷಣ ಕೊಟ್ಟಂತೆ ಎಂಬ ಗಾದೆ ಮಾತಿದೆ. ಅಂದರೆ ಹೆಣ್ಣು ಕಲಿತರೆ ಇನ್ನಿತರರಿಗೂ ಕಲಿಸುತ್ತಾರೆ. ಈ ಹಿನ್ನೆಲೆಯಲ್ಲಿ ಶಿಕ್ಷಕರು ಗುಣಮಟ್ಟದ ಶಿಕ್ಷಣ ನೀಡಬೇಕು. 'ಶ್ರೀ ಚಾಮರಾಜೇಂದ್ರ ಸ್ಕೂಲ್ ಆಫ್ ಎಕ್ಸಲೆನ್ಸ್' ಮಾದರಿ ಶಾಲೆಯಾಗಿದ್ದು, ಎನ್‌ಇಪಿ ಶಿಕ್ಷಣ ಪದ್ಧತಿಯಡಿ ಬೋಧಿಸಲಿದೆ ಎಂದು ತಿಳಿಸಿದರು.

ನೂತನ ಶಾಲೆಯ ವೆಬ್‌ಸೈಟ್ ಲೋಕಾರ್ಪಣೆ ಮಾಡಿದ ಜಯಚಾಮರಾಜ ಅರಸು ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಾತನಾಡಿ, ಹೊಸ ರೂಪದೊಂದಿಗೆ ಕಾರ್ಯಾಚರಿಸಲಿರುವ 'ಶ್ರೀ ಚಾಮರಾಜೇಂದ್ರ ಸ್ಕೂಲ್ ಆಫ್ ಎಕ್ಸಲೆನ್ಸ್' ಶಾಲೆಯಲ್ಲಿ ಭಾರತೀಯ ಹಾಗೂ ಆಧುನಿಕ ಮಾದರಿಯ ಶಿಕ್ಷಣ ನೀಡುವ ಉದ್ದೇಶವಿದೆ. ಮಕ್ಕಳಿಗೆ ಜ್ಞಾನಾರ್ಜನೆಯ ಹಿತದೃಷ್ಟಿಯಿಂದ ಪರಿಣಾಮಕಾರಿಯಾಗಿ ಬೋಧನೆಗೆ ಕ್ರಮ ಕೈಗೊಳ್ಳಲಾಗುವುದು ಎಂದರು.


ರಾಜಮನೆತನದ ಮೈಲಿಗಲ್ಲು: ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಇತಿಹಾಸ ತಜ್ಞ ಡಾ.ಶೆಲ್ವಪಿಳ್ಳೈ ಅಯ್ಯಂಗಾರ್ ಮಾತನಾಡಿ, ಮೈಸೂರು ಅರಸರು ಈ ಹಿಂದಿನಿಂದಲೂ ಹಲವು ಪ್ರಥಮಗಳಿಗೆ ಸಾಕ್ಷಿಯಾಗಿದ್ದಾರೆ. ಅದೇ ಮಾದರಿಯಲ್ಲಿ ಇಂದು ಶಿಕ್ಷಣ ವ್ಯವಸ್ಥೆಯಲ್ಲಿ ಅಮೂಲಾಗ್ರ ಬದಲಾವಣೆಗೆ ನಾಂದಿ ಹಾಡುವ ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಸರಿಸುವ ಶಾಲೆಯನ್ನು ಆರಂಭಿಸಿ ಮತ್ತೊಂದು ಮೈಲಿಗಲ್ಲು ಸ್ಥಾಪಿಸಿದ್ದಾರೆ.

ವಿವಿ ಸ್ಥಾಪನೆಗೆ ಮನವಿ: ಮಹಾರಾಜರ ಕಾಲದಲ್ಲಿ ಸ್ಥಾಪಿತಗೊಂಡ ಮೈಸೂರು ವಿಶ್ವವಿದ್ಯಾಲಯ ಈ ಹಿಂದೆ ವಿಶಾಲ ವ್ಯಾಪ್ತಿ ಹೊಂದಿತ್ತು. ಇದೀಗ ಜಿಲ್ಲೆಗೆ ಮಾತ್ರ ಸೀಮಿತಗೊಳ್ಳುತ್ತಿದೆ. ಮಂಡ್ಯ, ಕೊಡಗು, ಚಾಮರಾಜನಗರ, ಹಾಸನಕ್ಕೂ ಪ್ರತ್ಯೇಕ ವಿವಿ ಮಂಜೂರಾಗುತ್ತಿವೆ ಇದರಿಂದ ಮೈಸೂರು ವಿವಿ ವ್ಯಾಪ್ತಿ ಕ್ಷೀಣಿಸುತ್ತಿವೆ. ಇಂದು ವಿವಿಗಳೆಂದರೆ ಶಿಕ್ಷಣ ಹಾಗೂ ಸಂಶೋಧನಾ ಚಟುವಟಿಕೆಗಳಿಗಿಂತ ಕಟ್ಟಡ ಕಾಮಗಾರಿಗಳೇ ಹೆಚ್ಚು ಎನ್ನುವಂತಾಗಿವೆ. ಪಕ್ಷಪಾತ ಅನುಸರಿಸಲಾಗುತ್ತಿದೆ. ಹೀಗಾಗಿ ಗುಣಮಟ್ಟದ ಶಿಕ್ಷಣ ಸಿಗುತ್ತಿಲ್ಲ. ಮೈಸೂರಲ್ಲಿ ರಾಜಮನೆತನದ ವತಿಯಿಂದಲೇ ಪ್ರತ್ಯೇಕ ವಿಶ್ವವಿದ್ಯಾನಿಲಯ ಸ್ಥಾಪಿಸುವಂತೆ ಮನವಿ ಮಾಡುತ್ತೇನೆ. ಎಲ್ಲಾ ವಿಷಯಗಳ ಬೋಧನೆ ಮಾಡದೇ ಇದ್ದರೂ, ಆಯ್ದ ಕೆಲವು ವಿಷಯಗಳನ್ನು ಒಳಗೊಂಡಂತೆ ವಿವಿ ಸ್ಥಾಪಿಸುವಂತೆ ಕೋರಿದರು.

ಕಾರ್ಯಕ್ರಮದಲ್ಲಿ ಡಿಡಿಪಿಐ ರಾಮಚಂದ್ರ ರಾಜೇ ಅರಸ್, ಟ್ರಸ್ಟ್‌ನ ಕಾರ್ಯದರ್ಶಿ ಮಹೇಶ್ ಎನ್. ಅರಸ್, ಭಾರತೀ ಶ್ರೀಧರ್ ರಾಜೇ ಅರಸ್, ಪದ್ಮಶ್ರೀ ಅರಸ್ ಇದ್ದರು.

ವಿಶೇಷಚೇತನರ ಶೇ.5ರಷ್ಟು ಅನುದಾನ ಸಮರ್ಪಕ ಬಳಕೆಯಾಗದ ಆರೋಪ

ಪಾಲಿಕೆ ಎದುರು ವಿಶೇಷಚೇತನರ ಅನಿರ್ಷ್ಟಾವಧಿ ಪ್ರತಿಭಟನೆ



ಮೈಸೂರು,ಫೆ22(ಪಿಎಂ)– ಮೈಸೂರು ಮಹಾನಗರ ಪಾಲಿಕೆಯಲ್ಲಿ ವಿಶೇಷ ಚೇತನರ ಶ್ರೇಯೋಭಿವೃದ್ಧಿಗೆ ಮೀಸಲಿಟ್ಟ ಶೇ.5ರಷ್ಟು ಅನುದಾನವು ಸಮರ್ಪಕವಾಗಿ ಬಳಕೆಯಾಗುತ್ತಿಲ್ಲ ಎಂದು ಆರೋಪಿಸಿ ಹಾಗೂ ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಕರ್ನಾಟಕ ರಾಜ್ಯ ಅಂಗವಿಕಲರ ವೇದಿಕೆ ನೇತೃತ್ವದಲ್ಲಿ ವಿಶೇಷಚೇತನರು ಬುಧವಾರ ಅನಿರ್ಷ್ಟಾವಧಿ ಪ್ರತಿಭಟನೆ ಆರಂಭಿಸಿದರು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಮಹಾನಗರ ಪಾಲಿಕೆ ಮುಖ್ಯ ಕಚೇರಿ ಎದುರು ಇಂದು ಬೆಳಗ್ಗೆಯಿಂದ ಸಂಜೆವರೆಗೆ ಪ್ರತಿಭಟನೆ ನಡೆಸಿದ ವಿಶೇಷಚೇತನರು, ತಮ್ಮ ಬೇಡಿಕೆ ಈಡೇರುವವರೆಗೂ ಪ್ರತಿದಿನ ಅನಿಷ್ಟಾವಧಿ ಪ್ರತಿಭಟನೆ ನಡೆಸಲು ಮುಂದಾಗಿದ್ದಾರೆ.

ಶೇ.5ರಷ್ಟು ಅನುದಾನ ಸಮರ್ಪಕವಾಗಿ ಬಳಕೆಯಾಗುತ್ತಿಲ್ಲದ ಬಗ್ಗೆ ಹಲವು ಬಾರಿ ಮನವಿ ಸಲ್ಲಿಸಿದರೂ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ. ಇದಕ್ಕೆ ಮೂಲ ಕಾರಣ ಸದರಿ ಅನುದಾನದ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಪಾಲಿಕೆ ಅಧಿಕಾರಿ–ಸಿಬ್ಬಂದಿ ವರ್ಗದ ನಿರ್ಲಕ್ಷ್ಯವಾಗಿದೆ. ಸದರಿ ವಿಭಾಗವು ಪಾಲಿಕೆಯ ಹೊಸ ಕಟ್ಟಡದ ಮೊದಲನೇ ಮಹಡಿಯಲ್ಲಿದ್ದು, ಇದನ್ನು ಶೀಘ್ರ ನೆಲ ಮಹಡಿಗೆ ಸ್ಥಳಾಂತರ ಮಾಡಬೇಕು ಎಂದು ಒತ್ತಾಯಿಸಿದರು.

ಪಾಲಿಕೆ ಮುಖ್ಯ ಕಚೇರಿ ಮತ್ತು ವಲಯ ಕಚೇರಿಗಳಲ್ಲಿ ಶೇ.5ರಷ್ಟು ಅನುದಾನದಿಂದ ದೊರೆಯುವ ಸವಲತ್ತುಗಳ ಬಗ್ಗೆ ಮಾಹಿತಿ ಫಲಕ ಅಳವಡಿಸಬೇಕು. ಶೇ.5ರಷ್ಟು ಅನುದಾನದಲ್ಲಿ ಒಬ್ಬ ವಿಶೇಷ ಚೇತನನಿಗೆ ಒಂದೇ ಬಾರಿ ಸವಲತ್ತು ಎಂದು ಅಧಿಕಾರಿಗಳು ಹಿಂಬರಹ ನೀಡುತ್ತಿದ್ದು, ಇದು ಸರಿಯಲ್ಲ. ಅಲ್ಲದೆ, ವಿಶೇಷಚೇತರ ಜೊತೆಗೆ ಅಧಿಕಾರಿ–ಸಿಬ್ಬಂದಿ ವರ್ಗ ಸಂಯಮದಿಂದ ವರ್ತಿಸುತ್ತಿಲ್ಲ. ಮೈಸೂರು ನಗರದಲ್ಲಿ ಹಲವು ವಿಶೇಷಚೇತನರು ಸರ್ಕಾರ ನೀಡಿರುವ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು ಪಾಲಿಕೆಯಿಂದ ಎನ್‌ಓಸಿ ಪಡೆದು ವಹಿವಾಟು ನಡೆಸುತ್ತಿದ್ದಾರೆ. ಆದರೆ ಕೆಲವು ಅಧಿಕಾರಿಗಳು ವಹಿವಾಟು ನಡೆಸಲು ಅನಗತ್ಯವಾಗಿ ತೊಂದರೆ ನೀಡುತ್ತಿದ್ದು, ಇದಕ್ಕೆ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಆಶ್ರಯ ಮನೆ ಯೋಜನೆಯಡಿ ವಿಶೇಷ ಚೇತನರಿಗೆ ಸವಲತ್ತು ದೊರೆಯುತ್ತಿಲ್ಲ. ಈ ಕಾರಣದಿಂದ ವಿಶೇಷಚೇತನರಿಗೆ ಪ್ರತ್ಯೇಕ ಕಾಲೋನಿ ನಿರ್ಮಿಸಬೇಕು. ಈ ಸಂಬಂಧ ಶೀಘ್ರ ಸರ್ಕಾರಕ್ಕೆ ಪತ್ರ ಬರೆಯಬೇಕು. ವಿಶೇಷಚೇತರಿಗೆ ಬ್ಯಾಟರಿ ವಾಹನಗಳನ್ನು ನೀಡಲು ಟೆಂಡರ್ ಕರೆದಿದ್ದು, ಇದನ್ನು ರದ್ದುಪಡಿಸಿ ಪೆಟ್ರೋಲ್ ವಾಹನ ನೀಡಲು ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಇದೇ ವೇಳೆ ಸ್ಥಳಕ್ಕೆ ಭೇಟಿ ನೀಡಿದ ಮೇಯರ್ ಶಿವಕುಮಾರ್ ಅವರಿಗೆ ಬೇಡಿಕೆ ಈಡೇರಿಸುವಂತೆ ಕೋರಿ ಮನವಿ ಪತ್ರ ಸಲ್ಲಿಸಲಾಯಿತು. ವೇದಿಕೆ ಅಧ್ಯಕ್ಷ ಎಂ.ಪ್ರಭುಸ್ವಾಮಿ, ಕಾರ್ಯದರ್ಶಿ ದಿಲೀಪ್‌ಕುಮಾರ್, ವೇದಿಕೆ ಮುಖಂಡರಾದ ಟಿ.ನಾಗರಾಜು, ರೆಹಮತ್ ಉಲ್ಲಾ, ಸೈಯದ್ ಉಸ್ಮಾನ್, ಜಾಕೀರ್ ಪಾಷ, ಸುನಿಲ್, ಕಿರಣ್, ಶರಣ್, ಚೌಡಯ್ಯ, ಕುಮಾರ್, ಮಹದೇವಮ್ಮ, ವಸಂತಲಕ್ಷ್ಮೀ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಹಿರಿಯ ನಾಗರಿಕರ ಮುಡಾ ನಿವೇಶನ ಕಬಳಿಕೆ ಆರೋಪ ; ಸೇನಾ ಪಡೆ ಪ್ರತಿಭಟನೆ



ಮೈಸೂರು,ಫೆ22(ಪಿಎಂ)– ನಕಲಿ ದಾಖಲೆ ಸೃಷ್ಟಿಸಿ ಹಿರಿಯ ನಾಗರಿಕರೊಬ್ಬರ ಮುಡಾ ನಿವೇಶನ ಕಬಳಿಸಲಾಗಿದೆ ಎಂದು ಆರೋಪಿಸಿ ಕರ್ನಾಟಕ ಸೇನಾ ಪಡೆ ವತಿಯಿಂದ ಬುಧವಾರ ಪ್ರತಿಭಟನೆ ನಡೆಸಲಾಯಿತು. ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಮುಡಾ (ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ) ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಹಿರಿಯ ನಾಗರಿಕರಾದ 83 ವರ್ಷ ಇಳಿ ವಯಸ್ಸಿನ ಕೆ.ಎನ್.ಶಿವಶಂಕರ್‌ರಾವ್ ಅವರಿಗೆ 1977ರ ಮೇ 13ರಂದು ಅಂದಿನ ಸಿಐಟಿಬಿಯಿಂದ ಕೆಸರೆ 2ನೇ ಹಂತದಲ್ಲಿ ನಿವೇಶನ (ಸೈಟ್ ನಂ.412, 40X60 ವಿಸ್ತೀರ್ಣ) ಮಂಜೂರಾಗಿದೆ. ನಿವೇಶನದ ಸ್ವಾಧೀನ ಪತ್ರವೂ ಅವರ ಬಳಿ ಇದೆ. ಅವರ ನಿವೇಶನವನ್ನು ಕಬಳಿಸಲಾಗಿದೆ ಎಂದು ಆರೋಪಿಸಿದರು.

ಆರ್ಥಿಕ ಮುಗ್ಗಟ್ಟಿನ ಹಿನ್ನೆಲೆಯಲ್ಲಿ ಸದರಿ ನಿವೇಶನ ಮಾರಾಟ ಮಾಡಲು ಉದ್ದೇಶಿಸಿದ ಕೆ.ಎನ್.ಶಿವಶಂಕರ್‌ರಾವ್, 2022ರ ನ.22ರಂದು ಟೈಟಲ್ ಡೀಡ್ ಪಡೆಯಲು ಮುಡಾಗೆ ಅರ್ಜಿ ಸಲ್ಲಿಸಿದ್ದರು. ಬಳಿಕ ಇಸಿ ಪಡೆದ ಅವರಿಗೆ ಗಾಬರಿಯಾಯಿತು. ಕಾರಣ ನಕಲಿ ಶಿವಶಂಕರರಾವ್ ಹೆಸರಿನಲ್ಲಿ ಮಹಮದ್ ತಬ್ರೇಜ್ ಎಂಬ ಹೆಸರಿನ ವ್ಯಕ್ತಿಯೊಬ್ಬ ಜಿಪಿಎ ರಿಜಿಸ್ಟರ್ ಮಾಡಿಕೊಂಡು ರಾಧಾ ಎಂಬುವರಿಗೆ ಸದರಿ ನಿವೇಶನ ಮಾರಾಟ ಮಾಡಿರುವುದು ಗೊತ್ತಾಗಿ ಶಿವಶಂಕರ್‌ರಾವ್ ಆತಂಕಗೊಂಡರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆ.ಎನ್.ಶಿವಶಂಕರ್‌ರಾವ್, ಯಾವುದೇ ಪತ್ರಗಳಿಗೆ ಸಹಿ ಹಾಕಿಲ್ಲ. ಮಹಮ್ಮದ್ ತಬ್ರೇಜ್ ಎಂಬ ವ್ಯಕ್ತಿಯೇ ಇವರಿಗೆ ಗೊತ್ತಿಲ್ಲ. ಅಲ್ಲದೆ, ಅಂದು ಸಿಐಟಿಬಿಯಿಂದ ನಿವೇಶನ ಮಂಜೂರಾಗಿರುವ ಸಂಬಂಧ ಎಲ್ಲಾ ಮೂಲ ಪತ್ರಗಳು ಈಗಲೂ ಇವರ ಬಳಿಯೇ ಇವೆ. 2019ರ ಆಗಸ್ಟ್‌ನಲ್ಲಿ ಯಾರೋ ವ್ಯಕ್ತಿ ಮಾಹಿತಿ ಹಕ್ಕಿನಡಿ ಇವರ ನಿವೇಶನದ ಎಲ್ಲಾ ಮೂಲ ದಾಖಲೆಗಳ ನಕಲು ಪ್ರತಿಗಳನ್ನು ಮುಡಾದಿಂದ ಪಡೆದಿದ್ದಾರೆ. ಅಂದು ಮುಡಾ ರೆಕಾರ್ಡ್ ರೂಮ್‌ನಿಂದ ಹೋದ ಇವರ ನಿವೇಶನದ ಕಡತ ಈವರೆಗೂ ಸಿಕ್ಕಿಲ್ಲ. ಇವರು ಟೈಟಲ್ ಡೀಡ್ ಪಡೆಯಲು ಅರ್ಜಿ ಸಲ್ಲಿಸಿ, 3 ತಿಂಗಳಾದರೂ ಮುಡಾದಿಂದ ಇನ್ನೂ ಟೈಟಲ್ ಡೀಡ್ ನೀಡಿಲ್ಲ ಎಂದು ಕಿಡಿಕಾರಿದರು. ಮುಡಾದಲ್ಲಿರುವ ಕೆಲವು ಅಧಿಕಾರಿ, ಸಿಬ್ಬಂದಿ ಈ ಅಕ್ರಮದಲ್ಲಿ ಭಾಗಿಯಾಗಿರುವ ಶಂಕೆ ಬಲವಾಗಿದೆ. ಈ ಸಂಬಂಧ ಎಫ್‌ಐಆರ್ ದಾಖಲಿಸಿ ತನಿಖೆಗೆ ಆದೇಶಿಸಬೇಕು. ಕೆ.ಎನ್.ಶಿವಶಂಕರ್‌ರಾವ್ ಅವರಿಗೆ ನ್ಯಾಯ ಕೊಡಿಸದಿದ್ದರೆ ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್ ಗೌಡ, ಮುಡಾ ನಿವೃತ್ತ ಇಂಜಿನಿಯರ್ ನಟರಾಜ್, ಕೆ.ಎನ್.ಶಿವಶಂಕರ್‌ರಾವ್ ಅವರ ಸಹೋದರನ ಪುತ್ರ ಲಕ್ಷ್ಮೀನಾರಾಯಣ್, ಮುಖಂಡರಾದ ಪ್ರಜೀಶ್, ಸಿ.ಹೆಚ್.ಕೃಷ್ಣಯ್ಯ, ಪ್ರಭುಶಂಕರ್, ವಿಜಯೇಂದ್ರ, ನೇಹಾ, ರಾಮಣ್ಣ, ದರ್ಶನ್‌ಗೌಡ, ಅನಿಲ್, ಗೊರೂರು ಮಲ್ಲೇಶ್, ಸಿದ್ದರಾಜು, ಪ್ರದೀಪ್, ದಿಲೀಪ್, ಮಿನಿ ಬಂಗಾರಪ್ಪ, ನಂದಕುಮಾರ್, ಬಸವರಾಜು, ಗಣೇಶ್ ಪ್ರಸಾದ್, ರವಿ ನಾಯಕ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.



ಮೈಸೂರಿನ ಗೋಕುಲಂನಲ್ಲಿರುವ ಶ್ರೀಕೃಷ್ಣ ಗಾನ ಸಭಾದ 21ನೇ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಬುಧವಾರ ಆಳ್ವಾರ್ ಭವನದಲ್ಲಿ ವಿದ್ವಾನ್ ಪಿಟೀಲ್ ಚೌಡಯ್ಯ ಜಯಂತಿ ಪ್ರಯುಕ್ತ ದ್ವಂದ್ವ ಪಿಟೀಲು ವಾದನ ಏರ್ಪಡಿಸಲಾಗಿತ್ತು. ವಿದ್ವಾನ್ ನಾಗರಾಜು ಮೈಸೂರು ಮತ್ತು ವಿದ್ವಾನ್ ಕಾರ್ತಿಕ್ ಮೈಸೂರು ದ್ವಂದ್ವ ಪಿಟೀಲು ವಾದನ ನಡೆಸಿಕೊಟ್ಟರು. ಅವರಿಗೆ ವಿದ್ವಾನ್ ಬಿ.ಸಿ.ಮಂಜುನಾಥ್ ಮೃದಂಗ ಮತ್ತು ಶರತ್ ಕೌಶಿಕ್ ಘಾಟ ಮೂಲಕ ಸಾಥ್ ನೀಡಿದರು. ಈ ವೇಳೆ ಶ್ರೀ ಕೃಷ್ಣಗಾನಸಭಾದ ಅಧ್ಯಕ್ಷ ಬಿ.ಎಸ್.ಶ್ರೀಧರರಾಜ ಅರಸು, ಭಾಮಿ ಕನ್‌ಸ್ಟ್ರಕ್ಷನ್ ವ್ಯವಸ್ಥಾಪಕ ನಿರ್ದೇಶಕ ರಾಘವೇಂದ್ರಪ್ರಸಾದ್ ಉಪಸ್ಥಿತರಿದ್ದರು.

ಜಾತಿ ವ್ಯವಸ್ಥೆ ಕೇವಲ ದಲಿತರ ಸಮಸ್ಯೆಯಲ್ಲ; ಮೇಲ್ವರ್ಗದವರು ಇದರ ವಿರುದ್ಧ ಸೊಲ್ಲೆತ್ತಬೇಕು

● ವಿಮರ್ಶಕ ಪ್ರೊ. ಒ.ಎಲ್.ನಾಗಭೂಷಣ್ ಅಭಿಮತ ● ದಲಿತ ಚಳವಳಿ ರಾಜಕೀಯ ಅಧಿಕಾರದ ಹಿಂದೆ ಬೀಳಬಾರದು

ಮೈಸೂರು,ಫೆ.22(ಎಂಟಿವೈ)– ಸಮಾಜದಲ್ಲಿ ಬಲವಾಗಿ ಬೇರೂರಿರುವ ಜಾತಿ ವ್ಯವಸ್ಥೆ ಕೇವಲ ದಲಿತರ ಸಮಸ್ಯೆಯಲ್ಲ, ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲು ಮೇಲ್ವರ್ಗದವರು ಮಾತನಾಡುವ ಅವಶ್ಯಕತೆ ಇದೆ ಎಂದು ವಿಮರ್ಶಕ ಪ್ರೊ.ಒ.ಎಲ್.ನಾಗಭೂಷಣ್ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ಬಿಎಂಶ್ರೀ ಸಭಾಂಗಣದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಭಾರತೀಯ ವಿದ್ಯಾರ್ಥಿ ಸಂಘದ ಸಂಯುಕ್ತಾಶ್ರಯದಲ್ಲಿ ನಡೆದ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಡಾ.ಮೂಡ್ನಾಕೂಡು ಚಿನ್ನಸ್ವಾಮಿ ಅವರ ಸಾಹಿತ್ಯ ಗೋಷ್ಠಿ ಮತ್ತು ಸನ್ಮಾನ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಸಂದರ್ಭದಲ್ಲಿ ಕಾಡುತ್ತಿರುವ ಜಾತಿ ವ್ಯವಸ್ಥೆ ದಲಿತರ ಸಮಸ್ಯೆ ಅಲ್ಲದೆ, ಮೇಲ್ಜಾತಿಗಳ ಸಮಸ್ಯೆಯೂ ಆಗಿದೆ. ಜಾತಿ ವಿನಾಶದ ಬಗ್ಗೆ ದಲಿತರು ಮಾತನಾಡುವುದಕ್ಕಿಂತ, ಮೇಲ್ವರ್ಗದವರು ಮಾತನಾಡಬೇಕಾಗಿದೆ. ಸಮಾಜದಲ್ಲಿ ಹಲವರು ಬಸವಣ್ಣನವರ ಬಗ್ಗೆ ಮಾತನಾಡುತ್ತಾರೆ. ಆದರೆ ಕೆಲವರು ಆಡುವ ಮಾತೇ ಬೇರೆಯಾಗಿರುತ್ತದೆ. ಮನುವಾದ ಅನುಸರಿಸುತ್ತಾರೆ. ಮನಸ್ಸಿನಲ್ಲಿ ಜಾತಿ ಆಳವಾಗಿರುವುದರಿಂದ ಕವಿಗಳನ್ನೂ ಜಾತಿ ಮತ್ತು ಧರ್ಮದ ಆಧಾರದ ಮೇಲೆ ವಿಂಗಡಣೆ ಮಾಡುವ ದುಸ್ಥಿತಿ ನೋಡುವಂತಾಗಿದೆ ಎಂದು ವಿಷಾದಿಸಿದರು.



ಕೆಲವರು ಒಂದು ಭಾಷೆ, ಒಂದು ಧರ್ಮ ಎಂದು ಮಾತನಾಡುವ ಮೂಲಕ ಜನರನ್ನು ದಿಕ್ಕು ತಪ್ಪಿಸುವ ಸಂಚು ನಡೆಸುತ್ತಿದ್ದಾರೆ. ಆದರೆ, ಅವರೆಲ್ಲಾ ಬಾಯಿ ಮಾತಿಗಷ್ಟೇ ದೇಶದಲ್ಲಿ ಜಾತಿ ವ್ಯವಸ್ಥೆಯೇ ಇಲ್ಲ ಎನ್ನುತ್ತಾರೆ. ನಮ್ಮ ಜಾತಿಯವನಲ್ಲ ಎಂಬ ಕಾರಣಕ್ಕಾಗಿ ಅನೇಕರು ಸಾಹಿತಿಗಳನ್ನು ತಿರಸ್ಕಾರದಿಂದ ನೋಡಿರುವ ಸಾಕಷ್ಟು ಉದಾಹರಣೆ ನಮ್ಮ ಮುಂದೆ ಇದೆ. ಜಾತಿ ವ್ಯವಸ್ಥೆ ಇರುವುದಕ್ಕೆ ಸಮಾಜದಲ್ಲಿ ಅನ್ಯಾಯ, ಅಸಮಾನತೆ ಇದೆ. ಕ್ಷೌರಿಕರನ್ನು ಅಸ್ಪೃಶ್ಯರಿಗಿಂತಲೂ ಅವಮಾನವೀಯವಾಗಿ ಕಾಣಲಾಗುತ್ತಿದೆ. ಅವರನ್ನು ಮುಟ್ಟಿಸಿಕೊಳ್ಳುವುದಕ್ಕೂ ನಿರಾಕರಿಸುತ್ತಾರೆ. ಇಂತಹ ಕೆಟ್ಟ ಸಂಗತಿಗಳು ಅನೇಕರ ಕಣ್ಣಿಗೆ ಕಾಣುತ್ತಿಲ್ಲ ಎಂದು ಕಿಡಿಕಾರಿದರು.

ದಲಿತ ಚಳವಳಿ ರಾಜಕೀಯ ಅಧಿಕಾರದ ಹಿಂದೆ ಬೀಳಬಾರದು. ಅದು ಬುದ್ಧನ ಮೈತ್ರಿ ಮತ್ತು ಕರುಣೆಯನ್ನು ಪಾಲಿಸುವಂತೆ ಜನರನ್ನು ಪ್ರೇರೇಪಿಸುವ ಶಕ್ತಿಯಾಗಬೇಕು. ಆ ನಿಟ್ಟಿನಲ್ಲಿ ದಲಿತ ಹೋರಾಟದಲ್ಲಿ ತೊಡಗಿಸಿ ಕೊಂಡಿರುವವರ ನಡೆ ಇರಬೇಕು ಎಂದು ಸಲಹೆ ನೀಡಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಚಿನ್ನಸ್ವಾಮಿ ಅವರ 'ನಾನೊಂದು ಮರವಾಗಿದ್ದರೆ' ಪದ್ಯ ಸರಳವಾಗಿದ್ದರೂ, ಮರದ ಮೂಲಕ ಸಮಾಜದ ಜಾತಿ ಕ್ರೌರ್ಯವನ್ನು ಎತ್ತಿ ತೋರಿಸಿದ್ದಾರೆ. ಯಾರೊಬ್ಬರ ಅನುಭವಗಳು ದಾಖಲೆಗೊಳ್ಳದೆ ಇರಬಾರದು. ಸಂವೇದನಗಳನ್ನು ಹಿಡಿದು ಭಾಷೆಯಲ್ಲಿ ಕಟ್ಟಿ ದಾಖಲಿಸುವ ಕೆಲಸ ಮಾಡಿದರೆ ಅದು ಬಹಳ ದೊಡ್ಡ ಕ್ರಾಂತಿಗೆ ಕಾರಣವಾಗುತ್ತದೆ. ಬುದ್ಧನ ಬೆಳಕಿನಲ್ಲಿ ನಮ್ಮ ಕಾಲಘಟ್ಟವನ್ನು ಅರ್ಥ ಮಾಡಕೊಳ್ಳುವುದು ಹೇಗೆ ಎಂಬುದನ್ನು ತಮ್ಮ ಕೃತಿಗಳಲ್ಲಿ ತಿಳಿಸಿದ್ದಾರೆ ಎಂದು ಹೇಳಿದರು.

ಲೇಖಕ ಪ್ರೊ.ಸಿ.ನಾಗಣ್ಣ ಮಾತನಾಡಿ, ಮೂಡ್ನಾಕೂಡು ಚಿನ್ನಸ್ವಾಮಿ ಅವರ ಆತ್ಮ ಚರಿತ್ರೆಯಾದ ನೆನಪಿನ ಹಕ್ಕಿ ಹಾರಲು ಬಿಟ್ಟು ಎಂಬ ಪುಸ್ತಕದಲ್ಲಿ ಒಬ್ಬ ಕವಿ ಹೇಗೆ ರೂಪುಗೊಳ್ಳುತ್ತಾನೆ ಎಂಬುದು ಅದರಲ್ಲಿ ಅದ್ಭುತವಾಗಿ ರಚಿಸಿದ್ದಾರೆ. ಚಿನ್ನಸ್ವಾಮಿ ಅವರ ಸಾಹಿತ್ಯ ಕಾವ್ಯ ಪ್ರಕಾಶಮಾನವಾದದ್ದು ಮತ್ತು ಸಾಹಿತ್ಯ ಲೋಕದಲ್ಲಿ ಅವರ ಬರವಣಿಗೆ ವಿಶಿಷ್ಟವಾದದ್ದು ಎಂದು ಸಾಹಿತಿ ಯು.ಆರ್ ಅನಂತಮೂರ್ತಿ ವಿಶ್ಲೇಷಿಸಿದ್ದಾರೆ. ನೊಂದವರ ನೋವನ್ನು ತಮ್ಮ ಸಾಹಿತ್ಯದ ಮೂಲಕ ಜಗತ್ತಿಗೆ ಪರಿಚಯಿಸಿದ್ದಾರೆ. ಇವರ ಬರವಣಿಗೆ ಬೇಂದ್ರೆ ಮತ್ತು ದೇವನೂರ ಮಹಾದೇವ ಸಾಹಿತ್ಯದಂತಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಡಾ.ಮೂಡ್ನಕೂಡು ಚಿನ್ನಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಮುಖ್ಯಸ್ಥೆ ವಿಜಯ ಕುಮಾರಿ ಎಸ್.ಕರಿಕಲ್.ಎಸ್, ಬಿವಿಎಸ್ ವಿದ್ಯಾರ್ಥಿ ಸಂಘಟನೆಯ ಹೂವಿನ ಸಿದ್ದು, ಮೈಸೂರು ವಿಶ್ವವಿದ್ಯಾನಿಯದ ಸಂಶೋಧಕರ ಸಂಘದ ಅಧ್ಯಕ್ಷ ನಟರಾಜ ಶಿವಣ್ಣ ಸೇರಿದಂತೆ ಇನ್ನಿತರರು ಇದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

WANTED
- Receptionist-Male
- E Marketing with good typing speed-Female
- Typist -Female
- House Keeping Staff-Male/Female

Hardinge Circle, Mysuru

9739786223

SITES FOR SALE
MUDA Approved, Cauvery Enclave 40x60, 30x40, 20x30 In between Manipal & NH Hospital LOAN AVAILABLE from all major Banks.

8971119292/9611223444

ಅಶ್ವಿನಿ ಕಲ್ಯಾಣ ಮಂಟಪ
ಶ್ರೀರಾಂಪುರ 2ನೇ ಹಂತ, ಮಾನಂದವಾಡಿ ರಸ್ತೆ, ಮೈಸೂರು.



ಆತ್ಯಾಕರ್ಷಕವಾದ ಕಲ್ಯಾಣ ಮಂಟಪ, ವಿಶಾಲವಾದ ಕಾರ್ ಪಾರ್ಕಿಂಗ್, ಎಲ್ಲಾ ಸೌಲಭ್ಯಗಳೊಂದಿಗೆ ಮದುವೆ, ರಿಸೆಪ್ಷನ್, ಉಪನಯನ, ಹಸೆಮಣೆ ಶಾಸ್ತ್ರ ಹಾಗೂ ಇತರ ಶುಭ ಸಮಾರಂಭಗಳಿಗೆ ರಿಯಾಯಿತಿ ದರದಲ್ಲಿ ದೊರೆಯುತ್ತದೆ. ಇಂದೇ ಭೇಟಿ ಕೊಡಿ. ರೂಂಗಳು ಬಾಡಿಗೆಗೆ ದೊರೆಯುತ್ತದೆ.

9902647554, 9448500601

ವಿಕ್ಕಿಸ್ಪೋರ್ಟ್ಸ್ ವೇರ್ಸ್
ಕೆ.ಜಿ.ಕೊಪ್ಪಲ್, ಮೈಸೂರು. ನಮ್ಮಲ್ಲಿ ಎಲ್ಲಾ ವಿಧವಾದ ಸ್ಪೋರ್ಟ್ಸ್ ವೇರ್‌ಗಳನ್ನು ಅಳತೆ ತಗೆದುಕೊಂಡು ಹೊಲೆದು ಕೊಡುತ್ತೇವೆ, ರೆಡಿಮೇಡ್ ಕೂಡ ದೊರೆಯುತ್ತದೆ, ಬಟ್ಟೆಗಳನ್ನು ಕಂತುಗಳಲ್ಲಿ ಕೊಡುತ್ತೇವೆ

TECHNO SPORT ಬ್ರಾಂಡ್ ಬಟ್ಟೆಗಳು ಇವೆ

ಮೊ: 8088812221

ಬೇಕಾಗಿದೆ
ಮೈಸೂರಿನ ರಿಂಗ್‌ರಸ್ತೆಯಲ್ಲಿ ಪೆಟ್ರೋಲ್ ಬಂಕ್ ಮಾಡಲು 10000 Sqft ನಿವೇಶನ ಬಾಡಿಗೆಗೆ ಬೇಕಾಗಿದೆ

9902754149

ಬೇಕಾಗಿದ್ದಾರೆ
ಮೈಸೂರಿನ ನಜರ್‌ಬಾದ್ ನಲ್ಲಿರುವ ಪೆಟ್ರೋಲ್ ಬಂಕಿನಲ್ಲಿ ಕೆಲಸ ಮಾಡಲು ಹುಡುಗ/ ಹುಡುಗಿಯರು ಬೇಕಾಗಿದ್ದಾರೆ ಸಂಬಳ: 12000

9380232259

ಖಾಸಗಿ ಶಾಲೆ ನಿರ್ವಹಿಸಲು ಪಾಲುದಾರರು ಬೇಕಾಗಿದ್ದಾರೆ
8147472526
9448071449

ಬೇಕಾಗಿದ್ದಾರೆ
ಶ್ರೀ ರಾಯಲ್ ವಾರಿಯರ್ ಬೇಕರಿ ಕೌಂಟರ್‌ಗೆ ಸೇಲ್ಸ್‌ಮ್ಯಾನ್‌ಗಳು ಬೇಕಾಗಿದ್ದಾರೆ. ಉತ್ತಮ ಸಂಬಳದೊಂದಿಗೆ ಊಟ, ವಸತಿ ಉಚಿತವಾಗಿ ದೊರಕುತ್ತದೆ ಈಗಲೇ ಸಂಪರ್ಕಿಸಿ:

9019876412
8431458760

Life Partner ಆಗಲು ಶ್ರೀಮಂತ ವರನಿಗೆ ವಧು ಬೇಕಾಗಿದ್ದಾರೆ
ಲಿಂಗಾಯತ, Age 47, 5.2/BE, Annual Income 75 Lakhs & well settled, independent ಇರುವಂತಹ ವರನಿಗೆ ಯಾವುದೇ ಜಾತಿಯ ಅಭ್ಯಂತರವಿಲ್ಲದೆ, ವಿಧವೆ, ವಿಚ್ಛೇದಿತೆ, ವಿದ್ಯಾವಂತೆ ವಧು ಬೇಕಾಗಿದ್ದಾರೆ (ಬಡವರಾದರೂ ಪರವಾಗಿಲ್ಲ)

ಬೆಂಗಳೂರು: 9742458242

ಬೇಕಾಗಿದ್ದಾರೆ
ಜ್ಯೂಸ್ ಮಿಲ್ಕ್‌ಶೇಕ್ ತಯಾರು ಮಾಡಲು ಹುಡುಗರು ಬೇಕಾಗಿದ್ದಾರೆ ಅನುಭವ ಇರುವರಿಗೆ ಆದ್ಯತೆ. (ಕುವೆಂಪುನಗರ ಸುತ್ತ ಮುತ್ತ ವಾಸಿಗಳಿಗೆ ಆದ್ಯತೆ) ಸಂಪರ್ಕಿಸಿ:

9448054151

ತಕ್ಷಣ ಬೇಕಾಗಿದ್ದಾರೆ
SSLC, PUC, ITI, Degree ಪಾಸ್/ಫೇಲ್ ಮತ್ತು ಸೆಕ್ಯೂರಿಟಿ ಸೂಪರ್‌ವೈಸರ್ ಮತ್ತು ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ. ಸ್ಥಳ- ಬನ್ನಿಮಂಟಪ ಉತ್ತಮ ಸಂಬಳದೊಂದಿಗೆ + PF. ESI. & ಕ್ಯಾಂಟೀನ್ ಸೌಲಭ್ಯವಿರುತ್ತದೆ. ಆಕರ್ಷಕ ಮಾಸಿಕ ವೇತನ

ಆಸಕ್ತ ಅಭ್ಯರ್ಥಿಗಳು ತಮ್ಮ ಎಲ್ಲಾ ದಾಖಲೆಗಳೊಂದಿಗೆ ಸಂಪರ್ಕಿಸಿ

7975930656, 9480370067, 9900747093

BOOKING START
ಕೇಶವಮೂರ್ತಿ ಬಡಾವಣೆ

ಶ್ರೀನಗರ ರೈಲ್ವೆ ಗೇಟ್ ಹಿಂಬಾಗದ ರಸ್ತೆ, ಕೋವಿಡ್ ಸೆಂಟರ್ ಹತ್ತಿರ, ಗೂರೂರು, ಕಸಬಾ ಹೋಬಳಿ, ಮೈಸೂರು ತಾಲ್ಲೂಕು.

just 3.5 KM jp ragar ringroad

30x40, 30x50 MUDA APPROVED

SK DEVELOPER & PROPERTIES, Office: JP nagar Ringroad, Mysore.

8453531221

WANTED FOR Bhaskar Heart Centre

Post	Qualification
Receptionist	Degree / PUC
Marketing / PRO (M)	Degree / PUC
Staff Nurses (F)	GNM / ANM
Laboratory Technician	CMLT / DMLT

0821-2499188 / 9880186386

TNI TECHNOLOGIES
BOGADI, MYSORE-570026.

TRAINING + JOB

ON LINE / OFF LINE CLASSES

C, C++, Java, Python Tally GST

8951208347

ಬೇಕಾಗಿದ್ದಾರೆ
ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸಿಂಗ್ ಕೆಲಸಕ್ಕಾಗಿ ತಕ್ಷಣ ಬೇಕಾಗಿದ್ದಾರೆ. (ಸರ್ಕಾರಿ ನೋಂದಾಯಿತಾ ಸಂಸ್ಥೆ) ಯಾವುದೇ ರೀತಿಯ ಶುಲ್ಕ ಇರುವುದಿಲ್ಲ. (ನಮ್ಮಲ್ಲೇ ಉಳಿದುಕೊಳ್ಳುವವರಿಗೆ ಮಾತ್ರ ಅವಕಾಶ) ಸಂಬಳ: 12,000 ದಿಂದ 18,000 (ESI, PF ಸೌಲಭ್ಯ ಇರುತ್ತದೆ) Care Shree Shaila

7760043596 / 7892480649

PART TIME JOBS
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 ರಿಂದ 20,000 ಸಂಪಾದಿಸಿ. (ಕೋರಿಯರ್ ಸೌಲಭ್ಯವಿದೆ)

87490 98879

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:

8861612486

ಬೇಕಾಗಿದ್ದಾರೆ
ಅಕೌಂಟ್ ಮ್ಯಾನೇಜರ್

ಟ್ಯಾಲಿ & ಜಿಎಸ್‌ಟಿ ಕಲಿತಿರಬೇಕು

ಹೆಲ್ಪರ್ಸ್‌ಗಳು

ಪುರುಷ ಅಭ್ಯರ್ಥಿಗಳು

ಜೈಭಾರತ್ ಮಾರ್ಕೆಟಿಂಗ್ ಅಶೋಕ ರೋಡ್, ಮೈಸೂರು

Call: 0821-4252464

MUDA
ವಾಣಿಜ್ಯ ನಿವೇಶನ ಮಾರಾಟಕ್ಕಿದೆ

1453 Sqft ಸೈಟ್ ನಂ.104, ರಿಂಗ್ ರೋಡ್ ಸರ್ವಿಸ್ ರಸ್ತೆ, ಪೊಲೀಸ್ ಲೇಔಟ್, 3ನೇ ಹಂತ, ಮೈಸೂರು

Call: 98806 45474

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.

ತರಬೇತಿಗಾಗಿ:

7406375196, 9880548596

ಶ್ರೀ ರಾಘವೇಂದ್ರ ಬಿಲ್ಡಿಂಗ್ ಕನ್ಸ್ಟ್ರಕ್ಷನ್
ಪ್ಲಾನ್ ಅಪ್ರೂವಲ್ ಹಾಗೂ 3ಡಿ ಎಲಿವೇಶನ್ ಸಹಿತ ಮಾಡಿಕೊಡುತ್ತೇವೆ. ಯಾವುದೇ ರೀತಿಯ ಅಲ್ಟ್ರೇಶನ್ ಕೆಲಸಗಳು ಸಹಾ ಮಾಡಿಕೊಡುತ್ತೇವೆ. ಆಫೀಸ್:– ಜೆ.ಪಿ.ನಗರ, ಮೈಸೂರು.

8749004423
9481738565

ಹೋಂನರ್ಸಿಂಗ್ ಕೆಲಸ
ಅನುಭವ ಇರುವ / ಇಲ್ಲದಿರುವ 18 ವರ್ಷ ಮೇಲ್ಪಟ್ಟ ಯುವಕ, ಯುವತಿಯರು, ಮಹಿಳೆಯರು, ವಿಧವೆ, ವಿಚ್ಛೇದಿತೆಯರು, ತಕ್ಷಣವೇ ಸಂಪರ್ಕಿಸಿ ಊಟ, ವಸತಿ ಉಚಿತದೊಂದಿಗೆ ಆಕರ್ಷಕ ಸಂಬಳ ಇರುತ್ತದೆ. ಆಧಾರ್ ಕಾರ್ಡ್ & ಫೋಟೋ ಕಡ್ಡಾಯ ಯಾವುದೇ ಶುಲ್ಕ ಇರುವುದಿಲ್ಲ. (ಸರ್ಕಾರಿ ನೋಂದಾಯಿತ ಸಂಸ್ಥೆ)

9035113222

ಓಂ ಶ್ರೀ ಪ್ರತ್ಯಂಗಿರ ದೇವಿ ಜ್ಯೋತಿಷ್ಯ ಮಂದಿರ
ದೈವಜ್ಞ ಪಂಡಿತ್ ಶ್ರೀ ಚಂದ್ರಪ್ಪ ಗುರೂಜಿ

ನಿಮ್ಮ ಸಮಸ್ಯೆಗಳಾದ– ವಿದ್ಯೆ, ಉದ್ಯೋಗ, ಮದುವೆ ಯೋಗ, ಸಂತಾನ ಭಾಗ್ಯ, ವ್ಯಾಪಾರದಲ್ಲಿ ತೊಂದರೆ, ಹಣಕಾಸಿನ ಸಮಸ್ಯೆ, ಪ್ರೀತಿ ಪ್ರೇಮ ವಿಚಾರ, ವಾಮಚಾರ ದೋಷ, ಶತ್ರುನಾಶ, ಭೂಮಿ ವಿಚಾರ, ಇನ್ನೂ ಯಾವುದೇ ಸಮಸ್ಯೆ ಇದ್ದರೂ ಇವರನ್ನೊಮ್ಮೆ ಸಂಪರ್ಕಿಸಿ. ವಿಳಾಸ: ಕ್ಯಾತನಹಳ್ಳಿ ರಸ್ತೆ, ಅಹಲ್ಯಾದೇವಿ ದೇವಸ್ಥಾನದ ಪಕ್ಕ ಆರತಿ ಉಕ್ಕಡ

9686648422

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.

8884179981

Sudarshan Saur
SOLAR WATER HEATER



SUNZONE SOLAR SYSTEM Vishwamanava Double Road, Kuvempunagar, Mysuru

9845175443

ಬೋಳು ತಲೆಯ ಸಮಸ್ಯೆಯೇ?



ಕಿಮೊತೆರಪಿ ಚಿಕಿತ್ಸೆಗೆ ಒಳಪಡುತ್ತಿರುವ ರೋಗಿಗಳಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.

SMART HAIR FIXING

574, 9th Cross, Anikethana Road, kuvempunagar, Mysuru

MYSURU 9611028523 MANGALORE 9343142258

WANTED
ELECTRICAL FIELD SUPERVISOR

Qualification: Diploma / BE in Electrical Engineering (Male only) 2 years+experience in handling ESCOM (GK,WS and Linkline works)

SECURITY FIELD OFFICER (Male) (Min 2-3yrs Exp. in Security Agency)

SECURITY GUARD (Male) (Min 1year Exp. As Security Guard)

Contact: 6366366388/7760066611

Call between 10AM to 6PM

Mail your C.V to: essplmd@gmail.com

ಸೈಟುಗಳು ಮಾರಾಟಕ್ಕಿವೆ
DTCP APPROVED

ವರುಣ ಹತ್ತಿರ 30X40 ಅಳತೆಯ ನಿವೇಶನಗಳು ಮಾರಾಟಕ್ಕಿವೆ.

80% ಬ್ಯಾಂಕ್ ಲೋನ್ ದೊರೆಯುತ್ತದೆ.

Rs. 18 Lakh Onwards

Contact: 9945111044

ಶ್ರೀ ಮಹಾಲಕ್ಷ್ಮಿ ಟ್ರಾವೆಲ್ಸ್
27/3 :– ಕಾಶಿ, ಗಯಾ, ಬುದ್ಧಗಯಾ, ಅಯೋಧ್ಯೆ.
25/3:– ಗುಜರಾತ್, ನಾಗನಾಥ್, ಸೋಮನಾಥ್, ದ್ವಾರಕಾ.
6/4:– ನೇಪಾಳ, ಮುಕ್ತಿನಾಥ್, ಪಶುಪತಿನಾಥ್.
18/3:– ರಾಮೇಶ್ವರ, ಮಧುರೈ, ಕನ್ಯಾಕುಮಾರಿ.
11/3:– ಪುರಿ ಜಗನ್ನಾಥ್, ಕೋನಾರ್ಕ್, ಚಂದ್ರಭಾಗ ಬೀಚ್.
17/4:– ಜಾರ್ಖಂಡ್, ಕೋಲ್ಕತ್ತಾ, ಭುವನೇಶ್ವರ.

9591017782
9964527782

ಉಚಿತವಾಗಿ ಪಡೆಯಿರಿ
26 kg BT ರೈಸನ್ನು ಖರೀದಿಸಿದರೆ 2 kg ಸಕ್ಕರೆ, 1 Ltr ಸನ್‌ಪ್ಯೂರ್ ಎಣ್ಣೆ, 1 kg ಫೈನ್ ತೊಗರಿ ಬೇಳೆಯನ್ನು ಉಚಿತವಾಗಿ ಪಡೆಯಿರಿ. ಬೆಲೆ ರೂ.1500/– ಮಾತ್ರ (ಷರತ್ತು ಅನ್ವಯ)

ಶ್ರೀ ಅನ್ನಪೂರ್ಣೇಶ್ವರಿ ರೈಸ್ ಕಾರ್ನರ್ ಶಿವರಾಂಪೇಟೆ ಮೋರ್ ಮೆಗಾ ಸ್ಟೋರ್ ಎದುರಿನ ರಸ್ತೆ, ಮೈಸೂರು.

9741859037 / 9902158019

ನಿಮ್ಮ ಹೊಲಿಗೆ ಯಂತ್ರ ಕೆಟ್ಟಿದೆಯೇ?



ನಮ್ಮಲ್ಲಿ ಎಲ್ಲಾ ತರಹದ ಹೊಲಿಗೆ ಯಂತ್ರಗಳನ್ನು ರಿಪೇರಿ ಮಾಡಿಕೊಡಲಾಗುತ್ತದೆ. Home Service also available ಇಂದೇ ಸಂಪರ್ಕಿಸಿ:

ಗಾನವಿ ಇಂಟರ್ ನ್ಯಾಷನಲ್. #22/2, ಚಂದ್ರಗುಪ್ತ ರಸ್ತೆ, ಸಬರ್ಬ್ ಬಸ್ ಸ್ಟಾಂಡ್ ಹತ್ತಿರ, ಮೈಸೂರು

6360737581 / 9620486665
0821-2591111

ತಕ್ಷಣ ಬೇಕಾಗಿದ್ದಾರೆ
ಕಡಕೊಳ, ನಂಜನಗೂಡು ಟಿವಿಎಸ್ ಫ್ಯಾಕ್ಟರಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸಂಬಳ: 15,500/- 8hour, 26 days, ವಿದ್ಯಾರ್ಹತೆ: SSLC ಮೇಲ್ಪಟ್ಟು, ವಯೋಮಿತಿ: 45 ವರ್ಷದೊಳಗೆ, ESI, PF ಮತ್ತು ಊಟ, ತಿಂಡಿ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು

9620777819
9538567819

ತಕ್ಷಣ ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಸೇಲ್ಸ್ ಮ್ಯಾನ್ ಕೆಲಸಕ್ಕೆ ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಗಾಂಧಿ ಸರ್ಕಲ್ ಸಿಟಿ ಬಸ್ ಸ್ಟಾಂಡ್ ಹತ್ತಿರ

9686667762
9986731199

ತ್ವರೆ ಮಾಡಿ
ನಿಮ್ಮ ಕನಸಿನ ಮನೆಯನ್ನು ಬುಕ್ ಮಾಡಿ

20X30	ಬಾಕಿ ಮೊತ್ತ ಸುಲಭ	ಬುಕಿಂಗ್ ಮೊತ್ತ 15.50 ಲಕ್ಷ
30X40	ಕಂತುಗಳಲ್ಲಿ ಬ್ಯಾಂಕ್	ಬುಕಿಂಗ್ ಮೊತ್ತ 25.50 ಲಕ್ಷ
30X50	ಲೋನ್ ಲಭ್ಯವಿದೆ.	ಬುಕಿಂಗ್ ಮೊತ್ತ 37.50 ಲಕ್ಷ

ಮೈಸೂರಿನ ಪ್ರಮುಖ ಸ್ಥಳಗಳಲ್ಲಿ

98800 65122 / 77956 09173

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು ಹಾಗು ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಅನುಭವವುಳ್ಳ ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:

ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಶಿಷ್ಯರಣೆ ಸ್ಕೂಲ್ ಹತ್ತಿರ, ಹೆಬ್ಬಾಳ್, ಮೈಸೂರು

ತಕ್ಷಣ ಬೇಕಾಗಿದ್ದಾರೆ
ಫೋರಂ ಮಾಲ್ (Forum Mall) ಹಾಗೂ Mall of Mysore ಮೈಸೂರಿನಲ್ಲಿರುವ ಜಾಕಿ (Jockey) ಶೋರೂಂನಲ್ಲಿ ಕೆಲಸ ಮಾಡಲು ಯುವಕರು ಬೇಕಾಗಿದ್ದಾರೆ. ವಿದ್ಯಾರ್ಹತೆ: PUC ಮೇಲ್ಪಟ್ಟು, ಉತ್ತಮ ವೇತನ ಸೌಲಭ್ಯವಿರುತ್ತದೆ. ವಯಸ್ಸಿನ ಮಿತಿ : 20 ರಿಂದ 30 ವರ್ಷ

7338306565
08214267868

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ, ಜಿ.ಆರ್.ಎಸ್. ಫ್ಯಾಂಟಸಿ ಪಾರ್ಕ್ ಮತ್ತು ಹೆಬ್ಬಾಳ್ ಸುತ್ತಮುತ್ತ ಏರಿಯಾದಲ್ಲಿ ಕೆಲಸ ಮಾಡಲು ಕಂಪ್ಯೂಟರ್ ಅನುಭವವುಳ್ಳ ಸೆಕ್ಯೂರಿಟಿ ಸೂಪರ ವೈಸರ್ ಮತ್ತು ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ: SSLC & ಮೇಲ್ಪಟ್ಟು, ಸಂಬಳ: S/Sup :- 19,000/- (8 hours) S/G:- 18,000/- (8 Hours) ESI, PF ಸೌಲಭ್ಯ ಇರುತ್ತದೆ. ಸಂಪರ್ಕಿಸಬೇಕಾದ ಸಂಖ್ಯೆಗಳು

9880727819
9620777819

ಪ್ರಮಾಣ ಪತ್ರ
ಆನಂದ ಕೆ.ಬಿ. S/o ಲೇ ಬಸವಯ್ಯ, ಮೈಸೂರು ಜಿಲ್ಲೆ, ಕಲಸೂರು ಅಂಚೆ ಅಂತರ ಸಂತೆ ಹೋಬಳಿ, ಹೆಚ್.ಡಿ.ಕೋಟೆ ತಾಲ್ಲೂಕು, ಜಗನಕೋಟೆ ಗ್ರಾಮದಲ್ಲಿ ವಾಸವಿರುವ ನಾನು ಈ ಮೂಲಕ ಪ್ರಮಾಣೀಕರಿಸುವುದೇನೆಂದರೆ, ನನ್ನ ಆಧಾರ್ ಕಾರ್ಡ್, ಟಿ.ಸಿ, ಪಾನ್‌ಕಾರ್ಡ್ ಹಾಗೂ ಇನ್ನಿತರೆ ದಾಖಲಾತಿಗಳಲ್ಲಿ ನನ್ನ ಹೆಸರು ದೊಡ್ಡಯ್ಯ ಕೆ.ಬಿ. ಎಂದು ನಮೂದಾಗಿರುತ್ತದೆ ಹಾಗೂ ನನ್ನ ಮಕ್ಕಳ ಜನನ ಪ್ರಮಾಣ ಪತ್ರದಲ್ಲಿ ಮೊದಲೇ ಆನಂದ ಕೆ.ಬಿ. ಎಂದು ನಮೂದಾಗಿರುತ್ತದೆ. ದೊಡ್ಡಯ್ಯ ಕೆ.ಬಿ. @ ಆನಂದ ಕೆ.ಬಿ. ಎಂಬ ಎರಡು ಹೆಸರುಗಳು ನನ್ನದೆ ಆಗಿರುತ್ತದೆ. ಇನ್ನು ಮುಂದೆ ಆನಂದ ಕೆ.ಬಿ. ಎಂಬ ಒಂದೇ ಹೆಸರನ್ನು ಮುಂದುವರೆಸಿಕೊಂಡು ಹೋಗುತ್ತೇನೆ ಎಂದು ದಿನಾಂಕ: 21/02/2023 ರಂದು ನೋಟರಿಯವರಾದ ಸರಸ್ವತಿ ಜೆ. ಬಿ.ಎ, ಎಲ್.ಎಲ್.ಬಿ ಇವರ ಮುಂದೆ ಪ್ರಮಾಣೀಕರಿಸುತ್ತೇನೆ. ಸಹಿ/– ಆನಂದ ಕೆ.ಬಿ

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th, SSLC, PUC, ITI, Any Degree Pass / Fail ಆದ ಯುವಕ / ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ, 15,200–86000.

9740733021 / 9535028750

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ. #2921/A, ಸರಸ್ವತಿಪುರಂ, ಮೈಸೂರು

ನಾವು ರೆವಿನ್ಯೂ ಮನೆಗಳಿಗೆ ಮಾರ್ಟ್‌ಗೇಜ್ ಲೋನ್ ಮಾಡಿಕೊಡುತ್ತೇವೆ. ಈ ಕೆಳಗಿನ ಸ್ಥಳಗಳಿಗೆ, ರಾಘವೇಂದ್ರ ನಗರ, ಕನಕಗಿರಿ, ಜನತನಗರ, ಲೋಕನಾಯಕ ನಗರ, ಗಣೇಶನಗರ, ಮಹದೇವಪುರ. Loan Amount 5,00,000 to 20,00,000.

8088647887

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer

ಪಂಡಿತ್ ಸಂತೋಷ್. 9741250896

ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.

ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ

ಮೊ.: 9741806990

ತಾಯಿ ಚಾಮುಂಡೇಶ್ವರಿ ಕಾಣತೂರ್ ನಾಲ್ವರ ದೈವ ಚೌಡಿ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ತಪ್ಪದ. ಖಾಯಂ ವಿಳಾಸ: ಸಬರ್ಬ್ ಬಸ್‌ಸ್ಟಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಜಮೀನು ಮಾರಾಟಕ್ಕಿದೆ
ಮೈಸೂರು, ಹೆಚ್.ಡಿ.ಕೋಟೆ ಮುಖ್ಯ ರಸ್ತೆಯಲ್ಲಿ ಹಾರೋಹಳ್ಳಿ ಗ್ರಾಮದಲ್ಲಿ 35 ಗುಂಟೆ, ಪೆಟ್ರೋಲ್ ಬಂಕ್ ಮತ್ತು ಹೊಟೇಲ್ ಡಾಬ ಕಮರ್ಷಿಯಲ್ ಉಪಯೋಗಕ್ಕೆ ಸೂಕ್ತವಾಗಿದೆ. ಇನ್ನು ಇತರ ಜಮೀನುಗಳು ಮಾರಾಟಕ್ಕಿವೆ. ಸಂಪರ್ಕಿಸಿ:

9663793666
9945661696

ವೆಜ್ ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ
ದೋಸೆ ಭಟ್ಟರು, ಕೌಂಟರ್ ಬಾಯ್ಸ್, ಸಪ್ಲೇ ಕೆಲಸಕ್ಕೆ ಹುಡುಗರು ಮತ್ತು ಹೆಣ್ಣು ಮಕ್ಕಳು ಹಾಗೂ ಕ್ಲೀನಿಂಗ್ ಕೆಲಸಕ್ಕೆ ಹೆಂಗಸರು ಬೇಕಾಗಿದ್ದಾರೆ. ರೂಂ ವ್ಯವಸ್ಥೆ ಇದೆ. ಸಂಪರ್ಕಿಸಿ:

7795518038
8884208814

ಸೈಟುಗಳು ಮಾರಾಟಕ್ಕಿವೆ
20x30, 30x40, 40x60 ಶ್ರೀನಗರ ಹಿಂಭಾಗ ಮತ್ತು ಶ್ರೀರಾಂಪುರ ರಿಂಗ್ ರೋಡ್

8050345574

ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ
ರಿಂಗ್‌ರೋಡ್, ಹೆಬ್ಬಾಳ್, ಮೇಟಗಳ್ಳಿ, ಗೋಕುಲಂ, ಕೂರ್ಗಳ್ಳಿ, ಹಿನಕಲ್, ಸುತ್ತಮುತ್ತ. ಸಂಬಳ: 11,000, 12 hrs, ESI, PF ಸೌಲಭ್ಯ ಇರುತ್ತದೆ.

7090303144
9036744955

ಬೇಕಾಗಿದ್ದಾರೆ
ಬನ್ನಿಮಂಟಪದಲ್ಲಿ ಇರುವ ಆಫೀಸ್‌ಗೆ ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ. ವೇತನ – 15,000/–

0821-2491755

ಸುವರ್ಣಾವಕಾಶ
ಸರ್ಕಾರದಿಂದ ನಿವೃತ್ತಿ ಹೊಂದಿರುವ ವಿವಿಧ ದರ್ಜೆಯ ಅಧಿಕಾರಿಗಳಿಗೆ ಹಾಗೂ ಗೃಹಿಣಿಯರಿಗೆ ಮತ್ತು ಆಸಕ್ತಿ ಇರುವ ಅಭ್ಯರ್ಥಿಗಳಿಗೆ ಅರ್ಜಿಗಳನ್ನು ಆಫೀಸರ್ ಹುದ್ದೆಗೆ ಆಹ್ವಾನಿಸಲಾಗಿದೆ. ಫಿಕ್ಸೆಡ್ ತಿಂಗಳ ಸಂಬಳ ESI/PF

ಸಂಪರ್ಕಿಸಿ: 9110676257
9739239004

SS SKILL TRAINING CENTRE, Mysore
ನಿರುದ್ಯೋಗ ಯುವಕ/ಯುವತಿಯರಿಗೆ ಕಂಪ್ಯೂಟರ್ ತರಬೇತಿಯನ್ನು ಕೊಡಲಾಗುತ್ತದೆ

- M.S. Office • D.T.P • Tally
- Data Entry
- Kannada Typing Nudi • Internet

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

9448591521

Sites for Sale in Installment Near MIT College, Very Good Location. Contact:
8197392458
6381779015

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.

9008711654

ಬೇಕಾಗಿದ್ದಾರೆ
ಕಂಪ್ಯೂಟರ್ ಆಫೀಸ್‌ನಲ್ಲಿ ಫ್ರಂಟ್ ಆಫೀಸ್ ಮತ್ತು ಅಕೌಂಟ್ಸ್ ನಿರ್ವಹಣೆಗಾಗಿ, ಬಿ.ಕಾಮ್ ಮಾಡಿರುವ 25 ವರ್ಷದೊಳಗಿನ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕಂಪ್ಯೂಟರ್ ಮತ್ತು ಅಕೌಂಟ್ಸ್‌ನಲ್ಲಿ ಅನುಭವವುಳ್ಳವರಿಗೆ ಹೆಚ್ಚಿನ ಆದ್ಯತೆ. ಸಂಪರ್ಕಿಸಿ:

8073393505

WANTED
Immediately Recruitment TELECALLERS Male No. 10 Female No. 10 Tamil, Telugu, Hindi, Languages required Salary 15k Meghana H R

7829803426

ಟೈಲರಿಂಗ್ ತರಬೇತಿ
ನಮ್ಮಲ್ಲಿ ನುರಿತ ತರಬೇತುದಾರರಿಂದ ಟೈಲರಿಂಗ್ ತರಬೇತಿ ನೀಡಲಾಗುತ್ತದೆ ಇಂದೇ ಸಂಪರ್ಕಿಸಿ

ಗಾನವಿ ಇಂಟರ್ ನ್ಯಾಷನಲ್ 22/2,ಚಂದ್ರಗುಪ್ತ ರಸ್ತೆ, ಸಂಗಮ್ ಥಿಯೇಟರ್ ಹತ್ತಿರ ಮೈಸೂರು .

ಮೊಬೈಲ್ ನಂ: 6360737581/ 9590666328/ 0821-2591111

ಮನೆ ಬಾಡಿಗೆಗೆ/ಭೋಗ್ಯಕ್ಕೆ ಸಸ್ಯಹಾರಿಗಳಿಗೆ ಮಾತ್ರ
2 BHK ಇರುವ ಮನೆ ರಾಮಕೃಷ್ಣ ನಗರ 'ಐ' ಬ್ಲಾಕ್, ಮೈಸೂರು. ಸಂಪರ್ಕಿಸಿ:

9731753899/9980530712

Teak Wood logs For sale
ಲೋಕಲ್ ಟೀಕ್ (ಸಾಗವಾನಿ) ಮರದ ಲಾಗ್‌ಗಳು ಮಾರಾಟಕ್ಕಿವೆ.

6360231221

ಡಾ.ಗುರೂಜಿ ಮ್ಯಾರೇಜ್ ಬ್ಯೂರೋ
ಡಾಕ್ಟರ್, ಇಂಜಿನಿಯರ್ಸ್ ಮತ್ತು ಎಲ್ಲಾ ವಿದ್ಯಾವಂತ ವಧು ವರರು ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ:

9448229184
7899625268

JOB OPENINGS
- Only for BE / MCA Freshers.
- 100 + No.s of Openings
- Contact Immediataly

9663579654

SITES FOR SALE
Rs.10 Lakh onwards, DTCP approved, ready for registration.

8123609405

FOR SALE
1) 30x40 30x50 sites in Defence Apartment near Kote Road
2) 28 Guntas Land in Varkodu
3) Bannur Road Commercial 50x80
4) 17/60 3 BHK Kamakshi Hospital Near Saraswathi Puram
4)30x40 Duplex House Srirampura
5)40x60 N/E Corner Aravind Nagar

90359 90359 / 95386 90359

ಮನೆ ಭೋಗ್ಯಕ್ಕಿದೆ
ಬಸವೇಶ್ವರನಗರ (ಶಾರದಾದೇವಿನಗರ). ನ್ಯೂ ಕಾಂತರಾಜ ಅರಸ್ ರಸ್ತೆ, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಎದುರು, ಉತ್ತರಾಭಿಮುಖವಾಗಿರುವ 2 BHK ಮನೆ ಮೊದಲ ಮಹಡಿಯಲ್ಲಿ ಭೋಗ್ಯಕ್ಕೆ ಲಭ್ಯವಿದೆ. ಸಂಪರ್ಕಿಸಿ:

9448679146

ಬೇಕಾಗಿದ್ದಾರೆ
P.G. ಯಲ್ಲಿ ಉಳಿದುಕೊಂಡು ಅಡುಗೆ ಮಾಡಲು ಅಡುಗೆಯವರು ಹಾಗೂ ಸಹಾಯಕ ಮಹಿಳೆಯರು ಬೇಕಾಗಿದ್ದಾರೆ. ಸಂಪರ್ಕಿಸಿ:

8970132554

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಪ್ಯಾಕಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ, (PART TIME/FULL TIME) ಬೆಳಿಗ್ಗೆ 9ರಿಂದ ಮಧ್ಯಾಹ್ನ 3 ಗಂಟೆ ಅಥವಾ ಮಧ್ಯಾಹ್ನ 3 ರಿಂದ ರಾತ್ರಿ 9 ರವರೆಗೆ, ಕುವೆಂಪುನಗರ, ಆಕರ್ಷಕ ಸಂಬಳ. ಸಂಪರ್ಕಿಸಿ:

9535370330

COMMERCIAL (100x30) 80 FEET ROAD
@ Bramin's Layout Commercially Converted 60 Lakhs

9538839926

ಬೇಕಾಗಿದ್ದಾರೆ
ಜಿಲ್ಲೆಯಲ್ಲಿ ಹೊಸದಾಗಿ ಪ್ರಾರಂಭವಾಗಿರುವ ಕಂಪನಿಗಳಿಗೆ ಹಾಗೂ ಆಫೀಸ್ ಕೆಲಸಕ್ಕೆ ಯುವಕ – ಯುವತಿಯರು ಬೇಕಾಗಿದ್ದಾರೆ. Salary : 13,000 - 21,000 + ESI, PF, ವಿದ್ಯಾರ್ಹತೆ: 10th, PUC, ITI, Diploma and Any Degree. ಇಂದೇ ಸಂಪರ್ಕಿಸಿ:

9035734821

ಬೇಕಾಗಿದ್ದಾರೆ
ಡೆಲಿವರಿ ಸಂಸ್ಥೆಯಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ, ಸಂಬಳ: 13000ದಿಂದ 18000+ ESI+PF ಸ್ಥಳಗಳು: ಕೆ.ಆರ್.ನಗರ, ಮಡಿಕೇರಿ, ಹಾಸನ (ಆಲೂರು), ಹೊನ್ನಂಪೇಟೆ, ಬೆಂಗಳೂರು. ಸಂಪರ್ಕಿಸಿ:

9741836111 / 9060438484

40x60 Ft., Site for Sale near Ring Road Vijayanagar 4th Stage, Mysore
7899214181

ತರಬೇತಿಗಳು ಪ್ರಾರಂಭ
ಆಧಾರ್, ವೋಟರ್, ರೇಷನ್, ಪಾನ್‌ಕಾರ್ಡ್, ಹಾಗೂ ಇನ್ನಿತರ ಆನ್‌ಲೈನ್ (CSC) ಅರ್ಜಿಗಳನ್ನು ಹಾಕುವ ತರಬೇತಿಗಳು ಪ್ರಾರಂಭವಾಗುತ್ತಿವೆ. ಮಾಹಿತಿಗಾಗಿ:

9538782130, 9019776357

ತಕ್ಷಣವೇ ಬೇಕಾಗಿದ್ದಾರೆ
ಮೈಸೂರು, ಹೆಬ್ಬಾಳು ಪ್ರದೇಶದ ಕಂಪನಿಗಳಿಗೆ ಸೆಕ್ಯೂರಿಟಿ ಗಾರ್ಡುಗಳು, ಡ್ರೈವರುಗಳು, ಹೆಲ್ಪರುಗಳು, ಹುಡುಗರು, ಹುಡುಗಿಯರು, ಗಂಡಸರು, ಹೆಂಗಸರು ಬೇಕಾಗಿದ್ದಾರೆ

7795285485, 8105249880

ತಕ್ಷಣ ಬೇಕಾಗಿದ್ದಾರೆ
ವಿದ್ಯಾರ್ಹತೆ: 7th, SSLC, PUC, ITI, Diploma, Any Degree (ಪಾಸ್/ಫೇಲ್), ಸಂಬಳ: 15000–35000, ವಯಸ್ಸು 35 Below ಪುರುಷ ಅಭ್ಯರ್ಥಿಗಳಿಗೆ ಮಾತ್ರ ಅನ್ವಯವಾಗಿರುತ್ತದೆ

8217557212

CHANGE OF NAME
I, Venkatesha Mukunda, Residing at No. 22, North East of N.R. Mohalla, Mysore -570007, Karnataka, India have changed my name as Venkatesh.M on my own free will sworn in before Notary L.N. Rajendran, Mysore vide Affidavit dated 15.2.2023.

Sd/-Venkatesh.M

CHANGE OF NAME
I, Roshini Venkatesha M, W/o. Venkatesh Mukunda, Residing at No. 22, North East of N.R. Mohalla, Mysore -570007, Karnataka, India have changed my name as Roshini Venkatesh M on my own free will sworn in before Notary L.N. Rajendran, Mysore vide Affidavit dated 15.2.2023.

Sd/-Roshini Venkatesh M

ನಗರದ ಸಿಹಿ ಮತ್ತು ಖಾರ ತಿಂಡಿ
ಅಂಗಡಿಗೆ, ಕಿಚನ್ ಹೆಲ್ಪರ್ಸ್, ಸ್ಟೋರ್ ಕೀಪರ್, ಚಾಟ್ಸ್ ಹೆಲ್ಪರ್, ಡೆಲಿವರಿ ಬಾಯ್ಸ್ ಹಾಗೂ ಸೂಪರ್‌ವೈಸರ್ ಬೇಕಾಗಿದ್ದಾರೆ

9606116663/4

11/3/23 ರಿಂದ ಅಸ್ಸಾಂ ಮೇಘಾಲಯ 38500/
30/4/23 ರಿಂದ ಪುರಿ ಜಗನ್ನಾಥ್ ಜಾರ್ಖಂಡ್, ವೈದ್ಯನಾಥ, ನೇಪಾಳ ಮುಕ್ತಿನಾಥ, ಜನಕಪುರ

ಶ್ರೀ ರಾಮ್ ಟೂರ್ ಬೆಂಗಳೂರು

9108933383

ವರನಿಗೆ ವಧು ಬೇಕಾಗಿದೆ
ವಯಸ್ಸು: 40, ಎತ್ತರ 5' 6" ಒಕ್ಕಲಿಗ ಗೌಡ, ಉದ್ಯೋಗ: (ಎಲೆಕ್ಟ್ರಿಕಲ್) ಸ್ವಯಂ ಸಂಬಳ; 30ಸಾವಿರದಿಂದ 35 ಸಾವಿರ ಹುಡುಗಿ ವಯಸ್ಸು: 30 ರಿಂದ 35 ವರ್ಷ ಇರಬೇಕು. ಸಂಪರ್ಕಿಸಿ:

8971237526

ಮೈಸೂರು ಮಿತ್ರ 43
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಅಸಮಾನತೆ ನಿರ್ಮೂಲನೆಗೆ ಶರಣರು ಶ್ರಮಿಸಿದ್ದಾರೆ

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಅಭಿಮತ

ತಿ.ನರಸೀಪುರ ಫೆ.22– 12ನೇ ಶತಮಾನದಲ್ಲಿದ್ದ ಅಸಮಾನತೆ, ಶೋಷಣೆ ನಿರ್ಮೂಲನೆಗೆ ಮಾಡಲು ಶರಣರು ಶ್ರಮಿಸಿದ್ದಾರೆ. ವಚನ ಸಾಹಿತ್ಯ ಉಳಿಸುವ ನಿಟ್ಟಿನಲ್ಲಿ ಮಡಿವಾಳ ಮಾಚಿದೇವರ ಕಾರ್ಯ ಸ್ಮರಣೀಯ ಎಂದು ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಪಟ್ಟಣದ ತಾಪಂ ಸಭಾಂಗಣದಲ್ಲಿ ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ, ತಾಲೂಕು ಶ್ರೀವೀರ ಮಡಿವಾಳ ಮಾಚಿದೇವರ ಸಂಘದ ಸಹಯೋಗದಲ್ಲಿ ನಡೆದ ಮಡಿವಾಳ ಮಾಚಿದೇವರ ಜಯಂತಿಯಲ್ಲಿ ಮಾತನಾಡಿದ ಅವರು, ಈ ಹಿಂದೆ ಸಮಾಜದಲ್ಲಿದ್ದ ಉಳಿಗಮಾನ್ಯ ಪದ್ಧತಿ, ಜಾತಿ ವ್ಯವಸ್ಥೆಯಿಂದ ದಲಿತರು, ಹಿಂದುಳಿದವರು, ಶೂದ್ರ ವರ್ಗ ಅಸಮಾನತೆ, ಶೋಷಣೆಗೆ ಒಳಗಾಗಿದ್ದರು. ತಳ ಸಮುದಾಯಗಳಿಗೆ ಸಮಾನತೆ ಕೊಟ್ಟವರು ಶರಣರು. ವಚನ ಸಾಹಿತ್ಯ ಉಳಿಸಿ ಬೆಳೆಸಿದಲ್ಲಿ ಅವರ ಸೇವೆ ಅಪಾರ. ಅನುಭವ ಮಂಟಪ ಮೂಲಕ



ಎಲ್ಲರಿಗೂ ಸಮಾನ ಅವಕಾಶ ಕಲ್ಪಿಸಿದ್ದಾರೆ ಎಂದರು.

ಮಡಿವಾಳ ಸಂಸ್ಥಾನ ಮಠದ ಡಾ.ಬಸವ ಮಾಚಿದೇವ ಸ್ವಾಮೀಜಿ ಮಾತನಾಡಿ, ಮಾಚಿದೇವರ ಚಿಂತನೆಗಳ ಮಾರ್ಗದಲ್ಲಿ ನಡೆದಾಗ ಮಾತ್ರ ಜಯಂತಿ ಸಾರ್ಥಕವಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ವಾಟಾಳು ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಮಾತನಾಡಿದರು. ತಹಸೀಲ್ದಾರ್ ಸಿ.ಜಿ.ಗೀತಾ, ತಾಪಂ ಇಒ ಸಿ.ಕೃಷ್ಣ, ಆಡಳಿತಾಧಿಕಾರಿ ಬಿ.ಎಂ.ಸವಿತಾ, ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ, ಮಡಿವಾಳರ ಸಂಘದ ಜಿಲ್ಲಾಧ್ಯಕ್ಷ ಎಂ.ರಾಜು, ತಾಲೂಕು ಅಧ್ಯಕ್ಷ ಕುರುಬೂರು ಮಹದೇವಸ್ವಾಮಿ, ಆಲಗೂಡು ಬಸವರಾಜು, ಗುಂಡಶೆಟ್ಟಿ, ಜಯಲಕ್ಷ್ಮಿ ಈ, ಮಹದೇವ್, ನಟರಾಜು, ಮೂಗೂರು ಕುಮಾರಸ್ವಾಮಿ ಹಾಜರಿದ್ದರು.

> ಬಸವಣ್ಣನವರ ಅನುಭವ ಮಂಟಪದಲ್ಲಿ ಮಾಚಿದೇವರು ಸಮರ್ಥವಾಗಿ ಕಾರ್ಯ ನಿರ್ವಹಿಸಿ ಕಾಯಕಕ್ಕೆ ಹೆಸರಾದವರು. ಬಸವಣ್ಣನವರ ಜೊತೆ ಸೇರಿ ಕಾರ್ಯ ನಿರ್ವಹಿಸಿದ ರೀತಿಯಿಂದಾಗಿ ಶರಣರ ಚಿಂತನೆಗಳು ಇಂದಿಗೂ ಮಹತ್ವ ಪಡೆದಿವೆ. ಅಂಬೇಡ್ಕರ್ ಕೊಟ್ಟ ಸಂವಿಧಾನದ ಆಶಯದಂತೆ ನಾವು ನಡೆಯಬೇಕಿದೆ. ಸಂವಿಧಾನದಡಿ ಎಲ್ಲರಿಗೂ ಅವಕಾಶವಿದೆ ಎಂಬುದನ್ನು ತಿಳಿದುಕೊಳ್ಳಿ ನಮ್ಮದು ಸಣ್ಣ ಸಮುದಾಯ. ನಮಗೆ ಯಾರ ಸಹಕಾರ ಇಲ್ಲ ಎಂಬ ಭಾವನೆ ಬೇಡ. ಮಕ್ಕಳ ಶಿಕ್ಷಣಕ್ಕೂ ಒತ್ತು ನೀಡಿ.
> –ಎಂ.ಅಶ್ವಿನ್ ಕುಮಾರ್, ಶಾಸಕ.



ತಿ.ನರಸೀಪುರದ ಕಬಿನಿ ಅತಿಥಿ ಗೃಹದಲ್ಲಿ ಜೆಡಿಎಸ್ ರಾಜ್ಯ ವಕ್ತಾರರಾಗಿ ನೇಮಕಗೊಂಡ ರಾಜ್ಯ ವಾಲ್ಮೀಕಿ ನಾಯಕ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ತಾಯೂರು ಪ್ರಕಾಶ್ ಅವರನ್ನು ಪಟ್ಟಣದ ಶ್ರೀಮಹರ್ಷಿ ವಾಲ್ಮೀಕಿ ಚಾರಿಟಬಲ್ ಟ್ರಸ್ಟ್‌ನಿಂದ ಸನ್ಮಾನಿಸಲಾಯಿತು. ಜೆಡಿಎಸ್ ಯುವ ಘಟಕದ ಅಧ್ಯಕ್ಷ ಬೂದಹಳ್ಳಿ ಸಿದ್ದರಾಜು ನಾಯಕ, ಮಹರ್ಷಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಯಡದೊರೆ ಮಹೇಶ್ ನಾಯಕ, ಮುಖಂಡರಾದ ಕಲಿಯೂರು ರಮೇಶ್, ಇಂಡವಾಳು ಸತೀಶ್, ಪ್ರಕಾಶ್, ಮಲ್ಲಿಕಾರ್ಜುನ, ರಾಚನಾಯ್ಕ, ಓಂಗುರು ಶಿವಣ್ಣ, ಇಂಡವಾಳು ಸಿದ್ದರಾಜು, ಮಂಟಿ, ರಾಜೇಂದ್ರ, ರಾಜೇಶ, ತಲಕಾಡು ಮಿತ್ರ ಮಹದೇವನಾಯಕ್ ಹಾಜರಿದ್ದರು.

ಉತ್ತಮ ಆರೋಗ್ಯಕ್ಕೆ ಪೌಷ್ಟಿಕ ಆಹಾರ ಸಹಕಾರಿ

ಸೀಮಂತ ಕಾರ್ಯಕ್ರಮದಲ್ಲಿ ಲಲಿತಾ ಜಿ.ಟಿ.ದೇವೇಗೌಡ

ಹುಣಸೂರು, ಫೆ22– ಗರ್ಭಿಣಿಯರ ಉತ್ತಮ ಆರೋಗ್ಯಕ್ಕೆ ಸೊಪ್ಪು, ತರಕಾರಿ, ಮೊಳಕೆಕಾಳು ಸೇರಿದಂತೆ ಇನ್ನಿತರ ಪೌಷ್ಟಿಕ ಆಹಾರ ಸಹಕಾರಿ ಎಂದು ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳಿ ಅಧ್ಯಕ್ಷೆ ಲಲಿತಾ ಜಿ.ಟಿ.ದೇವೇಗೌಡ ತಿಳಿಸಿದರು.

ತಾಲೂಕಿನ ನೇರಳಕುಪ್ಪೆ ಗ್ರಾಮದ ಆಶ್ರಮ ಶಾಲೆಯಲ್ಲಿ ಸ್ವಾಮಿ ವಿವೇಕಾನಂದರ ಯೂತ್ ಮೂವ್‌ಮೆಂಟ್ ಹಾಗೂ ಲಕ್ಷ್ಮಿ ಮಹಿಳಾ ಸಹಕಾರ ಸಂಘದ ಸಹಯೋಗದಲ್ಲಿ ನಡೆದ ಗಿರಿಜನ ಹಾಡಿ ಗರ್ಭಿಣಿ ಮಹಿಳೆಯರ ಸೀಮಂತ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗರ್ಭಿಣಿಯರು ಪೌಷ್ಟಿಕ



ಆಹಾರ ಸೇವಿಸುವ ಜೊತೆಗೆ ನಿಮ್ಮ ಸುತ್ತಮುತ್ತಲ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು ಎಂದರು.

ಆರೋಗ್ಯಾಧಿಕಾರಿ ಡಾ.ಶಿಲ್ಪ ಮಾತನಾಡಿ, ಮಹಿಳೆಯರು ಪೌಷ್ಟಿಕ ಆಹಾರ ಸೇವಿಸಬೇಕು. ಪ್ರಸ್ತುತ ಮಹಿಳೆಯರು ತಮ್ಮ ಆರೋಗ್ಯದ ಬಗ್ಗೆ ಹೆಚ್ಚು ಗಮನಹರಿಸದ ಪರಿಣಾಮ ಅನೇಕ ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ಹೀಗಾಗಿ ಉತ್ತಮ ಆರೋಗ್ಯ ಪಡೆಯಲು ಪೌಷ್ಟಿಕಾಂಶವುಳ್ಳ ಆಹಾರವನ್ನು ಮನೆಯಲ್ಲೇ ತಯಾರಿಸಿ ಸೇವಿಸಬೇಕು. ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ಭಯವಿಲ್ಲದೇ ಹೆಚ್‌ಐವಿ ತಪಾಸಣೆಗೊಳಗಾಗಬೇಕು ಎಂದರು.

ವಿವೇಕಾನಂದ ಮೆಮೋರಿಯಲ್ ಆಸ್ಪತ್ರೆ ವೈದ್ಯ ಡಾ.ಅಭಿಷೇಕ್, ಗರ್ಭಿಣಿಯರು ಯಾವ ರೀತಿ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು ಮತ್ತು ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್‌ನ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಗರ್ಭಿಣಿ ಮಹಿಳೆಯರಿಗೆ ಬಳೆ, ರವಿಕೆ, ಹಣ್ಣು, ಹೂವು ತೆಂಗಿನಕಾಯಿ ನೀಡಿ ಉಡಿತುಂಬಿ ಹಾರೈಸಲಾಯಿತು. ಜಿಪಂ ಮಾಜಿ ಸದಸ್ಯ ಕಟ್ಟಿನಾಯ್ಕ, ತಾಪಂ ಮಾಜಿ ಸದಸ್ಯ ಕೆ.ಗಣಪತಿ, ಮಾಜಿ ಸದಸ್ಯೆ ಪುಷ್ಪಲತಾ, ದೊಡ್ಡಹೆಜ್ಜೂರು ಗ್ರಾಪಂ ಅಧ್ಯಕ್ಷ ಸುಭಾಷ್, ಹನಗೋಡು ಸೊಸೈಟಿ ನಿರ್ದೇಶಕ ಉಜ್ಜಿನೀಗೌಡ, ವಿವೇಕಾನಂದ ಯೂತ್ ಮೂವ್ ಮೆಂಟ್ ವ್ಯವಸ್ಥಾಪಕಿ ಕುಸುಮ, ಸಮಾಲೋಚಕ ಬೋರಪ್ಪ, ನವೀನ್, ಆನಂದ್, ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

ರೋಹಿಣಿ ಸಿಂಧೂರಿ ವಿರುದ್ಧದ ದೂರು ವಾಪಸ್ ಪಡೆಯಲ್ಲ

ಶಾಸಕ ಸಾ.ರಾ.ಮಹೇಶ್

ಕೆ.ಆರ್.ನಗರ, ಫೆ.22– ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭ ನನ್ನ ಮೇಲೆ ಮಾಡಿದ ಆರೋಪಗಳು ಸಾಬೀತಾಗದಿದ್ದರಿಂದ ಅವರು ನನ್ನ ಬಳಿ ಕ್ಷಮೆ ಕೇಳಿದ್ದಾರೆ. ಆದರೆ ನಾನು ಅವರ ವಿರುದ್ಧ ನೀಡಿರುವ ದೂರನ್ನು ವಾಪಸ್ ಪಡೆಯಲ್ಲ ಎಂದು ಶಾಸಕ ಸಾ.ರಾ.ಮಹೇಶ್ ತಿಳಿಸಿದರು.



ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ಆವರಣದಲ್ಲಿ ರಾಜ್ಯ ಸರ್ಕಾರದ ಡಾ.ಬಿ.ಸಿ.ರಾಯ್ ಪ್ರಶಸ್ತಿಗೆ ಭಾಜನರಾದ ಪ್ರಸೂತಿ ತಜ್ಞೆ ಡಾ.ಕೆ.ಆರ್.ಚಂದ್ರಕಲಾ ಅವರನ್ನು ಸನ್ಮಾನಿಸಿ ನಂತರ ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಅಧಿಕಾರ ದುರುಪಯೋಗ ಮಾಡಿಕೊಂಡು ಯಾವುದೇ ಸಾಕ್ಷ್ಯಾಧಾರವಿಲ್ಲದೇ ಜನಪ್ರತಿನಿಧಿಯ ಮೇಲೆ ಆರೋಪ ಮಾಡಿ, ನನಗೆ ಮಾನಸಿಕವಾಗಿ ತೊಂದರೆ ನೀಡಿದ್ದರ ಬಗ್ಗೆ ನಾನು ಶಾಸಕನಾಗಿ ವಿಧಾನಸಭೆಯಲ್ಲಿ ಸಭಾಧ್ಯಕ್ಷರ ಮುಂದೆ ಅಳಲನ್ನು ವ್ಯಕ್ತಪಡಿಸಿದೇನೆ ವಿನಹಃ ಯಾರಿಗೂ ತೊಂದರೆ ನೀಡಬೇಕೆಂಬ ಉದ್ದೇಶದಿಂದಲ್ಲ ಎಂದರು.

ಆದರೆ ರೋಹಿಣಿ ಸಿಂಧೂರಿ ವಿರುದ್ಧ ನಾನು ಸಾಕ್ಷಿ ಸಮೇತ ಭ್ರಷ್ಟಾಚಾರದ ಆರೋಪ ಮಾಡಿ ದೂರು ನೀಡಿದ್ದು, 8 ತಿಂಗಳಾದ ಮೇಲೆ ವರದಿ ಬಂದಿದೆ. ಆದರೆ ಅವರ ಆರೋಪದ ತನಿಖೆ ಕೇವಲ 2 ತಿಂಗಳಲ್ಲಿ ವರದಿ ಬರುತ್ತದೆ ಎಂದರೆ ಅಧಿಕಾರ ಯಂತ್ರ ಹೇಗಿದೆ. ಅಲ್ಲದೇ ಅವರು ಸಾರ್ವಜನಿಕವಾಗಿ ಕ್ಷಮೆ ಕೇಳಿದರೂ ಕೂಡ ನಾನು ಅವರ ಮೇಲಿನ ದೂರನ್ನು ವಾಪಸ್ ಪಡೆಯುವುದಿಲ್ಲ. ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೋ ನೋಡೋಣ ಎಂದು ಸ್ಪಷ್ಟಪಡಿಸಿದರು.

ಚುನಾವಣೆಯಲ್ಲಿ ನಿಲ್ಲುವ ಅಭ್ಯರ್ಥಿ ಕಾರ್ಯಕರ್ತರು ಮತ್ತು ಮತದಾರರನ್ನು ಪ್ರಚೋದಿಸುವ ಹೇಳಿಕೆ ನೀಡಬಾರದು. ನಾನು ಜಾತಿ ರಾಜಕಾರಣ ಮತ್ತು ಭಯದ ವಾತವರಣ ನಿರ್ಮಿಸಿಲ್ಲ. ಹೀಗಾಗಿ ತಾಲೂಕಿನ ಸೂಕ್ಷ್ಮತಿ ಸೂಕ್ಷ್ಮ ಸಮಾಜದವರು ನೆಮ್ಮದಿಯಿಂದ ಇದ್ದಾರೆ. ಇಂತಹ ಕೀಳು ಮಟ್ಟದ ಹೇಳಿಕೆ ನೀಡುತ್ತಿರುವ ಇಂತವರಿಗೆ ಚುನಾವಣೆಯಲ್ಲಿಯೇ ಉತ್ತರ ಸಿಗುತ್ತದೆ ಎಂದರು.

ಈ ವೇಳೆ ಪುರಸಭಾ ಸದಸ್ಯರಾದ ಕೆ.ಎಲ್.ಜಗದೀಶ್, ಸಂತೋಷ್‌ಗೌಡ, ಉಮೇಶ್, ಮಾಜಿ ಅಧ್ಯಕ್ಷ ಡಿ. ಕಾಂತರಾಜ್, ಗ್ರಾಪಂ ಮಾಜಿ ಸದಸ್ಯ ಹೋಟೆಲ್ ಮಹದೇವ್ ಸೇರಿದಂತೆ ಇನ್ನಿತರರಿದ್ದರು.

ಉಚಿತ ಸಾಮೂಹಿಕ ವಿವಾಹ

ಸರಗೂರು, ಫೆ.22– ಪಟ್ಟಣದ ಬಿಡಗಲು ಪಡುವಲು ವಿರಕ್ತ ಮಠದಲ್ಲಿ ಮಾ.8, 9ರಂದು ಶ್ರೀಕಾಳಒಡೆಯ ಗುರುಗಳ ಆರಾಧನಾ ಮಹೋತ್ಸವ ಮತ್ತು ಸಾಮೂಹಿಕ ವಿವಾಹ ಆಯೋಜಿಸಲಾಗಿದೆ. ಮಠದಲ್ಲಿ 8ನೇ ವರ್ಷದ ವೀರಶೈವ ಲಿಂಗಾಯತ ವಧು–ವರರ ಉಚಿತ ಸಾಮೂಹಿಕ ವಿವಾಹ ಆಯೋಜಿಸಲಾಗಿದೆ. ಸಮಾಜದ ವಧು–ವರರು ಹೆಸರು ನೋಂದಾಯಿಸಿಕೊಳ್ಳಬಹುದು ಎಂದು ಬಿಡಗಲು ಪಡುವಲು ವಿರಕ್ತಮಠದ ಮಹದೇವಸ್ವಾಮೀಜಿ ತಿಳಿಸಿದ್ದಾರೆ.

ದೊಡ್ಡನಾಯಕರಿಂದ ನಾಯಕ ಸಮಾಜ ಒಡೆಯುವ ಕೆಲಸ

ನಾಯಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜ್ ಆರೋಪ

ಹೆಚ್.ಡಿ.ಕೋಟೆ, ಫೆ22– ಮುಂಬರುವ ಚುನಾವಣೆಯಲ್ಲಿ ಕೋಟೆ ಕ್ಷೇತ್ರದಿಂದ ಸ್ಪರ್ಧಿಸುವ ಹೊರಗಿನ ಅಭ್ಯರ್ಥಿಗಳನ್ನು ನಾಯಕ ಸಮುದಾಯ ಬೆಂಬಲಿಸಬಾರದು ಎಂದು ಹೇಳಿಕೆ ನೀಡುವ ಮೂಲಕ ಮುಖಂಡ ಎಂ.ಸಿ.ದೊಡ್ಡನಾಯಕ ನಾಯಕ ಸಮುದಾಯ ಒಡೆಯುವ ಕೆಲಸ ಮಾಡುತ್ತಿದ್ದಾರೆ ಎಂದು ತಾಲೂಕು ನಾಯಕ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಕ್ಯಾತನಹಳ್ಳಿ ನಾಗರಾಜ್ ಆರೋಪಿಸಿದ್ದಾರೆ.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖಂಡ ಎಂ.ಸಿ.ದೊಡ್ಡನಾಯಕ ಅವರು ನಾನು ತಾಲೂಕು ನಾಯಕ ಸಂಘದ ಅಧ್ಯಕ್ಷನೆಂದು ಹೇಳಿಕೊಂಡು ನಾಯಕ ಸಮುದಾಯ ಒಡೆಯುವ ಕೆಲಸ ಮಾಡುತ್ತಿದ್ದಾರೆ. ಅವರು ನಾಯಕ ಸಂಘದ ಅಧ್ಯಕ್ಷರಲ್ಲ. ನಾಯಕ ಸಮಾಜಕ್ಕೆ ಅವರ ಕೊಡುಗೆ ಶೂನ್ಯ ಎಂದರು.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತದಾರರು ಯಾರನ್ನು ಬೆಂಬಲಿಸುತ್ತಾರೋ ಅವರು ವಿಜಯಶಾಲಿಯಾಗುತ್ತಾರೆ. ಮತದಾರರಿಗೆ ಕ್ಷೇತ್ರದಿಂದ ಸ್ಪರ್ಧಿಸುವ ಹೊರಗಿನ ಅಭ್ಯರ್ಥಿಗಳನ್ನು ಬೆಂಬಲಿಸಬಾರದು ಎಂಬುದು ಸರಿಯಲ್ಲ ಎಂದರು.

ಎಸ್.ಚಿಕ್ಕಮಾದು ಅಭಿಮಾನಿ ಬಳಗದ ಸಂಘದ ಅಧ್ಯಕ್ಷ ರಾಜನಾಯಕ ಮಾತನಾಡಿ, ಮುಖಂಡ ಎಂ.ಸಿ.ದೊಡ್ಡನಾಯಕ ಅವರು ನಾನು ನಾಯಕ ಸಮುದಾಯದ ಅಧ್ಯಕ್ಷನೆಂದು ಸುಳ್ಳು ಹೇಳುವ ಮೂಲಕ ಮಾಡಬಾರದ ಕೆಲಸ ಮಾಡುತ್ತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಹೊರಗಿನವರನ್ನು ಬೆಂಬಲಿಸಬಾರದು ಎಂದು ತಾಲೂಕಿನ ಸಮುದಾಯಕ್ಕೆ ತಿಳಿಸುತ್ತಿರುವ ಇವರು ಈ ಹಿಂದೆ ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಅವರ ಪುತ್ರ ಶಾಸಕ ಅನಿಲ್ ಚಿಕ್ಕಮಾದು ಅವರಿಗೆ ಬೆಂಬಲವಾಗಿ ನಿಂತಿದ್ದರು. ಆ ವೇಳೆ ಅವರ ಜೊತೆಯಲ್ಲೇ ಇದ್ದು ಹಲವು ಕಾಮಗಾರಿಗಳನ್ನು ನಡೆಸಿ, ಹಲವರನ್ನು ಬ್ಲಾಕ್‌ಮೇಲ್ ಮಾಡಿ ಕೋಟಿಗಟ್ಟಲೇ ಹಣ, ಆಸ್ತಿ ಮಾಡಿಕೊಂಡಿದ್ದಾರೆ. ಸದ್ಯದಲ್ಲೇ ಇದನ್ನು ಸಾಕ್ಷಿ ಸಮೇತ ಬಹಿರಂಗಪಡಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ತಾಲೂಕು ನಾಯಕ ಸಂಘದ ಅಧ್ಯಕ್ಷ ಶಂಭುಲಿಂಗ ನಾಯಕ, ದಾಸನಾಯಕ, ಚೆಲುವನಾಯಕ, ಗ್ರಾಪಂ ಅಧ್ಯಕ್ಷ ರಾಜೇಂದ್ರ, ಕೃಷ್ಣನಾಯಕ, ಬೆಟ್ಟನಾಯಕ, ವೇಣು ಇನ್ನಿತರರಿದ್ದರು.

ಬೈಲಕುಪ್ಪೆಯಲ್ಲಿ ಲೋಸರ್ ಹಬ್ಬ ಆಚರಣೆ

ಬೈಲಕುಪ್ಪೆ, ಫೆ. 22– ಪವಿತ್ರ ದಲಾಯಿ ಲಾಮರ ಚಿಂತನೆ ಮತ್ತು ಆಲೋಚನೆಗಳನ್ನು ಅನುಸರಿಸಲು ಭಾರತದಲ್ಲಿರುವ ಟಿಬೆಟಿಯನ್ನರು ಬದ್ಧರಿದ್ದಾರೆ ಎಂದು ಇಂಡೋ– ಟಿಬೆಟಿಯನ್ ಫ್ರೆಂಡ್‌ಶಿಪ್ ಸೊಸೈಟಿ ಸಂಘದ ಅಧ್ಯಕ್ಷ ಬಿ.ವಿ ಜವರೇಗೌಡ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಬೈಲಕುಪ್ಪೆಯ ಟಿಬೆಟಿಯನ್ ವಸಾಹತುವಿನಲ್ಲಿರುವ ದಲಾಯಿಲಾಮ ಅವರ ಅರಮನೆ ಮೈದಾನದಲ್ಲಿ ಏರ್ಪಡಿಸಿದ್ದ ಲೋಸರ್ ಹಬ್ಬದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಟಿಬೆಟಿಯನ್ನರ ಧಾರ್ಮಿಕ ಗುರು ದಲಾಯಿಲಾಮ ಅವರು ಹೊರಡಿಸಿದ್ದ ಹಲವಾರು ಮಾರ್ಗಸೂಚಿಗಳನ್ನು ಎಲ್ಲಾ ಟಿಬೆಟಿಯನ್ ಸಮುದಾಯದವರು ಪರಿಪಾಲನೆಯಿಂದ ಅನುಸರಿಸುತ್ತಿದ್ದು, ದಲೈಲಾಮರ ಮನಸ್ಸನ್ನು ಗೆಲ್ಲುವುದರಲ್ಲಿ ಟಿಬೇಟಿಯನ್ನರ ನಡೆ ಮುಂದಿದೆ. ಕಳೆದ ಎರಡು ವರ್ಷಗಳಿಂದ ಯಾವುದೇ ಹೊಸ ವರ್ಷವನ್ನು ಆಚರಣೆ ಮಾಡದೆ ಕೊರೊನಾ ಸಂದರ್ಭದಲ್ಲಿ ಬಡವರಿಗೆ, ನಿರ್ಗತಿಕರಿಗೆ ಸಹಾಯ ಮಾಡಿ, ಮಾನವೀಯತೆ ಮೆರೆದು ಭಾರತ ದೇಶಕ್ಕೆ ನಾವು ನಿಮ್ಮ ಮಕ್ಕಳೆಂದು ತೋರಿಸುವಲ್ಲಿ ಅವರ ಕಾರ್ಯ ಚಟುವಟಿಕೆಗಳು ಅತಿ ಮುಖ್ಯವಾಗಿವೆ ಎಂದು ಹೇಳಿದರು.

ಕಳೆದ ವರ್ಷ ದ್ವಿತೀಯ ಪಿಯುಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ತೇರ್ಗಡೆಗೊಂಡ ವಿದ್ಯಾರ್ಥಿಗಳಿಗೆ 50,000 ಚೆಕ್ ಹಸ್ತಾಂತರ ಮಾಡಿದರು. ಬೈಲಕುಪ್ಪೆ ಟಿಬೆಟಿಯನ್ ಆಡಳಿತ ವರ್ಗದ ಮಂಡಳಿಯ ಅಧ್ಯಕ್ಷರು, ಉಪಾಧ್ಯಕ್ಷರು, ಟಿಬೇಟಿಯನ್ ಶಾಲೆಯ ಪ್ರಾಂಶುಪಾಲರು, ಸುತ್ತಮುತ್ತಲಿನ ಬೌದ್ಧ ಮಂದಿರದ ಹಿರಿಯ ಬೌದ್ಧ ಬಿಕ್ಷುಗಳು, ಪಿಎಸ್‌ಐ ಬಸವರಾಜು ಸಿಬ್ಬಂದಿಗಳಾದ ಮಹದೇವಪ್ಪ, ಗೋಪಾಲ್ ಸೇರಿದಂತೆ ಇತರರು ಇದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1 ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ರಾ.7.15ಕ್ಕೆ, ರಾ.9.50ಕ್ಕೆ, ಪಠಾಣ್ (ಹಿಂ): ಸಂ.4.25ಕ್ಕೆ

ಸ್ಕ್ರೀನ್ 2 ವಾತಿ (ತ): ಬೆ.10.35ಕ್ಕೆ, ಕ್ರಾಂತಿ (ಕ): ಮ.1.20ಕ್ಕೆ, ಎಸ್‌ಎಲ್‌ವಿ (ಕ): ಸಂ.4.30ಕ್ಕೆ, ಪಠಾಣ್ (ಹಿಂ): ರಾ.7ಕ್ಕೆ, ಒಂದೊಳ್ಳೆ ಲವ್ ಸ್ಟೋರಿ (ಕ): ರಾ.9.50ಕ್ಕೆ.

ಸ್ಕ್ರೀನ್ 3 ಬರೀ 10% ಬಡ್ಡಿ (ಕ): ಬೆ.10.40ಕ್ಕೆ, ಶಿಯೊಸ್ (ತ): ಮ.1.30ಕ್ಕೆ, ದೊಡ್ಡಟ್ಟಿ ಬೋರೇಗೌಡ (ಕ): ಸಂ.4.35ಕ್ಕೆ, ಲವ್‌ಬರ್ಡ್ಸ್ (ಕ): ರಾ.7.10ಕ್ಕೆ, ಎಂಕಿಲುಮ್ ಚಂದ್ರಿಕೆ (ಮ): ರಾ.9.50ಕ್ಕೆ.

ಸ್ಕ್ರೀನ್ 4 ಶೆಹಜಾದಾ (ಹಿಂ): ಬೆ.10.40ಕ್ಕೆ, ರಾ.7.05ಕ್ಕೆ, ರಾ.10ಕ್ಕೆ, ವಾತಿ (ತ): ಮ.1.30ಕ್ಕೆ, ಸಂ.4.20ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1 ಶೆಹಜಾದಾ (ಹಿಂ): ಬೆ.10.10ಕ್ಕೆ, ಮ.1.15ಕ್ಕೆ, ಸಂ.4.20ಕ್ಕೆ, ರಾ.7.25ಕ್ಕೆ, ರಾ.10.30ಕ್ಕೆ.

ಸ್ಕ್ರೀನ್ 2 ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಬೆ.11ಕ್ಕೆ, ಮ.1.45ಕ್ಕೆ, ಸಂ.4.30ಕ್ಕೆ, ರಾ.7.15ಕ್ಕೆ, ರಾ.10ಕ್ಕೆ.

ಸ್ಕ್ರೀನ್ 3 ರೋಮಾಂಚಂ(ಕ): ಬೆ.10.50ಕ್ಕೆ, ಲವ್ ಬರ್ಡ್ಸ್ (ಕ): ಮ.1.35ಕ್ಕೆ, ರಾ.7.15ಕ್ಕೆ, ವಾತಿ (ತ): ಸಂ.4.20ಕ್ಕೆ, ಶಿಯೊಸ್ (ತ): ರಾ.10ಕ್ಕೆ.

ಸ್ಕ್ರೀನ್ 4 ಬರೀ 10% ಬಡ್ಡಿ (ಕ): ಬೆ.11.20ಕ್ಕೆ, ದೊಡ್ಡಟ್ಟಿ ಬೋರೇಗೌಡ (ಕ): ಮ.2.10ಕ್ಕೆ, ಸಕೂಚಿ (ಕ): ಸಂ.4.50ಕ್ಕೆ, ರೋಮಾಂಚಂ (ಮ): ರಾ.7.35ಕ್ಕೆ, ಪಠಾಣ್ (ಹಿಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1 ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ

ಸ್ಕ್ರೀನ್ 2 ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.

ಸ್ಕ್ರೀನ್ 3 ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.

ಸ್ಕ್ರೀನ್ 4 ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ,

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ವಾತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ವಾದಿ (ತ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್‌ಒನ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಶೆಹಜಾದಾ (ಹಿ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಲವ್ ಬರ್ಡ್ಸ್ (ಕ)	2 ಪ್ರದರ್ಶನಗಳು
ಕ್ರಾಂತಿ (ಕ)	2 ಪ್ರದರ್ಶನಗಳು
ಗಾಯಿತ್ರಿ	
ಪಟಾಣ್ (ಹಿ)	4 ಪ್ರದರ್ಶನಗಳು
ರಾಜ್‌ಕಮಲ್	
ಬಕಾಸುರನ್ (ತ)	4 ಪ್ರದರ್ಶನಗಳು
ಸಂಗಂ	
ಬರೀ 10% ಬಡ್ಡಿ–2 ಪ್ರದರ್ಶನ (ಕ) ಒಂದೊಳ್ಳೆ ಲವ್ ಸ್ಟೋರಿ (ಕ)	2 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಪಠಾಣ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಶಿಯೋಸ್ (ಕ)	4 ಪ್ರದರ್ಶನಗಳು

ಬೈಕ್ ಡಿಕ್ಕಿ: ಪಾದಚಾರಿ ಸಾವು

ಸರಗೂರು, ಫೆ.22– ಬೈಕ್ ಡಿಕ್ಕಿ ಹೊಡೆದ ಪರಿಣಾಮ ವ್ಯಕ್ತಿಯೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಬಿ.ಮಟಕೆರೆ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ವೆಂಕಟಸ್ವಾಮಿ ನಿವಾಸಿ ಅವರ ಪುತ್ರ ನಾಗೇಂದ್ರ(47) ಸಾವನ್ನಪ್ಪಿದವರು. ಈತ ಮಂಗಳವಾರ ರಾತ್ರಿ ಊಟ ಮುಗಿಸಿಕೊಂಡು ತನ್ನ ಸ್ನೇಹಿತರೊಂದಿಗೆ ವಾಯುವಿಹಾರಕ್ಕೆ ತೆರಳಿದ್ದ ವೇಳೆ ಹಿರೇಹಳ್ಳಿ ಗ್ರಾಮದ ನಿವಾಸಿ ಮನೋಜ್ ಬೈಕ್‌ನಲ್ಲಿ ಹಿಂಬದಿಯಿಂದ ಡಿಕ್ಕಿ ಹೊಡೆದ ಪರಿಣಾಮ ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ಈ ಸಂಬಂಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಹಣಕಾಸು ಸಂಸ್ಥೆ ಕಿರುಕುಳಕ್ಕೆ ರೈತ ಬಲಿ



ನಂಜನಗೂಡು, ಫೆ.22– ಖಾಸಗಿ ಹಣಕಾಸು ಸಂಸ್ಥೆ ಕಿರುಕುಳ ತಾಳಲಾರದೆ ರೈತನೋರ್ವ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಚಿಕ್ಕ ಕವಲಂದೆ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಚಿಕ್ಕ ಕವಲಂದೆ ಗ್ರಾಮದ ಮಹೇಶ(48) ಆತ್ಮಹತ್ಯೆ ಮಾಡಿ ಕೊಂಡವರು. ಈತ ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿರುವ ಖಾಸಗಿ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಕವಲಂದೆಯಲ್ಲಿ ಜಮೀನು ಇತ್ತು. ಮಹೇಶ ಚೆನ್ನೈ ಮೂಲದ ಮೈಸೂರಿನಲ್ಲಿರುವ ಖಾಸಗಿ ಹಣಕಾಸು ಸಂಸ್ಥೆಯೊಂದರಲ್ಲಿ ಪತ್ನಿ ಗಿರಿಜಾಂಬ ಹೆಸರಿನಲ್ಲಿ 3 ಲಕ್ಷ ರೂ. ಸಾಲ ಪಡೆದಿದ್ದರು. ಸಮಯಕ್ಕೆ ಸರಿಯಾಗಿ ಕಂತನ್ನು ಪಾವತಿಸುತ್ತಿದ್ದರು. ಆದರೆ ಕಾರಣಾಂತರದಿಂದ ಕಳೆದ 2 ತಿಂಗಳಿಂದ ಕಂತು ಪಾವತಿಸಿರಲಿಲ್ಲ. ಹಣ ಪಾವತಿಸುವಂತೆ ಹಣಕಾಸು ಸಂಸ್ಥೆ ನೀಡಿದ ಕಿರುಕುಳ ತಾಳಲಾರದೇ ಮಹೇಶ್ ಮಂಗಳವಾರ ಸಂಜೆ ತಮ್ಮ ಜಮೀನಿನಲ್ಲಿ ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಬುಧವಾರ ಬೆಳಗ್ಗೆ ಕುಟುಂಬದವರಿಗೆ ವಿಷಯ ತಿಳಿದಿದ್ದು, ತಕ್ಷಣ ಪೊಲೀಸರಿಗೆ ಮಾಹಿತಿ ನೀಡಲಾಗಿದೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕವಲಂದೆ ಠಾಣೆ ಪೊಲೀಸರು ಪರಿಶೀಲನೆ ನಡೆಸಿ, ಶವವನ್ನು ಮರಣೋತ್ತರ ಪರೀಕ್ಷೆಗೆ ಕೆ.ಆರ್.ಆಸ್ಪತ್ರೆಗೆ ರವಾನಿಸಿದರು. ಈ ಸಂಬಂಧ ಕವಲಂದೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವೇಶ್ಯಾವಾಟಿಕೆ: ದೂರು ದಾಖಲು

ತಿ.ನರಸೀಪುರ ಫೆ.22– ವೇಶ್ಯಾವಾಟಿಕೆ ನಡೆಯುತ್ತಿದ್ದ ಲಾಡ್ಜ್‌ಗಳ ಮೇಲೆ ದಾಳಿ ನಡೆಸಿದ ಪಟ್ಟಣದ ಪೊಲೀಸರು ವಸತಿ ಗೃಹಗಳ ವ್ಯವಸ್ಥಾಪಕರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ಪಟ್ಟಣದ ಮುರುಗನ್ ಚಿತ್ರಮಂದಿರದ ಎದುರಿನ ಕೃಷ್ಣ ಲಾಡ್ಜ್ ಹಾಗೂ ಕೆಎಸ್‌ಆರ್‌ಟಿಸಿ ಬಸ್ ಸ್ಟ್ಯಾಂಡ್ ಎದುರಿನ ಶಿವ ಶಕ್ತಿ ಲಾಡ್ಜ್‌ಗಳಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದೆ ಎಂಬ ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಬಿ.ಮಹೇಶ್ ಹಾಗೂ ಸಿಬ್ಬಂದಿ ಶಿವಶಕ್ತಿ ಲಾಡ್ಜ್ ವ್ಯವಸ್ಥಾಪಕ ಮೋಹನ್, ಕೃಷ್ಣ ಲಾಡ್ಜ್ ವ್ಯವಸ್ಥಾಪಕ ನಿಂಗರಾಜು ವಿರುದ್ಧ ಪ್ರಕರಣ ದಾಖಲಿಸಿದ್ದಾರೆ. ವೇಶ್ಯಾವಾಟಿಕೆಯಲ್ಲಿ 7 ಮಂದಿ ಯುವಕ, ಯುವತಿಯರು ಪಾಲ್ಗೊಂಡಿದ್ದಾರೆನ್ನಲಾಗಿದ್ದು, ಯುವಕರನ್ನು ಜಾಮೀನಿನ ಮೇಲೆ ಬಿಡಲಾಗಿದ್ದು, ಯುವತಿಯರನ್ನು ಸಾಂತ್ವನ ಕೇಂದ್ರಕ್ಕೆ ಕಳುಹಿಸಲಾಗಿದೆ ಎಂದು ತಿಳಿದು ಬಂದಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 10ರಲ್ಲಿ


ಸ್ನೇಹಜೀವಿ, ಖ್ಯಾತ ಉದ್ಯಮಿಗಳಾದ
ಸ್ವೀಟ್ ಮಹೇಶ್
ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು
VISMAYA ADVERTISERS


ಅಂಬಾರಿ ಚಿಟ್ಸ್
ಅಂಬಾರಿ ಕನ್ವೆನ್ಷನ್ ಹಾಲ್
ಎಸ್.ಎಲ್.ವಿ. ಸ್ಟೋನ್ ಕ್ರಷರ್ ಮಾಲೀಕರಾದ
ಶ್ರೀ ಸ್ವೀಟ್ ಮಹೇಶ್ ರವರಿಗೆ
ಜನುಮದಿನದ ಶುಭಾಶಯಗಳು
ಶುಭಕೋರುವವರು :
ಶ್ರೀ ದಿನೇಶ್ (JD)
ದಾಸನಕೊಪ್ಪಲು